

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 2 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 341 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4





ದಿನಗೂಲಿ ನೌಕರರಿಗೆ 5 ಲಕ್ಷದವರೆಗೆ
ನಗದು ರಹಿತ ಆರೋಗ್ಯ ಯೋಜನೆ

ಬೆಂಗಳೂರು, ಏ.1– ರಾಜ್ಯದ ವಿವಿಧ ಇಲಾಖೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅರ್ಹ ದಿನಗೂಲಿ ನೌಕರರು ಮತ್ತು ಅವರ ಅವಲಂಬಿತರಿಗೆ 5 ಲಕ್ಷ ರೂ.ವರೆಗಿನ ನಗದು ರಹಿತ ಆರೋಗ್ಯ ಯೋಜನೆ ವಿಸ್ತರಿಸಿ ರಾಜ್ಯ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ.





ಈ ಹಿಂದೆ 2025ರ ಜೂನ್ 24 ರಂದು ಹೊರಡಿಸಲಾಗಿದ್ದ ಆದೇಶದನ್ವಯ, ಸುಮಾರು 3 ಲಕ್ಷ ಗುತ್ತಿಗೆ, ಹೊರಗುತ್ತಿಗೆ ಹಾಗೂ ಗೌರವ ಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಈ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಈ ಸೌಲಭ್ಯವನ್ನು ತಮಗೂ ನೀಡಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಿ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಸಂಘವು ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಈ ಮನವಿಯನ್ನು ಪುರಸ್ಕರಿಸಿರುವ ಸರ್ಕಾರ, ಎಲ್ಲಾ ತಾತ್ಕಾಲಿಕ ಉದ್ಯೋಗಿಗಳಿಗೂ ಆರೋಗ್ಯ ಭದ್ರತೆ ನೀಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದೆ.

ಈ ಯೋಜನೆ ಪ್ರಕಾರ ನೌಕರರು ಮತ್ತು ಅವರ ಅವಲಂಬಿತರಿಗೆ ವಾರ್ಷಿಕ 5,00,000 ರೂ. ವರೆಗೆ ನಗದು ರಹಿತ ಚಿಕಿತ್ಸೆ ಲಭ್ಯವಿರುತ್ತದೆ. ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ದಿನಗೂಲಿ ನೌಕರರು ಮತ್ತು ಅವರ ಕುಟುಂಬದ ಸದಸ್ಯರು ಈ ಯೋಜನೆಯ ಫಲಾನುಭವಿಗಳು.

ಈ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮಾರ್ಚ್ 31, 2026 ರಂದು ಈ ಆದೇಶವನ್ನು ಹೊರಡಿಸಿದೆ. ಸರ್ಕಾರದ ಈ ನಿರ್ಧಾರದಿಂದಾಗಿ ಸಾವಿರಾರು ದಿನಗೂಲಿ ನೌಕರರ ಕುಟುಂಬಗಳಿಗೆ ತುರ್ತು ಚಿಕಿತ್ಸೆಯ ಸಮಯದಲ್ಲಿ ಆರ್ಥಿಕ ನೆರವು ಸಿಗುವಂತಾಗಿದೆ.

ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರವಿದ್ದರೂ ಹೊರ ರಾಜ್ಯದಲ್ಲಿ 'ದಂಡ' ಕಟ್ಟುವುದಕ್ಕೆ ಇನ್ನು ಬ್ರೇಕ್



ಬೆಂಗಳೂರು, ಏ.1– ಕರ್ನಾಟಕದ ವಾಹನ ಮಾಲೀಕರು ಎದುರಿಸುತ್ತಿದ್ದ ದೀರ್ಘಕಾಲದ ಸಮಸ್ಯೆಯೊಂದಕ್ಕೆ ಈಗ ಅಧಿಕೃತವಾಗಿ ಪರಿಹಾರ ಸಿಕ್ಕಿದೆ. ಇನ್ನು ರಾಜ್ಯದ ವಾಹನಗಳ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ಅರ್ಥಾತ್ ಪಿಯುಸಿಸಿ ಮಾಹಿತಿಯನ್ನು ಕೇಂದ್ರ ಸರ್ಕಾರದ ವಾಹನ್ ಪೋರ್ಟಲ್‌ನೊಂದಿಗೆ ಸಂಯೋಜಿಸಲು ಕರ್ನಾಟಕ ಮುಂದಾಗಿದ್ದು, ಈ ಮೂಲಕ ವಾಹನ ಸವಾರರು ಟ್ರಾಫಿಕ್ ಫೈನ್‌ನಲ್ಲಿ ಸಾವಿರಾರು ರೂಪಾಯಿಗಳವರೆಗೆ ಉಳಿಸಬಹುದಾಗಿದೆ.

ಇಲ್ಲಿಯವರೆಗೆ ಕರ್ನಾಟಕದ ವಾಹನಗಳು ಪಿಯುಸಿಸಿ ಪ್ರಮಾಣಪತ್ರವನ್ನು ಹೊಂದಿದ್ದರೂ ಅವುಗಳ ಮಾಹಿತಿ ಕೇಂದ್ರ ಸರ್ಕಾರದ ವಾಹನ್ ಪೋರ್ಟಲ್‌ನಲ್ಲಿ ಸೇರ್ಪಡೆಯಾಗಿರಲಿಲ್ಲ. ಇದರಿಂದಾಗಿ ಕರ್ನಾಟಕ ನೋಂದಣಿಯ ವಾಹನಗಳು ಮಹಾರಾಷ್ಟ್ರ, ಗೋವಾ, ಕೇರಳ ಅಥವಾ ತಮಿಳುನಾಡಿನಂತಹ ರಾಜ್ಯಗಳಿಗೆ ಹೋದಾಗ ಅಲ್ಲಿನ ಟ್ರಾಫಿಕ್ ■6ನೇ ಪುಟಕ್ಕೆ

ಹೋಗಿ ನಾನೇ ಮುಖ್ಯಮಂತ್ರಿ... ನಾವೇ ಮುಖ್ಯಮಂತ್ರಿ...
ಇದೇನಿದು ಸಿದ್ದರಾಮಯ್ಯರ ಹೊಸ ವರಸೆ!



ಬೆಂಗಳೂರು, ಏ.1(ಕೆಎಂಶಿ)– ಪೂರ್ಣಾವಧಿಗೆ ನಾನೇ ಮುಖ್ಯಮಂತ್ರಿ ಎನ್ನುತ್ತಿದ್ದ ಸಿದ್ದರಾಮಯ್ಯ, ಇದೀಗ ತಮ್ಮ ವರಸೆ ಬದಲಿಸಿ, ಮುಂದಿನ ಎರಡು ವರ್ಷ ನಾವೇ ಮುಖ್ಯಮಂತ್ರಿ ಆಗಿರುತ್ತೇವೆ ಎಂದಿದ್ದಾರೆ.

ನನ್ನ ಸರ್ಕಾರ ಎನ್ನುತ್ತಿದ್ದವರು, ನಮ್ಮದೇ ಸರ್ಕಾರ ಇರುತ್ತದೆ. ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿದರೆ, ಅಭಿವೃದ್ಧಿ ಕಾರ್ಯಗಳ ಕೈಗೊಳ್ಳಲು ಸಹಕಾರಿಯಾಗಲಿದೆ ಎಂದಿದ್ದಾರೆ.

ಮಂಗಳವಾರ ಬಾಗಲಕೋಟೆ ವಿಧಾನಸಭಾ ಉಪಚುನಾವಣಾ ಪ್ರಚಾರ ವೇಳೆ ಹಾಗೂ ಪತ್ರಿಕಾಗೋಷ್ಠಿಗಳಲ್ಲಿ ನಾನೇ ಎಂಬುದನ್ನು ಬಿಟ್ಟು 'ನಮ್ಮದೇ' ಎಂಬ ಪದ ಬಳಕೆ ಮಾಡಿದ್ದಾರೆ.

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಮುಖ್ಯಮಂತ್ರಿ, ಕಳೆದ ನಾಲ್ಕು ದಿನಗಳಿಂದ ಈ ಕ್ಷೇತ್ರಗಳಲ್ಲಿ ಬಿರುಸಿನ ಪ್ರಚಾರ ಕೈಗೊಂಡಿದ್ದಾರೆ.

ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿದರೆ ನಮ್ಮ ಸರ್ಕಾರಕ್ಕೆ ಮತ್ತಷ್ಟು ಬಲ ಬರುತ್ತದೆ ಎಂಬ ಮಾತುಗಳನ್ನು ಆಡಿದ್ದಾರೆ.

ಕಳೆದ ಮೂರು ದಿನಗಳ ಹಿಂದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅಧಿನಾಯಕ ರಾಹುಲ್ ಗಾಂಧಿ ಭೇಟಿ ಮಾಡಿ, ಕರ್ನಾಟಕ ಕಾಂಗ್ರೆಸ್‌ನಲ್ಲಿನ ಗೊಂದಲ ಬಗೆಹರಿಸಲು ನಿರ್ಣಯ ಕೈಗೊಳ್ಳಿ ಎಂಬುದಾಗಿ ಮನವಿ ಮಾಡಿದ್ದಾರೆ.

ಖರ್ಗೆ ಸಲಹೆಗೆ, ಪಂಚರಾಜ್ಯಗಳ ವಿಧಾನಸಭಾ ಚುನಾವಣೆ ನಂತರ ಈ ಬಗ್ಗೆ ನಾವು ತೀರ್ಮಾನ ಕೈಗೊಳ್ಳೋಣ ಎಂಬ ಭರವಸೆ ನೀಡಿದ್ದಾರೆ.

ಕೆಪಿಸಿಸಿ ಅಧ್ಯಕ್ಷರಾಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪಂಚರಾಜ್ಯಗಳ ವಿಧಾನಸಭೆಗಳಿಗೆ ಮತದಾನ ಮುಗಿಯುತ್ತಿದ್ದಂತೆ ತಮಗೆ ಮುಖ್ಯ ಮಂತ್ರಿ ಪಟ್ಟ ಕೊಡಿಸಿ ಎಂದು ವರಿಷ್ಠರಲ್ಲಿ ಪಟ್ಟು ಹಿಡಿದಿದ್ದಾರೆ. ಪಕ್ಷ ನೀಡಿದ ಭರವಸೆಯಂತೆ ಕಳೆದ ನವೆಂಬರ್ 20ಕ್ಕೆ ಅಧಿಕಾರ ಹಸ್ತಾಂತರ ಆಗಬೇಕಿತ್ತು. ಅದು ಮುಗಿದು 5 ತಿಂಗಳು ಕಳೆದಿದೆ. ಒಂದಲ್ಲಾ ಒಂದು ನೆಪ ಮುಂದಿಟ್ಟುಕೊಂಡು ಸಿದ್ದರಾಮಯ್ಯ ಅವರನ್ನು ಅಧಿಕಾರದಲ್ಲಿ ಮುಂದುವರೆಸಲಾಗುತ್ತಿದೆ. ಪಕ್ಷದ ಬಹುತೇಕ ಶಾಸಕರು ಅಧಿಕಾರ ಹಂಚಿಕೆ ಆಗಬೇಕೆಂದು ಬಯಸಿದ್ದಾರೆ. ಮತ್ತಷ್ಟು ವಿಳಂಬ ಮಾಡದೆ, ಮತದಾನ ಮುಗಿಯುತ್ತಿದ್ದಂತೆ ತಮಗೆ ಅಧಿಕಾರ ಕೊಡಿಸಿ ಎಂದು ಎಐಸಿಸಿಯ ಎಲ್ಲಾ ಪ್ರಮುಖ ನಾಯಕರ ಬಳಿಯೂ ಮನವಿ ಮಾಡಿದ್ದಾರೆ.

ಪಂಚರಾಜ್ಯಗಳ ಚುನಾವಣೆ ಕುರಿತಂತೆ ಚರ್ಚಿಸಲು ಖರ್ಗೆ ಅವರು ರಾಹುಲ್ ಭೇಟಿ ಮಾಡಿದ ಸಂದರ್ಭದಲ್ಲಿ ಕರ್ನಾಟಕ ಕಾಂಗ್ರೆಸ್‌ನಲ್ಲಿನ ಗೊಂದಲದ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ.

ಚುನಾವಣೆ ಮುಗಿದ ನಂತರ ಗೊಂದಲ ಸರಿಪಡಿಸೋಣ ಎಂಬ ರಾಹುಲ್ ಮಾತು ಮುಖ್ಯಮಂತ್ರಿ ಅವರಿಗೂ ತಲುಪಿರಬಹುದು. ಈ ಬೆಳವಣಿಗೆ ನಂತರವೇ 'ನಾನು' ಎನ್ನುವುದನ್ನು ಬಿಟ್ಟು 'ನಾವು' ಎನ್ನುತ್ತಿದ್ದಾರೆ ಎಂಬುದು ಪಕ್ಷದ ವಲಯಗಳಲ್ಲಿ ಕೇಳಿಬರುತ್ತಿರುವ ಮಾತು.

ಅತ್ತ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹ ಅಸ್ಸಾಂ ಉಸ್ತುವಾರಿ ವಹಿಸಿಕೊಂಡು ಉತ್ಸಾಹದಿಂದಲೇ ತಮ್ಮ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ.

ಮೈಸೂರಿನ ಮೂರು ಲಕ್ಷ ಮನೆಗಳಿಗೆ ನಾಲ್ಕೈದು ವರ್ಷದಲ್ಲಿ ಗ್ಯಾಸ್ ಸಂಪರ್ಕ

ಥಿಂಕ್ ಗ್ಯಾಸ್ ಕಂಪನಿಯ ಉಪಾಧ್ಯಕ್ಷ ನಿತೀನ್ ಮಾಹಿತಿ

• ಈಗಾಗಲೇ 5,400 ಮನೆಗಳಿಗೆ ಗ್ಯಾಸ್ ಕನೆಕ್ಷನ್ • 43,400 ಮನೆಗಳ ಪ್ರಕ್ರಿಯೆಗಾಗಿ ನೋಂದಣಿ • 6 ತಿಂಗಳಲ್ಲಿ 10 ಸಾವಿರ ಮನೆಗಳಿಗೆ ಸಂಪರ್ಕ ಉದ್ದೇಶ • ಯುದ್ಧದಿಂದ ಗ್ಯಾಸ್ ಪೂರೈಕೆಗೆ ಯಾವ ಸಮಸ್ಯೆಯೂ ಆಗಿಲ್ಲ



ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಬುಧವಾರ ಥಿಂಕ್ ಗ್ಯಾಸ್ ಉಪಾಧ್ಯಕ್ಷ ನಿತೀನ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಏ.1(ಬಿಎಲ್‌ಯು)– ಮೈಸೂರು ನಗರದ ಮೂರು ಲಕ್ಷ ಮನೆಗಳಿಗೆ ಇನ್ನು ನಾಲ್ಕೈದು ವರ್ಷದೊಳಗೆ ಪೈಪ್ ಲೈನ್ ಮೂಲಕ ಗ್ಯಾಸ್ (ಪಿಎನ್‌ಜಿ– ಪೈಪ್ಡ್ ನ್ಯಾಚುರಲ್ ಗ್ಯಾಸ್) ಸಂಪರ್ಕ ಕಲ್ಪಿಸಲಾಗುವುದು ಎಂದು ಥಿಂಕ್ ಗ್ಯಾಸ್ ಪ್ರೈವೇಟ್ ಲಿಮಿಟೆಡ್ ಉಪಾಧ್ಯಕ್ಷ ನಿತೀನ್ ತಿಳಿಸಿದರು.

ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ನಗರಕ್ಕೆ ಗ್ಯಾಸ್ ಸಂಪರ್ಕ ಕಲ್ಪಿಸಲು ಬೆಂಗಳೂರಿನ ಬಿಡದಿಯಿಂದ ಮೈಸೂರಿನ 160 ಕಿಲೋ ಮೀಟರ್‌ವರೆಗೆ ಸ್ಟೀಲ್ ಪೈಪ್ ಲೈನ್ ಅಳವಡಿಸಲಾಗಿದೆ ಎಂದು ಹೇಳಿದರು.

ಈಗಾಗಲೇ ಮೈಸೂರು ನಗರದ 5,400 ಸಾವಿರ ಮನೆಗಳಿಗೆ, 14 ಕೈಗಾರಿಕೆಗಳಿಗೆ ಗ್ಯಾಸ್ ಸಂಪರ್ಕ ಕಲ್ಪಿಸಲಾಗಿದೆ ಈ ಮೂಲಕ 242 ಕಿಲೋ ಮೀಟರ್ ಗ್ಯಾಸ್ ಪೈಪ್ ಲೈನ್ ಅಳವಡಿಸಿದ್ದೇವೆ. ಈಗಾಗಲೇ ಗ್ಯಾಸ್ ಸಂಪರ್ಕಬೇಕೆಂದು 43,400 ಮನೆಯವರು ನೋಂದಣಿ ಮಾಡಿಸಿಕೊಂಡಿದ್ದಾರೆ. ಇದರಲ್ಲಿ ಇನ್ನು ಆರು ತಿಂಗಳ ಒಳಗೆ 10 ಸಾವಿರ ಮನೆಗಳಿಗೆ ಗ್ಯಾಸ್ ಸಂಪರ್ಕ ಕಲ್ಪಿಸುತ್ತೇವೆ ಎಂದು ನಿತೀನ್ ಮಾಹಿತಿ ನೀಡಿದರು. ಪೈಪ್‌ಲೈನ್ ಅಳವಡಿಸಲು ಸರ್ಕಾರ ಹಾಗೂ ನಗರ ಪಾಲಿಕೆ ಮಟ್ಟದಲ್ಲಿ ಹಲವು ಕಾನೂನಾತ್ಮಕ ಪ್ರಕ್ರಿಯೆ ಪೂರೈಸಬೇಕಾದ ■6ನೇ ಪುಟಕ್ಕೆ

ಬಟ್ಟೆ ಬ್ಯಾಗ್ ಖರೀದಿಯಲ್ಲಿ ಭಾರೀ ಅಕ್ರಮ ಆರೋಪ
ರೋಹಿಣಿ ಸಿಂಧೂರಿ ವಿರುದ್ಧ ತನಿಖೆ ಪೂರ್ವಾನುಮತಿಗೆ ಹೈಕೋರ್ಟ್ ಅಸ್ತು

ಬೆಂಗಳೂರು, ಏ.1– ಪರಿಸರ ಸ್ನೇಹಿ, ಬಟ್ಟೆಯ ಕೈಚೀಲಗಳನ್ನು ಖರೀದಿಸುವ ಪ್ರಕ್ರಿಯೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಅಕ್ರಮ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲೆಯ ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವ ಪೂರ್ವಾನುಮತಿಗೆ ಮುಂದಾಗುವಂತೆ ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.



ರೋಹಿಣಿ ಸಿಂಧೂರಿ


ಈ ಸಂಬಂಧ ಮೈಸೂರಿನ ವಕೀಲ ಎನ್.ಆರ್. ರವಿಚಂದ್ರೇಗೌಡ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕ ಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, ರೋಹಿಣಿ ಸಿಂಧೂರಿ ವಿರುದ್ಧ ತನಿಖೆ ಕೈಗೊಳ್ಳಬೇಕೆಂಬ ಅರ್ಜಿದಾರರ ಪೂರ್ವಾನುಮತಿ ಕೋರಿಕೆಯನ್ನು ನಿರಾಕರಿಸಿದ್ದ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಆದೇಶವನ್ನು ರದ್ದುಗೊಳಿಸಿದೆ. ಈ ಆದೇಶದ ಪ್ರತಿ ಸ್ವೀಕರಿಸಿದ ದಿನದಿಂದ 4 ವಾರಗಳಲ್ಲಿ ನ್ಯಾಯದ ■6ನೇ ಪುಟಕ್ಕೆ

> **ಪರಿಸರ ಸ್ನೇಹಿ ಬಟ್ಟೆ ಕೈಚೀಲಗಳ ಖರೀದಿ ಪ್ರಕ್ರಿಯೆಯಲ್ಲಿ ನಡೆದ ಕೋಟ್ಯಾಂತರ ರೂ. ಹಗರಣದಲ್ಲಿ ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಆದೇಶಿಸಿರುವ ಹೈಕೋರ್ಟ್ ತೀರ್ಪು ಸ್ವಾಗತಾರ್ಹ. ಈ ಹಿಂದೆ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ–1988ರ ಕಲಂ 17ಎ ಅನ್ವಯ ತನಿಖೆಗೆ ರಾಜ್ಯ ಸರ್ಕಾರ ಅನುಮತಿ ಕೋರಲಾಗಿತ್ತು. ಆದರೆ, ರಾಜ್ಯ ಸರ್ಕಾರ ನಿರಾಕರಿಸಿತ್ತು. ಇದೀಗ ಹೈಕೋರ್ಟ್ ಮಧ್ಯಪ್ರವೇಶಿಸಿ ತನಿಖೆಗೆ ಆದೇಶಿಸಿರುವುದು ಉತ್ತಮ ಬೆಳವಣಿಗೆ**
>
> **- ಎನ್.ಆರ್.ರವಿಚಂದ್ರೇಗೌಡ, ದೂರುದಾರರು ಹಾಗೂ ಜೆಡಿಎಸ್ ರಾಜ್ಯ ವಕ್ತಾರರು,**

ವಿಶ್ವಾಸದ್ರೋಹಕ್ಕೆ ಮತ್ತೊಂದು ಹೆಸರು ಸಿದ್ದರಾಮಯ್ಯ

ಉಪ ಚುನಾವಣೆ ಗೆದ್ದರೆ ಕಾಂಗ್ರೆಸ್‌ನಿಂದ ಮತ್ತಷ್ಟು ಭ್ರಷ್ಟಾಚಾರ: ಬಿಎಸ್‌ವೈ ವಾಗ್ದಾಳಿ

ಬೆಂಗಳೂರು, ಏ.1– ನಂಬಿಕೆ ಮತ್ತು ವಿಶ್ವಾಸದ್ರೋಹಕ್ಕೆ ಮತ್ತೊಂದು ಹೆಸರೇ ಸಿದ್ದರಾಮಯ್ಯ. ಮುಖ್ಯಮಂತ್ರಿಯಾದ ನಂತರ, ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಹಗಲು ದರೋಡೆ – ವರ್ಗಾವಣೆ, ಕಮಿಷನ್ ಮತ್ತು ಹಗರಣಗಳಲ್ಲಿ ನಿರತವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.



ಯಡಿಯೂರಪ್ಪ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದ ಇತಿಹಾಸದಲ್ಲಿ ಅತೀ ಭ್ರಷ್ಟ ಸರ್ಕಾರ ಇದಾಗಿದೆ. ಕಾಂಗ್ರೆಸ್ ಸರ್ಕಾರ ಮುಡಾ ಹಗರಣ, ವಾಲ್ಮೀಕಿ ನಿಗಮದ ಹಗರಣಗಳನ್ನು ನಡೆಸಿದೆ. ರಾಜ್ಯದಲ್ಲಿ ತೆರಿಗೆ ಭಯೋತ್ಪಾದನೆ ಶುರುವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲ ಬಜೆಟ್‌ನಲ್ಲಿ ಅಬಕಾರಿ ತೆರಿಗೆ ಹೆಚ್ಚಳ ಮಾಡಿದ್ದರು. ನಂತರ ಹಾಲಿನ ದರ, ವಿದ್ಯುತ್ ದರ ಹೆಚ್ಚಳ ಮಾಡಿದ್ದಾರೆ. 3 ವರ್ಷದಲ್ಲಿ 60 ಸಾವಿರ ಕೋಟಿ ಹೊಸ ತೆರಿಗೆಯನ್ನು ಜನರ ಮೇಲೆ ಹೇರಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 3 ವರ್ಷದಲ್ಲಿ 5 ಲಕ್ಷ ಕೋಟಿ ಹೊಸ ಸಾಲ ಮಾಡಿ ದಾಖಲೆ ಬರೆದಿದ್ದಾರೆ. ಎಲ್ಲ ಇಲಾಖೆಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಆಸ್ಪತ್ರೆ, ಸಚಿವರ ಕಚೇರಿ, ಮುಖ್ಯಮಂತ್ರಿ ಕಚೇರಿಯಿಂದಲೇ ಭ್ರಷ್ಟಾಚಾರ ಆರಂಭವಾಗುತ್ತದೆ. ವರ್ಗಾವಣೆ ಉದ್ಯಮವಾಗಿ ಮಾರ್ಪಾಡಾಗಿದೆ. ಯಾವುದೇ ಅಧಿಕಾರಿ ಎಷ್ಟೇ ದುಡ್ಡು ಕೊಟ್ಟು ಬಂದರೂ, ಎಷ್ಟು ದಿನ ಇರುತ್ತಾನೆ ಎನ್ನುವ ನಂಬಿಕೆ ಇಲ್ಲ. ಆಡಳಿತ ಸಂಪೂರ್ಣ ಕುಸಿದು ಹೋಗಿದೆ ಎಂದು ಹೇಳಿದರು. ವಾಲ್ಮೀಕಿ ನಿಗಮ ಹಗರಣಕ್ಕೆ ಸಂಬಂಧಿಸಿದಂತೆ ಸಚಿವ ನಾಗೇಂದ್ರ ಅವರ ರಾಜೀನಾಮೆ ಹಳೆಯ ವಿಷಯವಾಗಿದೆ. ಆದರೆ ಎಸ್‌ಟಿ ಸಮುದಾಯಕ್ಕೆ ದ್ರೋಹ ಬಗೆದ ■6ನೇ ಪುಟಕ್ಕೆ

ಯುದ್ಧದ ಪರಿಣಾಮ: ಔಷಧ ಬೆಲೆ ಏರಿಕೆ ಆತಂಕ

ಬೆಂಗಳೂರು, ಏ.1– ಅಮೆರಿಕಾ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಪರಿಣಾಮ ಜಾಗತಿಕ ಪೂರೈಕೆ ಸರಪಳಿಯ ಮೇಲೆ ತೀವ್ರ ಪರಿಣಾಮ ಬೀರಿದೆ. ಈ ಸಂಕಷ್ಟದ ನಡುವೆಯೇ ಈಗ ಔಷಧಗಳ ಬೆಲೆಯೂ ಏರಿಕೆಯಾಗುವ ಲಕ್ಷಣಗಳಿದ್ದು, ಸಾಮಾನ್ಯ ಜನರಿಗೆ ಗಾಯದ ಮೇಲೆ ಬರೆ ಎಳೆದಂತಾಗಲಿದೆ.



ಕಚ್ಚಾ ತೈಲ ಮತ್ತು ಪೆಟ್ರೋಕೆಮಿಕಲ್ಸ್ ಬೆಲೆ ಏರಿಕೆಯಾಗಿರುವುದರಿಂದ ಮಾತ್ರೆಗಳ ಪ್ಯಾಕೇಜಿಂಗ್‌ಗೆ ಬಳಸುವ ಫಾಯಿಲ್ಸ್ ತಯಾರಿಕೆ ವೆಚ್ಚ ಹೆಚ್ಚಾಗಿದೆ. ಈ ಕಾರಣದಿಂದಾಗಿ ಏಪ್ರಿಲ್ ಮೊದಲ ವಾರದಿಂದ ಔಷಧಗಳ ದರ ಶೇ 15 ರಿಂದ 20 ರಷ್ಟು ಏರಿಕೆಯಾಗುವ ಸಾಧ್ಯತೆಯಿದೆ.

ಯಾವೆಲ್ಲ ಔಷಧಗಳ ಬೆಲೆ ಏರಿಕೆ: ಪ್ಯಾರಸಿಟಮಾಲ್, ಹೃದಯ ಸಂಬಂಧಿ ಕಾಯಿಲೆ, ಮಧುಮೇಹ, ಗ್ಯಾಸ್ಟ್ರಿಕ್ ಮಾತ್ರೆಗಳು ಹಾಗೂ ಕೆಮ್ಮಿನ ಸಿರಪ್ ಸೇರಿದಂತೆ ಸುಮಾರು 600ಕ್ಕೂ ಹೆಚ್ಚು ಅಗತ್ಯ ಔಷಧಗಳ ಬೆಲೆ ಏರಿಕೆಯಾಗಲಿದೆ. ಇದರೊಂದಿಗೆ ಸೌಂದರ್ಯ ವರ್ಧಕಗಳು ಮತ್ತು ಮಕ್ಕಳ ಉತ್ಪನ್ನಗಳ ಬೆಲೆಯೂ ಹೆಚ್ಚಾಗಲಿದೆ ಎಂದು ಬೆಂಗಳೂರು ■6ನೇ ಪುಟಕ್ಕೆ

ಏ.15ರವರೆಗೆ ಸ್ವಯಂ ಗಣತಿ; ನೀವೂ ಸಕ್ರಿಯವಾಗಿ ಪಾಲ್ಗೊಳ್ಳಿ

• ಮೈಸೂರು ಜಿಲ್ಲೆಯ ಜನತೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಮನವಿ

• ಏ.16ರಿಂದ ಮೇ 15ರವರೆಗೆ ಮನೆಪಟ್ಟಿ-ಮನೆಗಳ ಗಣತಿ • ಜಿಲ್ಲೆಯಲ್ಲಿ 7,748 ಅಧಿಕಾರಿ-ಸಿಬ್ಬಂದಿಯಿಂದ ಗಣತಿ ಕಾರ್ಯ • 2027ರ ಫೆಬ್ರವರಿಯಲ್ಲಿ ಜನಸಂಖ್ಯಾ ಗಣತಿ

ಮೈಸೂರು, ಏ.1(ಪಿಎಂ)– ಮನೆಗಣತಿಗೂ ಮುಂಗಡವಾಗಿ ಏ.1ರಿಂದ 15ರವರೆಗೆ ಸುರಕ್ಷಿತ ಆನ್‌ಲೈನ್ ಪೋರ್ಟಲ್ ಮೂಲಕ ಸಾರ್ವಜನಿಕರೇ ತಮ್ಮ ಮಾಹಿತಿಗಳನ್ನು ಭರ್ತಿ ಮಾಡಿ, ಸಲ್ಲಿಸಲು ಸ್ವಯಂ ಗಣತಿಗೆ ಅವಕಾಶ ಕಲ್ಪಿಸಿದ್ದು, ಜಿಲ್ಲೆಯ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಯಶಸ್ವಿ ಗಣತಿಗೆ ಸಹಕರಿಸಬೇಕೆಂದು ಜಿಲ್ಲೆಯ ಪ್ರಧಾನ ಜನಗಣತಿ ಅಧಿಕಾರಿಗಳೂ ಆದ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತರೆಡ್ಡಿ ಮನವಿ ಮಾಡಿದರು.



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಯಂ ಗಣತಿ ಅವಧಿ ಮುಕ್ತಾಯದ ಬಳಿಕ ಮೊದಲ ಹಂತದಲ್ಲಿ ಮನೆಪಟ್ಟಿ ಮತ್ತು ಮನೆಗಳ ಗಣತಿಯನ್ನು ಏ.16ರಿಂದ ಮೇ 15ರವರೆಗೆ ನಡೆಸಲಾಗುತ್ತದೆ. ಎರಡನೇ ಹಂತದಲ್ಲಿ ಜನಸಂಖ್ಯಾ ಗಣತಿಯು 2027ರ ಫೆಬ್ರವರಿಯಲ್ಲಿ ನಡೆಯಲಿದೆ ಎಂದು ತಿಳಿಸಿದರು. ಇಂದಿನಿಂದ (ಏ.1ರಿಂದ) ಏ.15 ರವರೆಗೆ ಸ್ವಯಂ ಆಗಿ ಮಾಹಿತಿ ದಾಖಲಿಸಲು ಸರ್ಕಾರ ಅವಕಾಶ ಕೊಟ್ಟಿದೆ. ಜನತೆ ತಾವೇ (https://se.census.gov.in) ಆನ್‌ಲೈನ್ ಮೂಲಕ ಪ್ರವೇಶ ಪಡೆದು ಪ್ರಶ್ನೆ ಗಳಿಗೆ ಉತ್ತರಿಸಿ ಭರ್ತಿ ಮಾಡಿಕೊಳ್ಳ ಬಹುದು. ಇದು ಸುಲಭ ವಿಧಾನ. ಈ ಪ್ರಕ್ರಿಯೆ ಬಳಿಕ ಸ್ವೀಕೃತಿ ಸಂಖ್ಯೆ ಲಭ್ಯವಾಗಲಿದೆ. ನಮ್ಮ ಗಣತಿದಾರರು ಏ.16ರಿಂದ ಮೇ 15ರವರೆಗೆ ಮನೆ ಮನೆಗೆ ಭೇಟಿ ನೀಡಲಿದ್ದು, ಅವರಿಗೆ ಸ್ವೀಕೃತಿ ಸಂಖ್ಯೆ ನೀಡಿದರೆ ಮಾಹಿತಿ ಸಂಗ್ರಹ ಸುಲಭವಾಗಲಿದೆ. ಈ ವ್ಯವಸ್ಥೆಯು ಪರಿಣಾಮಕಾರಿ ಹಾಗೂ ತ್ವರಿತವಾಗಿ ಗಣತಿಗೆ ಸಹಕಾರಿ ಎಂದು ಹೇಳಿದರು.

ಸ್ವಯಂ ಗಣತಿಯಡಿ ಪೋರ್ಟಲ್‌ನಲ್ಲಿ ಮಾಹಿತಿ ದಾಖಲಿಸದೇ ಇದ್ದರೂ ಏ.16ರಿಂದ ಮೇ 15 ರವರೆಗೆ ಗಣತಿದಾರರು ಮನೆ ಮನೆಗೆ ಭೇಟಿ ಮಾಡಿ, ಗಣತಿ ನಡೆಸಿ ಮಾಹಿತಿ ಸಂಗ್ರಹಿಸಲಿದ್ದಾರೆ. ಗಣತಿದಾರರಿಗೆ ಸಹಕರಿಸಿ ಮಾಹಿತಿ ನೀಡಲು ಜನತೆಯಲ್ಲಿ ಕೋರುತ್ತೇನೆ. ಇದು ಪ್ರತಿಯೊಂದು ನೀತಿ ನಿರೂಪಣೆಗೆ ಸರ್ಕಾರಕ್ಕೆ ಅನುಕೂಲವಾಗಲಿದೆ ಎಂದರು.



ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಗಣತಿ ಉದ್ದೇಶದಿಂದ ಇಡೀ ಜಿಲ್ಲೆಯಲ್ಲಿ 6,013 ಬ್ಲಾಕ್‌ಗಳಾಗಿ ವಿಂಗಡಣೆ ಮಾಡಲಾಗಿದೆ. ಮುಖ್ಯವಾಗಿ ಶಿಕ್ಷಕರು ಸೇರಿದಂತೆ ವಿವಿಧ ಇಲಾಖೆಯ 7,748 ಅಧಿಕಾರಿ ಮತ್ತು ಸಿಬ್ಬಂದಿಯನ್ನು ಗಣತಿ ಕಾರ್ಯಕ್ಕೆ ನಿಯೋಜಿಸಲಾಗುತ್ತಿದೆ. ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ (ಮೈಸೂರು ಮಹಾನಗರ ಪಾಲಿಕೆ ಹೊರತುಪಡಿಸಿ) 4,181 ಬ್ಲಾಕ್‌ಗಳನ್ನು ಮಾಡಿದ್ದು, ■6ನೇ ಪುಟಕ್ಕೆ

ರಾಷ್ಟ್ರೀಯ ಜನಗಣತಿ ಆರಂಭ

ನವದೆಹಲಿ, ಏ.1– ಭಾರತದಲ್ಲಿ ವಿಶ್ವದ ಅತಿದೊಡ್ಡ ರಾಷ್ಟ್ರೀಯ ಜನಗಣತಿಯನ್ನು ಆರಂಭಿಸಲಾಗಿದೆ. ಇದು ದೇಶದಾದ್ಯಂತ ಕಲ್ಯಾಣ ಕಾರ್ಯಕ್ರಮಗಳು ಮತ್ತು ರಾಜಕೀಯ ಪ್ರಾತಿನಿಧ್ಯಕ್ಕೆ ಮರು ಸ್ವರೂಪ ನೀಡುವ ಸಾಧ್ಯತೆಯಿದೆ.

ಹಿಂದಿನ 2011ರ ಜನಗಣತಿಯಲ್ಲಿ ಭಾರತದ ಒಟ್ಟು ಜನಸಂಖ್ಯೆ 1.21 ಶತಕೋಟಿ ಆಗಿತ್ತು. ಈಗ ಅದು 140 ಕೋಟಿ ದಾಟಿದೆ ಎಂದು ಅಂದಾಜಿಸಲಾಗಿದ್ದು, ಭಾರತ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿದೆ. 2021ರಲ್ಲಿ ಹೊಸದಾಗಿ ಜನಗಣತಿ ಮಾಡಲು ಯೋಜಿಸಲಾಗಿತ್ತು. ಆದರೆ COVID-19 ಸಾಂಕ್ರಾಮಿಕ ಕಾರಣದಿಂದ ಅದನ್ನು ಮುಂದೂಡಲಾಗಿತ್ತು.

ಜನಗಣತಿ ಹೇಗೆ: ಈ ಜನಗಣತಿಯಲ್ಲಿ 1.4 ಬಿಲಿಯನ್‌ಗಿಂತಲೂ ಹೆಚ್ಚು ಜನರನ್ನು ಎಣಿಕೆ ಮಾಡಲಾಗುತ್ತಿದೆ. ಮೊದಲ ಹಂತದ ಜನಗಣತಿ ಬುಧವಾರ ಆರಂಭವಾಗಿದ್ದು, ಸೆಪ್ಟೆಂಬರ್‌ವರೆಗೆ ದೇಶಾದ್ಯಂತ ನಡೆಯಲಿದೆ. ಗಣತಿದಾರರು ಪ್ರತಿ ಪ್ರದೇಶದಲ್ಲಿ ಸುಮಾರು ಒಂದು ತಿಂಗಳ ಕಾಲ ಮನೆ ಮತ್ತು ಲಭ್ಯವಿರುವ ಸೌಲಭ್ಯಗಳ ಮಾಹಿತಿಯನ್ನು ಸಂಗ್ರಹಿಸುತ್ತಾರೆ ಮತ್ತು ವಸತಿ ಸ್ಟಾಕ್ ಮತ್ತು ಜೀವನ ಪರಿಸ್ಥಿತಿಗಳನ್ನು ದಾಖಲಿಸುತ್ತಾರೆ. ನಿವಾಸಿಗಳು ಬಹುಭಾಷಾ ಸ್ಮಾರ್ಟ್‌ಫೋನ್ ಆಪ್ ಮೂಲಕವೂ ಮಾಹಿತಿಯನ್ನು ಸಲ್ಲಿಸಬಹುದು. ಸೆಪ್ಟೆಂಬರ್‌ನಿಂದ ಮುಂದಿನ ಏಪ್ರಿಲ್ 1 ರವರೆಗೆ ನಡೆಸಲಾಗುವ ಎರಡನೇ ಹಂತದಲ್ಲಿ ಧರ್ಮ ಮತ್ತು ಜಾತಿ ಸೇರಿದಂತೆ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಕುರಿತು ವಿವರವಾದ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ.

ಜನಗಣತಿಗಾಗಿ ವರ್ಷದ ಅವಧಿಯಲ್ಲಿ 3 ಮಿಲಿಯನ್‌ಗಿಂತಲೂ ಹೆಚ್ಚು ಸರ್ಕಾರಿ ನೌಕರರನ್ನು ನಿಯೋಜಿಸುವ ನಿರೀಕ್ಷೆಯಿದೆ. 2011 ರಲ್ಲಿ ಸುಮಾರು 2.7 ಮಿಲಿಯನ್ ಗಣತಿದಾರರು ದೇಶಾದ್ಯಂತ 240 ಮಿಲಿಯನ್‌ಗಿಂತಲೂ ಹೆಚ್ಚು ಕುಟುಂಬಗಳನ್ನು ಸಮೀಕ್ಷೆ ಮಾಡಿದ್ದಾರೆ.

ರಾಜಕೀಯವಾಗಿ ಸೂಕ್ಷ್ಮವಾದ ಜಾತಿ ಗಣತಿ: ಎರಡನೇ ಹಂತದ ಜನಗಣತಿಯು ಐತಿಹಾಸಿಕವಾಗಿ ದುರ್ಬಲ ಗುಂಪುಗಳನ್ನು ಮೀರಿ ಸಮಗ್ರ ಜಾತಿ ಲೆಕ್ಕಾಚಾರದ ಪ್ರಯತ್ನವಾಗಿದೆ. ಭಾರತದಲ್ಲಿನ ಜಾತಿಯು ಪ್ರಾಚೀನ ಸಾಮಾಜಿಕ ಶ್ರೇಣಿ ವ್ಯವಸ್ಥೆಯಾಗಿದೆ ಮತ್ತು ಸಾಮಾಜಿಕ ಸ್ಥಾನಮಾನ ಮತ್ತು ಶಿಕ್ಷಣ ಮತ್ತು ಆರ್ಥಿಕ ಸ್ಥಾನಮಾನ ನಿರ್ಧರಿಸುವಲ್ಲಿ ಪ್ರಭಾವಶಾಲಿಯಾಗಿದೆ. ಭಾರತದಾದ್ಯಂತ ವಿಶೇಷವಾಗಿ ಹಿಂದೂಗಳಲ್ಲಿ ಉದ್ಯೋಗ ಮತ್ತು ಆರ್ಥಿಕ ಸ್ಥಿತಿಯನ್ನು ಆಧರಿಸಿ ನೂರಾರು ಜಾತಿ ಗುಂಪುಗಳಿವೆ. ಆದರೆ ಎಷ್ಟು ಜನರು ಆ ಗುಂಪಿನಲ್ಲಿ ಸೇರಿದ್ದಾರೆ ಎಂಬುದರ ಕುರಿತು ಸೀಮಿತ ಅಥವಾ ಹಳೆಯ ಡೇಟಾ ಇದೆ.

ಸರಾಗವಾಗಿ ಮೂತ್ರ ವಿಸರ್ಜಿಸಲಾಗದ ರೋಗಿಗೆ ಸ್ಟೆಮ್ ಸೆಲ್ ಮೂಲಕ ಚಿಕಿತ್ಸೆ



ಸುದ್ದಿಗೋಷ್ಠಿಯಲ್ಲಿ ಡಾ.ಟಿ.ಪಿ.ದಿನೇಶ್‌ಕುಮಾರ್ ಮಾತನಾಡಿದರು.

ಮೈಸೂರು, ಏ.1(ಜಿಎ)–ಸರಾಗವಾಗಿ ಮೂತ್ರ ವಿಸರ್ಜನೆ ಮಾಡಲಾಗದೇ ಇರುವುದು ಸಹಾ ಕೆಲವೊಮ್ಮೆ ಗಂಭೀರ ಸಮಸ್ಯೆಗೆ ಕಾರಣವಾಗಬಹುದಾಗಿದೆ. ಈ ಸಮಸ್ಯೆಗೆ ತಮ್ಮ ಆಸ್ಪತ್ರೆಯಲ್ಲಿ ನಗರದಲ್ಲಿಯೇ ಪ್ರಥಮ ಬಾರಿಗೆ ಸರಳ ಹಾಗೂ ಅತ್ಯಾಧುನಿಕ ಚಿಕಿತ್ಸಾ ವಿಧಾನ ಸ್ಟೆಮ್ ಸೆಲ್ ಬಳಸಿಕೊಂಡು ರೋಗಿಯನ್ನು ಗುಣಪಡಿಸಲಾಗಿದೆ ಎಂದು ನಗರದ ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯ ಡಾ.ಟಿ.ಪಿ.ದಿನೇಶ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 30 ವರ್ಷ ವಯಸ್ಸಿನ ರೋಗಿಯೊಬ್ಬರು ಈ ಸಮಸ್ಯೆಯಿಂದ ಬಳಲುತ್ತ ತಮ್ಮ ಆಸ್ಪತ್ರೆಗೆ ಬಂದ ವೇಳೆ ತಪಾಸಣೆ ನಡೆಸಿದ ಬಳಿಕ ಅವರು ಬೆಂಗಳೂರಿನ ಒಂದು ಆಸ್ಪತ್ರೆಯಲ್ಲಿ ಒಂದು ವರ್ಷದ ಹಿಂದೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೂ ಗುಣಮುಖರಾಗದಿರುವುದು ಗಮನಕ್ಕೆ ಬಂದಿತು. ಹೀಗಾಗಿ ಮೂತ್ರ ಸಾಗುವ ನಾಳದಲ್ಲಿ ಮಾಂಸ ಬೆಳೆದು ನಾಳವನ್ನು ಮುಚ್ಚಿಕೊಂಡಿದ್ದುದು ಕಂಡು ಬಂದು, ಹೊಸ ವಿಧಾನದ ಮೂಲಕ ಅವರನ್ನು ಗುಣಪಡಿಸಲು ನಿರ್ಧರಿಸಲಾಯಿತು ಎಂದರು.

ಅವರ ಕೆನ್ನೆಯ ಒಂದು ಭಾಗದಿಂದ ಜೀವಕೋಶಗಳನ್ನು ತೆಗೆದು ಪುಣೆಯ ವಿಶೇಷ ಪ್ರಯೋಗಾಲಯದಲ್ಲಿ ಅವು ವೃದ್ಧಿಸುವಂತೆ ಮಾಡಿ, ಔಷಧಿ ರೂಪಕ್ಕೆ ತರಲಾಯಿತು. ಅದನ್ನು ಸಿಸ್ಟೋಸ್ಕೋಪ್ ಹಾಗೂ ಲೇಸರ್ ತಂತ್ರಜ್ಞಾನದ ಮೂಲಕ ಪೀಡಿತ ಭಾಗಕ್ಕೆ ಸೇರಿಸಲಾಯಿತು. ಈಗ ರೋಗಿ ಗುಣಮುಖರಾಗಿದ್ದಾರೆ. ಇದು ಯಾವುದೇ ಅಡ್ಡ ಪರಿಣಾಮವಿಲ್ಲದ, ಶೀಘ್ರ ಚೇತರಿಕೆಯ, ದೊಡ್ಡ ಶಸ್ತ್ರಚಿಕಿತ್ಸೆ ಅಗತ್ಯವಿಲ್ಲದ ನೂತನ ವಿಧಾನವಾಗಿದ್ದು, ತಮ್ಮ ಆಸ್ಪತ್ರೆಯಲ್ಲಿ ಲಭ್ಯವಿದೆ ಎಂದು ಮಾಹಿತಿ ನೀಡಿದರು.

ಆಸ್ಪತ್ರೆ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಉಪೇಂದ್ರ ಶೆಣೈ ಮಾತನಾಡಿ, ಮೂತ್ರ ನಾಳದ ಸಮಸ್ಯೆ ಪದೇ ಪದೇ ಕಾಣಿಸಿಕೊಳ್ಳುವುದು ರೋಗಿಗಳಿಗೆ ದೈಹಿಕ ಮತ್ತು ಮಾನಸಿಕ ಕಿರಿಕಿರಿಯುಂಟು ಮಾಡುತ್ತದೆ. ಇವರಿಗೆ ಈ ಸ್ಟೆಮ್ ಸೆಲ್ ಎಂಬ ನೂತನ ವಿಧಾನ ಪರಿಣಾಮಕಾರಿ ಚಿಕಿತ್ಸೆಯಾಗಿದೆ ಎಂದರು. ಗೋಷ್ಠಿಯಲ್ಲಿ ಆಸ್ಪತ್ರೆ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ಇದ್ದರು.

ಅಭಿನಂದನೆ...



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ಕೆ.ಎಂ.ಮುನಿಗೋಪಾಲರಾಜು ಅವರನ್ನು ಮೈಸೂರು ಜಿಲ್ಲಾ ಕೆಎಸ್‌ಆರ್‌ಟಿಸಿ ಕನಕ ನೌಕರರ ಸಂಘದ ಅಧ್ಯಕ್ಷ ಜವರೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ದೊಡ್ಡಹುಂಡಿ ಸೋಮಣ್ಣ, ಸಿ.ಚಿಕ್ಕಣ್ಣ ಅಭಿನಂದಿಸಿದರು.

ಆರಂಭಿಕವಾಗಿ ಕ್ಯಾನ್ಸರ್ ಚಿಕಿತ್ಸೆಯಿಂದ ಗುಣಮುಖ



ಆರೋಗ್ಯ ಶಿಕ್ಷಣದಡಿ ಡಾ.ಎಸ್.ಪಿ.ಯೋಗಣ್ಣ ಉಪನ್ಯಾಸ ನೀಡಿದರು.

ಮೈಸೂರು, ಏ. 1– ಆತ್ಮಸ್ಥೈರ್ಯದಿಂದ ಕ್ಯಾನ್ಸರ್ ಎದುರಿಸಬೇಕೆಂದು ಸುಯೋಗ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಕರೆ ನೀಡಿದರು.

ಅವರು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗ ಸುಯೋಗ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಆರೋಗ್ಯ ಶಿಕ್ಷಣದಡಿ ಉಪನ್ಯಾಸ ಕಾರ್ಯಕ್ರಮದಲ್ಲಿ ಕ್ಯಾನ್ಸರ್ ಕಾಯಿಲೆಯ ರೋಗಲಕ್ಷಣಗಳು ಹಾಗೂ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆಮಾತನಾಡಿದರು.

ಕ್ಯಾನ್ಸರ್ ಎಂದರೇನು ಎಂಬುದನ್ನು ವಿವರಿಸಿದ ಡಾ.ಎಸ್.ಪಿ.ಯೋಗಣ್ಣ, ಕ್ಯಾನ್ಸರ್ ಜೀವಕೋಶದ ಕಾಯಿಲೆಯಾಗಿದ್ದು, ಕ್ಯಾನ್ಸರ್‌ಗೀಡಾದ ಜೀವ ಕೋಶ ಉಗ್ರಗಾಮಿ ಜೀವಕೋಶವಾಗಿ ಪರಿವರ್ತನೆಯಾಗಿ ಅನಾವಶ್ಯಕವಾಗಿ ಅತ್ಯಧಿಕ ಪ್ರಮಾಣದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ವಿಭಜನೆಯಾಗಿ ತನ್ನ ಸಹಜ ಕಾರ್ಯಗಳನ್ನು ಕಳೆದುಕೊಂಡು ಅಕ್ಕಪಕ್ಕದ ಎಲ್ಲಾ ಜೀವಕೋಶಗಳನ್ನು ಸತ್ವಹೀನಗೊಳಿಸಿ ನಾಶ ಮಾಡುತ್ತವೆ ಎಂದು ವಿವರಿಸಿದರು.

ಕ್ಯಾನ್ಸರ್‌ನ ವಿವಿಧ ಹಂತವನ್ನು ವಿವರಿಸಿದ ಅವರು ಕ್ಯಾನ್ಸರ್ ಪ್ರಾರಂಭವಾದ ಭಾಗದಲ್ಲಿಯೇ ಸೀಮಿತವಾದರೆ ಮೊದಲನೇ ಹಂತದ ಕ್ಯಾನ್ಸರ್ ಆಗಿದ್ದು ಇದನ್ನು ಸೂಕ್ತ ಚಿಕಿತ್ಸೆಯಿಂದ ಗುಣಪಡಿಸಬಹುದು. ಅದು ಅಕ್ಕ–ಪಕ್ಕದ ಅಂಗಾಂಗಗಳಿಗೆ ಹರಡಿದರೆ ಅದು 2ನೇ ಹಂತದ ಕ್ಯಾನ್ಸರ್ ಆಗಿದ್ದು, ಇದನ್ನು ಸಹ ಗುಣಪಡಿಸಬಹುದೆಂದರು. ಆದರೆ ಅಕ್ಕ ಪಕ್ಕದಲ್ಲಿ ಮೂರನೇ ಹಂತದ ಕ್ಯಾನ್ಸರ್ ಆಗಿದ್ದು, ಇದಕ್ಕೂ ಮೀರಿ ಬಹುದೂರದ ಅಂಗಾಂಗಗಳಿಗೆ ವ್ಯಾಪಿಸುವ ನಾಲ್ಕನೇ ಹಂತದ ಕ್ಯಾನ್ಸರ್ ಅನ್ನು ಗುಣಪಡಿಸುವುದು ಕಷ್ಟ ಎಂದರು.

ಕ್ಯಾನ್ಸರನ್ನು ಪ್ರಾರಂಭಿಕ ಹಂತದಲ್ಲಿಯೇ ಗುರುತಿಸಲು, ಒಂದು ವಾರಕ್ಕೂ ಮೀರಿದ ಜ್ವರ, ಆಗಿಂದಾಗ್ಗೆ ಬರುವ ತಲೆನೋವು, ರಕ್ತಸ್ರಾವ, ಮೈಮೇಲಿನ ಗೆಡ್ಡೆಗಳು, ಕಪ್ಪು ಮಚ್ಚೆಗಳು ಕಂಡು ಬಂದಲ್ಲಿ ಸಂಕಿತ ಕ್ಯಾನ್ಸರ್‌ಗಾಗಿ ತಕ್ಷಣ ತಜ್ಞ ವೈದ್ಯರನ್ನು ಭೇಟಿಯಾಗಿ ಪರೀಕ್ಷೆಗೆ ಒಳಪಡಿಸಬೇಕು ಎಂದರು.

ಕಾರ್ಯಕ್ರಮವನ್ನು ಸುಯೋಗ ಆಸ್ಪತ್ರೆ ಜೀರ್ಣಾಂಗ ಶಸ್ತ್ರಕ್ರಿಯೆಶಾಸ್ತ್ರ ತಜ್ಞ ಡಾ.ಶರತ್‌ಕುಮಾರ್ ಉದ್ಘಾಟಿಸಿದರು. ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ ಅಧ್ಯಕ್ಷ ಡಾ.ಜಿ.ಎಂ.ವಾಮದೇವ ಅಧ್ಯಕ್ಷತೆ ವಹಿಸಿದ್ದರು. ಮೂತ್ರ ಶಸ್ತ್ರ ಕ್ರಿಯಾ ತಜ್ಞ ಡಾ.ಅಭಿಜಿತ್, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ ಗೌರವಾಧ್ಯಕ್ಷ ಡಾ.ಟಿ.ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

ನಿಧನ

ಬಿ.ಜಿ.ವೈದ್ಯನಾಥ್



ಮೈಸೂರು,ಏ.1–ಮೈಸೂರಿನ ಬೋಗಾದಿ ನಿವಾಸಿ, ದಿವಂಗತ ಬ್ಲಫ್ ಗೋವಿಂದಪ್ಪ ಅವರ ಪುತ್ರ ಬಿ.ಜಿ.ವೈದ್ಯನಾಥ್ (81) ಬುಧವಾರ ಬೆಳಗ್ಗೆ ನಿಧನರಾದರು. ಮೂಲತಃ ಚಾಮರಾಜನಗರ ತಾಲೂಕು ಬನಹಳ್ಳಿ ಗ್ರಾಮದವರಾದ ಇವರು ಪುತ್ರ ವಿ. ಶಂಕರ್, ಸೊಸೆ ಶಿಲ್ಪಾ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಸರಸ್ವತಿ



ಮೈಸೂರಿನ ಸಂತೇಪೇಟೆಯ ಹುರಿಗಡಲೆ ವ್ಯಾಪಾರಿ ಎಂ.ಎನ್. ಷಣ್ಮುಗಂ ಅವರ ಪತ್ನಿ ಶ್ರೀಮತಿ ಸರಸ್ವತಿ (75) ತೊಣಚಿಕೊಪ್ಪಲಿನ ನಿವಾಸದಲ್ಲಿ ಮಂಗಳವಾರ ನಿಧನರಾದರು. ಮೃತರು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ಕಾರದ ಆದೇಶ ಧಿಕ್ಕರಿಸಿ ಆರ್‌ಎಸ್‌ಎಸ್ ಕಾರ್ಯಕ್ರಮ ಆಯೋಜನೆ ಆರೋಪ

ಮುಕ್ತ ವಿವಿ ಕುಲಪತಿ ವಜಾಕ್ಕೆ ಆಗ್ರಹಿಸಿ ವಿವಿಧ ಸಂಘಟನೆಗಳ ಪ್ರತಿಭಟನೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಆರ್‌ಎಸ್‌ಎಸ್ ಕೈಗೊಂಬೆಯಾಗಿ ವರ್ತಿಸುತ್ತಿದ್ದಾರೆಂದು ಆರೋಪಿಸಿ ದಸಂಸ ಮುಖಂಡರು ಪ್ರತಿಭಟನೆ ನಡೆಸಿದರು.

ಮೈಸೂರು,ಏ.1(ಎಂಟಿವೈ)–ಸರ್ಕಾರದ ಆದೇಶ ಧಿಕ್ಕರಿಸಿ, ಆರ್‌ಎಸ್‌ಎಸ್ ಕಾರ್ಯಕ್ರಮ ಆಯೋಜಿಸಿದ್ದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರನ್ನು ವಜಾಗೊಳಿಸುವಂತೆ ಒತ್ತಾಯಿಸಿ ವಿವಿಧ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ಮೈಸೂರು–ಹುಣಸೂರು ಮುಖ್ಯರಸ್ತೆಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದ್ವಾರದ ಬಳಿ ಬುಧವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ಮುಖಂಡರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಆರ್‌ಎಸ್‌ಎಸ್ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ಆ ಮೂಲಕ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವ್ಯವಸ್ಥೆ ಕೇಸರೀಕರಣಗೊಳಿಸಲಾಗುತ್ತಿದೆ. ಶಿಕ್ಷಣದ ಮೂಲಕ ಆರ್‌ಎಸ್‌ಎಸ್ ಅಜೆಂಡಾ ತುಂಬುವ ಪ್ರಯತ್ನ ಮಾಡಲಾಗುತ್ತಿದೆ. ಸಂಘ ಪರಿವಾರದ ಸಂಘಟನೆ ದೃಷ್ಟಿಯಿಂದ ಕಾರ್ಯಕ್ರಮಕ್ಕೆ ಅವಕಾಶ ನೀಡಿ ಜೀವ ವಿರೋಧಿ ಸಿದ್ಧಾಂತಗಳ ಪ್ರಚಾರಕ್ಕೆ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಸರ್ಕಾರದ ಆದೇಶವನ್ನು ಉಲ್ಲಂಘಿಸಿದ್ದಾರೆ. ಮಾತ್ರವಲ್ಲ ವಿದ್ಯಾರ್ಥಿಗಳನ್ನು ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿರುವ ಮುಕ್ತ ವಿವಿಯ ಕುಲಪತಿ ಪ್ರೊ.ಶರಣಪ್ಪ ಹಲಸೆ ಅವರನ್ನು ವಜಾಗೊಳಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಇದೇ ವೇಳೆ ದಸಂಸ ಮುಖಂಡ ಹರಿಹರ ಆನಂದಸ್ವಾಮಿ ಮಾತನಾಡಿ, ಮುಕ್ತ ವಿವಿಯಲ್ಲಿ ಭ್ರಷ್ಟಾಚಾರ ಎಗ್ಗಿಲ್ಲದೆ ನಡೆಯುತ್ತಿದೆ. ಮತಾಂಧ ಶಕ್ತಿಗಳಿಗೆ ಸಹಕಾರ ನೀಡುತ್ತಿದ್ದಾರೆ. ಅಧಿಕಾರಿಗಳಿಗೆ ಕಿರುಕುಳ ನೀಡಲಾಗುತ್ತಿದೆ. ವಿವಿಯ ಎಲ್ಲ ಬೆಳವಣಿಗೆಗಳ ಬಗ್ಗೆ ಸಮಗ್ರ ತನಿಖೆ ಆಗಬೇಕು. 15 ದಿನಗಳ ಒಳಗೆ ಯಾವುದೇ ಕ್ರಮ ಕೈಗೊಳ್ಳದಿದ್ದರೆ ವಿವಿಯ ಆಡಳಿತ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಹೇಳಿದರು.

ದಸಂಸ ಸಂಚಾಲಕ ಚೋರನಹಳ್ಳಿ ಶಿವಣ್ಣ ಮಾತನಾಡಿ, ಕುಲಪತಿ ಪ್ರೊ.ಶರಣಪ್ಪ ಹಲಸೆ ವಿಶ್ವವಿದ್ಯಾನಿಲಯದ ಸೌಹಾರ್ದತೆಯನ್ನು ಹಾಳು ಮಾಡುವ ಕೆಲಸ ಮಾಡುತ್ತಿದ್ದಾರೆ. ಧಾರ್ಮಿಕ ವಿಚಾರದಲ್ಲಿ ಕೋಮು ಭಾವನೆ ಬಿತ್ತುವ ಅವರನ್ನು ಸೇವೆಯಿಂದ ವಜಾ ಮಾಡಬೇಕು. ಕುಲಪತಿಯಾಗಿ ಸರ್ಕಾರದ ಆದೇಶ ಉಲ್ಲಂಘಿಸಿರುವ ಇವರ ವಿರುದ್ಧ ತುರ್ತಾಗಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಮುಕ್ತ ವಿಶ್ವವಿದ್ಯಾನಿಲಯ ನವದೆಹಲಿಯ ಜೆಎನ್‌ಯು ಮಾದರಿಯಲ್ಲಿ ಶಿಕ್ಷಣ ದೊರಕಬೇಕೆಂಬ ಉದ್ದೇಶದಿಂದ ಸ್ಥಾಪಿಸಲಾಗಿದೆ. ಇಲ್ಲಿ ನೋಡಿದರೆ ಅನಗತ್ಯವಾಗಿ ಕಟ್ಟಡ ಕಟ್ಟಿ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡಲಾಗಿದೆ. ಮುಕ್ತ ವಿವಿಯ ಬಹುತೇಕ ಹುದ್ದೆಗಳ ನೇಮಕಾತಿಗೆ ಒಂದೇ ಜಾತಿಯವರನ್ನು ಪರಿಗಣಿಸಲಾಗಿದೆ. ಈ ಬಗ್ಗೆ ಈಗಾಗಲೇ ತನಿಖೆ ನಡೆದಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಪ್ರೊ.ಶರಣಪ್ಪ ವಿ.ಹಲಸೆ ಕುಲಪತಿಯಾಗಿ ಬಂದ ಬಳಿಕ ಸ್ವಜನ ಪಕ್ಷಪಾತ, ಹಣಕಾಸು ದುರುಪಯೋಗ, ಕಾನೂನುಬಾಹಿರವಾಗಿ ಖಾಸಗಿ ಬ್ಯಾಂಕ್‌ಗಳಲ್ಲಿ ಅಕೌಂಟ್ ತೆರೆದು ತುಂಬಿದ್ದ ಬೊಕ್ಕಸವನ್ನು ಬರಿದು ಮಾಡಿದ್ದಾರೆ. ಆರ್‌ಎಸ್‌ಎಸ್ ಕೇಂದ್ರಿತ ಕಾರ್ಯಕ್ರಮ ಆಯೋಜಿಸಿ ಸರ್ಕಾರದ ನಿರ್ದೇಶನವನ್ನು ಗಾಳಿಗೆ ತೂರಿದ್ದಾರೆ ಎಂದು ಕಿಡಿಕಾರಿದರು.

ಮುಖಂಡ ದ್ಯಾವಪ್ಪ ನಾಯಕ ಮಾತನಾಡಿ, ಹಲವಾರು ವರ್ಷಗಳಿಂದ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸಿ ಮುಕ್ತ ವಿವಿಯನ್ನು ಉಳಿಸಬೇಕು. ತಪ್ಪಿತಸ್ಥರಿಗೆ ಶಿಸ್ತುಕ್ರಮ ಆಗಬೇಕು ಎಂದು ಒತ್ತಾಯಿಸಿದರು. ಇದೇ ವೇಳೆ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಟರಾಜ್ ಶಿವಣ್ಣ, ಸಂಶೋಧಕರ ಸಂಘದ ಗೌರವ ಅಧ್ಯಕ್ಷ ಕಲ್ಲಹಳ್ಳಿ ಕುಮಾರ್, ಮುಖಂಡ ಸೋಸಲೆ ಸಿದ್ದರಾಜು ಮಾತನಾಡಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಚನ್ನಕೇಶವ, ಸೋಮಯ್ಯ ಮಲೆಯೂರು, ಆರ್ಟಿಸ್ಟ್ ನಾಗರಾಜು, ಸೋಮನಾಯ್ಕ, ಹೆಚ್.ಸಿ. ಪುಟ್ಟಣ್ಣ, ಮಣಿಯಯ್ಯ, ಕೆ.ಆರ್. ಗೋಪಾಲಕೃಷ್ಣ, ಕಿರಗೂರು ಸ್ವಾಮಿ, ಗಿರೀಶ್ ಮಾಚಳ್ಳಿ, ವರಹಳ್ಳಿ ಆನಂದ್, ಮಲ್ಲೇಶ್ ಬಾಚಳ್ಳಿ, ಡಾ.ಪ್ರತಾಪ್, ಗಜೇಂದ್ರ ಚಿನ್ನಸ್ವಾಮಿ, ಸಾಮ್ರಾಟ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ತೃತೀಯ ಲಿಂಗಿಗಳ ನೋವು–ನಲಿವಿನ ಕಥೆ ಬಿಂಬಿಸುವ 'ಅಕ್ವ' ಕೃತಿ ಲೋಕಾರ್ಪಣೆ

ತೃತೀಯ ಲಿಂಗಿಗಳ ವಿರುದ್ಧದ ಮಸೂದೆಗೆ ಆಕ್ರೋಶ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ 'ಅಕ್ವ' ಕೃತಿ ಬಿಡುಗಡೆಗೊಳಿಸಲಾಯಿತು.

ಮೈಸೂರು, ಏ.1(ಜಿಎ)–ಕೇಂದ್ರ ಸರ್ಕಾರ ತೃತೀಯ ಲಿಂಗತ್ವ ಅಲ್ಪಸಂಖ್ಯಾತರ ವಿರುದ್ಧ ಮಾಡಿರುವ ಹೊಸ ಮಸೂದೆಯನ್ನು ವಿರೋಧಿಸಿ ಲಿಂಗತ್ವ ಅಲ್ಪ ಸಂಖ್ಯಾತರಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಮುದಾಯದವರ ನೋವು ನಲಿವಿನ ಕಥೆಗಳನ್ನು ಒಳಗೊಂಡ 'ಅಕ್ವ' ಕೃತಿ ಬಿಡುಗಡೆಗೊಳಿಸಿ ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದರು.

ಮೊದಲಿಗೆ ಲೇಖಕ ಡಾ.ಎನ್. ವಾಸಯ್ಯ ರಚಿಸಿರುವ ಈ ಕೃತಿ ಬಿಡುಗಡೆಗೊಳಿಸಿದ ಲಿಂಗತ್ವ ಅಲ್ಪಸಂಖ್ಯಾತರ ಒಕ್ಕೂಟದ ನೇತೃತ್ವ ವಹಿಸಿರುವ ಪ್ರಣತಿ ಪ್ರಕಾಶ್ ಮಾತನಾಡಿ, ಸಮುದಾಯದವರನ್ನು ಸಮಾಜ ಮೂಲೆಗುಂಪು ಮಾಡುತ್ತಿದೆ. ಆದರೆ ಇವರಿಗೂ ಭಾವನೆಗಳಿವೆ ಎಂಬುದನ್ನು ಈ ಕೃತಿ ತೋರಿಸುತ್ತದೆ. ಈ ಮೊದಲು ಲಿಂಗತ್ವ ಅಲ್ಪಸಂಖ್ಯಾತರ ಕಾರ್ಡ್ ಪಡೆಯಲು ಜಿಲ್ಲಾಧಿಕಾರಿ ಕಚೇರಿಗೆ ಸ್ವಯಂ ಘೋಷಣೆಯ ಪ್ರಮಾಣ ಪತ್ರ ಸಲ್ಲಿಸಿದರೆ ಸಾಕಾಗುತ್ತಿತ್ತು. ಇದರ ಆಧಾರದ ಮೇಲೆ ಕಾರ್ಡ್ ಬರುತ್ತಿತ್ತು. ಇದನ್ನು ಪಡೆದ ಎಷ್ಟೋ ಮಂದಿ ಈಗ ಗೃಹಲಕ್ಷ್ಮಿ ಸೌಲಭ್ಯ ಪಡೆದಿದ್ದಾರೆ. ಆದರೆ ಕೇಂದ್ರ ಸರ್ಕಾರ ಇದೀಗ ಮಂಡಿಸಿರುವ ಮಸೂದೆ ಇದಕ್ಕೆ ತಡೆಯೊಡ್ಡಿದ್ದು, ವೈದ್ಯಕೀಯ ತಪಾಸಣೆ ಮಾಡಿಕೊಳ್ಳುವ ಮೂಲಕ ದೃಢ ಪಡಿಸಬೇಕು ಎಂದು ಸೂಚಿಸುತ್ತದೆ. ಇದು ತಮ್ಮ ಸಮುದಾಯದವರ ಮೇಲೆ ಮಾಡಿದ ಪ್ರಹಾರವಾಗಿದೆ ಎಂದು ಆರೋಪಿಸಿದರು.

7 ರೇನ್ಬೋಸ್ ಅಧ್ಯಕ್ಷ ಟಿ.ಶಿವರಾಮು ಮಾತನಾಡಿ, ಹೊಸ ಮಸೂದೆ ತಮ್ಮ ಸಮುದಾಯದವರ ಮನಸ್ಥಿತಿಗೆ ವಿರುದ್ಧವಾದುದಾಗಿದೆ. ಜೊತೆಗೆ ಅಂತಹವರು ಸಮುದಾಯದೊಡನೆ ಬೆರೆಯಬಾರದು, ಆ ರೀತಿ ಮಾಡಿದರೆ ಜೈಲು ಶಿಕ್ಷೆ ವಿಧಿಸುವ ಅವಕಾಶ ನೀಡಿದೆ. ಈ ರೀತಿ ಪ್ರಮಾಣಪತ್ರ ಪಡೆಯಬೇಕಾದ ನಿಯಮ ಲಿಂಗತ್ವ ಅಲ್ಪ ಸಂಖ್ಯಾತರಿಗೆ ಮಾತ್ರ ಏಕೆ, ತಾನು ಪುರುಷ, ತಾನು ಮಹಿಳೆ ಎಂದು ಇತರರು ಸಹಾ ವೈದ್ಯಕೀಯ ಪ್ರಮಾಣ ಪತ್ರದ ಮೂಲಕ ದೃಢ ಪಡಿಸಿಕೊಳ್ಳುವಂತೆ ಮಾಡಲಿ ಎಂದು ಆಗ್ರಹಿಸಿದರು.

ಕೃತಿಕಾರ ಡಾ.ಎನ್.ವಾಸಯ್ಯ ಮಾತನಾಡಿ, ಅಕ್ವಾ ಎಂಬುದು ಸಮುದಾಯದೊಳಗಿನವರು ಕೆಲವರಿಗೆ ಬಳಸುವ ಪದ, ತಾನು ಮಹಿಳೆ ಎಂಬ ಭಾವನೆಗಳು ಬಾಧಿಸಲ್ಪಡುವ ಪುರುಷರನ್ನು ಈ ರೀತಿ ಕರೆಯಲಾಗುತ್ತದೆ. ಇವರೂ ಸಹಾ ಈ ರೀತಿ ಲೈಂಗಿಕ ಅಲ್ಪ ಸಂಖ್ಯಾತರೇ ಆಗಿರುತ್ತಾರೆ. ಇಂತಹವರ ಭಾವನೆ, ನೋವುಗಳನ್ನು ಈ ಕೃತಿ ಒಳಗೊಂಡಿದೆ. ಈ ರೀತಿ ಲೈಂಗಿಕ ಅಲ್ಪ ಸಂಖ್ಯಾತರ ಬಗೆಗಿನ ಸಮಗ್ರ ಕಥೆಗಳ ಕಥಾ ಸಂಕಲನ ಕನ್ನಡದಲ್ಲಿ ಬಹುಶಃ ಇದೇ ಮೊದಲಿನದೆನ್ನಬಹುದಾಗಿದೆ ಎಂದರು. ಗೋಷ್ಠಿಯಲ್ಲಿ ಸಮುದಾಯದವರಾದ ಅಪ್ಸರಾ ಇದ್ದರು.


ಮಕ್ಕಳಿಗೆ ಯೋಗ ಬೇಸಿಗೆ ಶಿಬಿರ



ಮೈಸೂರು, ಏ.1(ಜಿಎ)– ಮಕ್ಕಳಿಗಾಗಿ ಯೋಗ ಬೇಸಿಗೆ ಶಿಬಿರವನ್ನು ಏಪ್ರಿಲ್ 4 ರಿಂದ ಮೇ 5ರವರೆಗೆ ನಿತ್ಯ ಬೆಳಗ್ಗೆ 6ರಿಂದ 7 ಹಾಗೂ ಸಂಜೆ 5ರಿಂದ 6ರವರೆಗೆ ಡಿ.ಸುಬ್ಬಯ್ಯ ರಸ್ತೆಯ ಸಂಜೀವಿನಿ ವಿಳಾಸದಲ್ಲಿ ನಡೆಯಲಿದೆ ಎಂದು ಬಿ.ಎಸ್.ನರಸಿಂಹ ಪ್ರಸಾದ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕ್ರಮಬದ್ಧ ಉಸಿರಾಟ ರೂಢಿಯಲ್ಲಿಲ್ಲದ ಕಾರಣ ಚಿಕ್ಕ ವಯಸ್ಸಿನಲ್ಲಿಯೇ ಹಲವು ಮಕ್ಕಳು ಕಾಯಿಲೆಗೆ ಒಳಗಾಗುತ್ತಿದ್ದಾರೆ. ಹೀಗಾಗಿ ಇದನ್ನ ಕಲಿಸಿಕೊಡಲಾಗುವುದು. ಜೊತೆಗೆ ಸೀಮೆ ಸುಣ್ಣ ಹಾಗೂ ತೆಂಗಿನ ಚಿಪ್ಪಿನಲ್ಲಿ ಕಲಾಕೃತಿ ರೂಪಿಸುವುದನ್ನೂ ಕಲಿಸಲಾಗುವುದು. ಮಾಹಿತಿಗೆ ದೂ. 94803 84065 ಅನ್ನು ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಹರೀಶ್, ಮಣಿಕಂಠ, ಶಂಕರ್, ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಸನ್ಮಾನ...



ಕರ್ನಾಟಕ ಗಾಣಿಗರ ಅಭಿವೃದ್ಧಿ ನಿಗಮ ಮಂಡಳಿ ನೂತನ ಅಧ್ಯಕ್ಷರೂ ಆದ ಮಾಜಿ ಮೇಯರ್ ಆರ್.ಅನಂತು ಅವರನ್ನು ಮುಖಂಡರಾದ ಸುಹೇಲ್ ಬೇಗ್, ಶ್ರೀನಿವಾಸ್, ದಾಸ್‌ಪ್ರಕಾಶ್, ವೆಂಕಟೇಶ, ಸತೀಶ್‌ಕುಮಾರ್, ರಾಜ ಗಣೇಶ ಸನ್ಮಾನಿಸಿದರು.

ಜೆಡಿಎಸ್‌ಗೆ ನೇಮಕ



ಮೈಸೂರು, ಏ.1– ಮೈಸೂರು ನಗರ ಜನಾತದಳ (ಜಾತ್ಯಾತೀತ) ಪಕ್ಷದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರನ್ನಾಗಿ ಕುವೆಂಪುನಗರದ ಆರ್.ಎಸ್.ರಘುರಾಮ್ ಅವರನ್ನು ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು ನೇಮಕ ಮಾಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.4.2026 ಗುರುವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಯೋಗ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30 ರಿಂದ.

■ **ಶೇಷಾದ್ರಿಪುರಂ ಪದವಿ ಕಾಲೇಜು :** ಆಂತರಿಕ ಗುಣಮಟ್ಟದ ಭರವಸೆ ಕೋಶದ ಉಪಕ್ರಮ 'ಕಲಾವೈಭವ' 11ನೇ ವರ್ಷದ ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ : ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣ, ಮುಖ್ಯ ಅತಿಥಿಗಳು : ಶಾಸ್ತ್ರೀಯ ನೃತ್ಯ ಕಲಾವಿದೆ ಯಮುನಾ ಶ್ರೀನಿಧಿ, ಪ್ರಿನ್ಸಿಪಾಲ್ ಶ್ರೀಮತಿ ಎನ್. ಅರ್ಚನಾಸ್ವಾಮಿ, ಸ್ಥಳ: ಕುವೆಂಪು ರಂಗಮಂದಿರ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಕಾಲೇಜು ಶಿಕ್ಷಣ ಇಲಾಖೆ, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ದಾರಿ ಫೌಂಡೇಷನ್ :** ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವ ಶಕ್ತಿಯ ಕೈಯಲ್ಲಿ ಮುಕ್ತ–ಸಂವಾದ, ಉದ್ಘಾಟನೆ : ಹಿರಿಯ ಕಲಾವಿದ ಮುಖ್ಯಮಂತ್ರಿ ಚಂದ್ರು, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ದಾರಿ ಫೌಂಡೇಷನ್ ಅಧ್ಯಕ್ಷ ಎಲ್. ರಂಗಯ್ಯ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಪ್ರೊ. ಸಿ. ನಟರಾಜ್, ಸ್ಥಳ: ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಪಡುವಾರಹಳ್ಳಿ, ಬೆಳಗ್ಗೆ 10.30ಕ್ಕೆ.

■ **ಅರಿವಿನ ಚಾವಡಿ, ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಮೈಸೂರು ವಿವಿ, ಉಳುಮೆ ಪ್ರತಿಷ್ಠಾನ :** ಯುವಜನತೆ... ನಮ್ಮ ನಾಳೆಯ ಭರವಸೆ... ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಪ್ರೊ. ವಿ. ಷಣ್ಮುಗಂ, ಮುಖ್ಯ ಅತಿಥಿಗಳು : ಲೇಖಕರಾದ ಡಾ. ಎಚ್.ಎಸ್. ಅನುಪಮಾ, ಅತಿಥಿಗಳು : ಪ್ರಾಧ್ಯಾಪಕರಾದ ಡಾ. ಎಂ. ಮಂಜುಳ, ಪ್ರೊ. ವಿಜಯಲಕ್ಷ್ಮಿ ಮನಾಪುರ, ಸ್ಥಳ: ಜೂನಿಯರ್ ಬಿ.ಎ. ಹಾಲ್, ಮಹಾರಾಜ ಕಾಲೇಜು, ಬೆಳಗ್ಗೆ 10.30 ರಿಂದ.

■ **ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಮೈಸೂರು ವಿವಿ, ಉಳುಮೆ ಪ್ರತಿಷ್ಠಾನ :** ಡಾ. ಎಚ್. ಎಸ್. ಅನುಪಮಾ ಅವರ ಬುದ್ಧ ಧಮ್ಮ ಮತ್ತು ಸಮಾಜ ಸುಧಾರಕರು ಹಾಗೂ ಬುದ್ಧ, ಧಮ್ಮ ಮತ್ತು ಮಹಿಳೆ ಪುಸ್ತಕ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ವಿಶ್ರಾಂತ ಕುಲಪತಿ ಪ್ರೊ. ಸಬಿಹಾ ಭೂಮಿಗೌಡ, ಪುಸ್ತಕ ಬಿಡುಗಡೆ : ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ, ಮುಖ್ಯ ಅತಿಥಿಗಳು : ಸಮಾಜ ಚಿಂತಕ ಬೆಟ್ಟಯ್ಯ ಕೋಟೆ, ಚ.ಹ. ರಘುನಾಥ್, ಪ್ರಾಧ್ಯಾಪಕರಾದ ಆರ್. ಕುಮಾರ್, ಕೀರ್ತಿ ಎಸ್. ಬೈಂದೂರು, ದೀಪಾ ಬುದ್ಧೆ, ಡಾ. ಎಚ್.ಎಸ್. ಅನುಪಮಾ, ಬಸವರಾಜ ಸೂಳಿಭಾವಿ, ವರಹಳ್ಳಿ ಆನಂದ್, ಟಿ.ಜಿ.ಎಸ್. ಅವಿನಾಶ್, ಗಜೇಂದ್ರ ಚಿನ್ನಸ್ವಾಮಿ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4ರಿಂದ.

■ **ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಥಿಯೇಟರ್ ಎಜುಕೇಷನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ರಾಷ್ಟ್ರೀಯ ನಟನಾ ಕಾರ್ಯಾಗಾರ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಸಂಪನ್ಮೂಲ ವ್ಯಕ್ತಿ : ರಂಗ ನಿರ್ದೇಶಕ ರಜನೀಶ್ ಬಿಸ್ತಿ, ಉಪಸ್ಥಿತರು : ರಂಗ ನಿರ್ದೇಶಕ ಪ್ರಸನ್ನ, ಸ್ಥಳ: ಹಾರ್ಡ್ವಿಕ್ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್., 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ. ಪಿ. ರೇವತಿ ಹಾಗೂ ಬಿ. ಶ್ರೀರಾಂ ಭಟ್, ವ್ಯಾಖ್ಯಾನ–ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಚಿತ್ರಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮೈಸೂರು ಎನ್. ಕಾರ್ತಿಕ್ – ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ – ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಉದಯೋನ್ಮುಖ ತೋಟಗಾರಿಕಾ ಬೆಳೆಗಳು ಈ ಕುರಿತು ಬೆಂಗಳೂರಿನ ವಿಶ್ರಾಂತ ಅಪರ ತೋಟಗಾರಿಕಾ ನಿರ್ದೇಶಕರಾದ ಡಾ. ಎಸ್.ವಿ. ಹಿತ್ತಲಮನಿ ಅವರೊಂದಿಗೆ ಸಂದರ್ಶನ. ಸಂದರ್ಶನ– ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ, 9.30 ಕನ್ನಡ ಭಾರತಿ, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣದ ಪ್ರಸಾರ.

ಶ್ರೀರಾಮ ನವಮಿ ಕಾರ್ಯಕ್ರಮಗಳು



■ **ಶ್ರೀ ರಾಮ ಮಂದಿರ, ಜಯನಗರ ಮೈಸೂರು:** 60ನೇ ವರ್ಷದ ರಾಮೋತ್ಸವ, ಶ್ರೀರಾಮಚಂದ್ರಸ್ವಾಮಿಯವರ ಸೀತಾಕಲ್ಯಾಣ, ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನಮಂತೋತ್ಸವ ಮತ್ತು ವಸಂತೋತ್ಸವ ಕಾರ್ಯಕ್ರಮ, ಬೆಳಗ್ಗೆ 9ಕ್ಕೆ ಶ್ರೀ ಲಲಿತಾ ಹೋಮ, ಸಂಜೆ 5ಕ್ಕೆ ಕಲಶ ಸ್ಥಾಪನೆ, ಸಂಜೆ 6.30 ರಿಂದ ವಿದ್ವಾನ್ ಹರೀಶ್ ಪಾಂಡವ್ ಅವರಿಂದ ಸ್ಯಾಕ್ಸೋಫೋನ್ ವಾದನ, ಸ್ಥಳ: ಶ್ರೀರಾಮಮಂದಿರ ಜಯನಗರ

■ **ಶ್ರೀರಾಮ ಸೇವಾ ಮಂಡಳಿ :** 73ನೇ ವರ್ಷದ ಶ್ರೀರಾಮೋತ್ಸವ, ಸಂಜೆ 5.30 ರಿಂದ ಜೆ.ಪಿ. ನಗರದ ಶಾರದಾ ಸಂಗೀತ ಬಳಗದಿಂದ ಭಜನೆ, ಸಂಜೆ 6.30ಕ್ಕೆ ವಿದುಷಿ ಶ್ರೀಮತಿ ಚಾರುಲತಾ ರಾಮಾನುಜಂ ಮತ್ತು ವೃಂದದವರಿಂದ ಪಿಟೀಲುವಾದನ, ಸ್ಥಳ: ಶ್ರೀ ಅವನಿಶಂಕರ ಮಠ 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, ಮೈಸೂರು.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ಮೈಸೂರು:** ಶ್ರೀ ಪರಾಭವ ಸಂವತ್ಸರದ 136ನೇ ವರ್ಷದ ಶ್ರೀ ರಾಮೋತ್ಸವ, ಶ್ರೀ ಪರಾಭವ ಸಂವತ್ಸರದ ಶ್ರೀ ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಪಂಡಿತ್ ವೆಂಕಟೇಶ್ ಕುಮಾರ್ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ವೀರಭದ್ರಯ್ಯ ಹಿರೇಮಠ–ಹಾರ್ಮೋನಿಯಂ, ಪಂಡಿತ್ ಕೇಶವ ಜೋಷಿ–ತಬಲ, ಸ್ಥಳ: ಶಿವರಾಮಪೇಟೆ, ವಿನೋಬರಸ್ತೆ, ಮೈಸೂರು, ಸಂಜೆ 6.30 ರಿಂದ.

■ **ಅರಳಿಕಟ್ಟೆ ಶ್ರೀರಾಮ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ಪರಾಭವನಾಮ ಸಂವತ್ಸರ ಶ್ರೀರಾಮ ನವಮಿ ಪ್ರಯುಕ್ತ ವಿದ್ಯಾರಣ್ಯಪುರಂನ ಚೇತನಾ ಭಜನಾ ಮಂಡಳಿಯವರಿಂದ ಭಜನೆ ಸ್ಥಳ: ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಸಂಜೆ 6.30ಕ್ಕೆ

ದಾಖಲೆ 17 ಬಾರಿ ಬಜೆಟ್ ಮಂಡಿಸಿದ ಸಿಎಂ ಸಿದ್ದರಾಮಯ್ಯರಿಗೆ

ಆಯವ್ಯಯಕ್ಕೂ.... ಶ್ವೇತಪತ್ರಕ್ಕೂ ವ್ಯತ್ಯಾಸವೇ ತಿಳಿದಿಲ್ಲ!

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವ್ಯಂಗ್ಯೋಕ್ತಿ

ಬೆಂಗಳೂರು, ಏ.1(ಕೆಎಂಶಿ)–ರಾಜ್ಯದ ಆರ್ಥಿಕ ಸ್ಥಿತಿಗತಿ ಕುರಿತ ಶ್ವೇತಪತ್ರ ಹೊರಡಿಸಬೇಕೆಂಬ ಒತ್ತಾಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿರುವ ಉತ್ತರ ಗಮನಿಸಿದರೆ ಆಯವ್ಯಯಕ್ಕೂ ಶ್ವೇತ ಪತ್ರಕ್ಕೂ ಇರುವ ವ್ಯತ್ಯಾಸವೇ ತಿಳಿದಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ವ್ಯಂಗ್ಯವಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಹೇಳಿಕೆಯಿಂದ ಸಂಪೂರ್ಣ ವಿಚಲಿತರಾಗಿರುವ ಮುಖ್ಯಮಂತ್ರಿ ಸುದೀರ್ಘ ಸ್ಪಷ್ಟನೆಗೆ ಪಟ್ಟಿರುವ ಪ್ರಯಾಸ, ಪಡಿಪಾಟಲು ಕಂಡು ಮರುಕವುಂಟಾಗುತ್ತಿದೆ ಎಂದರು.

17 ಬಾರಿ ಬಜೆಟ್ ಮಂಡಿಸಿದ್ದೇ ಸಾಧನೆಯಾ: ಹಣಕಾಸು ಖಾತೆಯನ್ನೂ ಹೊಂದಿರುವ ಸಿದ್ದರಾಮಯ್ಯ 17 ಬಾರಿ ಬಜೆಟ್ ಮಂಡಿಸಿರುವುದನ್ನೇ ದೊಡ್ಡ ಸಾಧನೆ ಎಂದುಕೊಂಡಿರುವುದು ರಾಜ್ಯದ ದುರಂತ. ಶ್ವೇತಪತ್ರವೆಂದರೆ ಕಪ್ಪು ಚುಕ್ಕೆಯಿಲ್ಲದ ನಿಖರ ಅಂಶಗಳನ್ನು ಜನರ ಮುಂದಿಡುವುದಾಗಿದೆ. ಈ ವ್ಯತ್ಯಾಸ ಗೊತ್ತಿಲ್ಲದಿದ್ದರೆ ಇಲಾಖೆಯ ಆರ್ಥಿಕ ತಜ್ಞರಿಂದ ತಿಳಿದುಕೊಳ್ಳುವುದು ಉತ್ತಮ.

ಬಜೆಟ್ ಮಂಡನೆಯೇ ದೊಡ್ಡ ಸಾಧನೆಯಲ್ಲ. ಸಿದ್ದರಾಮಯ್ಯ ಇದುವರೆಗೆ ಮಂಡಿಸಿರುವ ಬಜೆಟ್‌ಗಳಲ್ಲಿ ಜನ ಶಾಶ್ವತವಾಗಿ ನೆನಪಿಸಿಕೊಳ್ಳುವಂಥ ಯಾವುದಾದರೂ ಜನಪರ ಯೋಜನೆ ಇದೆಯೇ. ಬಜೆಟ್‌ನಲ್ಲಿ ಹಿರಿಯರಿಗೆ, ಬೆರಳೆಣಿಕೆಯಷ್ಟಿರುವ ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ನೀಡಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಅಂಕಿ–ಅಂಶಗಳು ಕಾಗದದ ಮೇಲಿವೆ. ವಾಸ್ತವದಲ್ಲಿ ಖಜಾನೆ ಖಾಲಿಯಾಗಿದೆ ಎಂಬುದಕ್ಕೆ ಇದೇ ಸಾಕ್ಷಿ.

ಸಾಲದ ಕೂಪದಲ್ಲಿದೆ: ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಿದ ಕುಖ್ಯಾತಿ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ. ಕೇಂದ್ರದ ಮೇಲೆ ಗೂಬೆ ಕೂರಿಸುವ ವ್ಯರ್ಥ ಪ್ರಯತ್ನವನ್ನು



ಜನ ನಂಬುವುದಿಲ್ಲ. ಜಿಎಸ್‌ಟಿ ಪಾಲು ಮತ್ತು ಅನುದಾನ ಪಡೆಯಲು ಸಮರ್ಪಕ ವರದಿ ಸಲ್ಲಿಸಲು ವಿಫಲವಾಗಿರುವ ಸರ್ಕಾರ, ತನ್ನ ದೋಷಪೂರಿತ ನಿರ್ಧಾರಗಳನ್ನು ಮುಚ್ಚಿ ಹಾಕಲು ಕೇಂದ್ರದತ್ತ ಬೆರಳು ಮಾಡುತ್ತಿದೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮಾಡಿರುವ ಒಟ್ಟು ಸಾಲದ ಮೊತ್ತ 8.14 ಲಕ್ಷ ಕೋಟಿ ರೂ. ದಾಟಿದೆ. 2025–26ನೇ ಆರ್ಥಿಕ ವರ್ಷದಲ್ಲಿ 48 ಸಾವಿರ ಕೋಟಿ ರೂ. ಬಡ್ಡಿ ಪಾವತಿಸಿದ್ದೀರಿ. ಸಾಲದ ಮೊತ್ತ ಏರುತ್ತಲೇ ಇದೆ. ಅಭಿವೃದ್ಧಿ ಮಾತ್ರ ಶೂನ್ಯ. ಇದು ಆರ್ಥಿಕ ದಿವಾಳಿತನವಲ್ಲದೆ ಮತ್ತೇನು.

ಗ್ಯಾರಂಟಿಗೆ ಪರಿಶಿಷ್ಟರ ಕಲ್ಯಾಣ ಹಣ: ಪಂಚ ಗ್ಯಾರಂಟಿಗಳಿಗೆ ಹಣ ಹೊಂದಿಸಲು ಎಸ್‌ಸಿಪಿ/ಟಿಎಸ್‌ಪಿ ನಿಧಿ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳ ಹಣ ಬಳಸಿಕೊಳ್ಳುವ ಮೂಲಕ ಈ ಸಮುದಾಯಗಳಿಗೆ ಸರ್ಕಾರ ಪರಮ ದ್ರೋಹ ಎಸಗಿದೆ.

ಮೀಸಲಾತಿ ವಿಚಾರದಲ್ಲಿ ಬಿಜೆಪಿ ಸರ್ಕಾರ ತೆಗೆದುಕೊಂಡಿದ್ದ ದಿಟ್ಟ ನಿರ್ಧಾರಗಳನ್ನು ರಕ್ಷಿಸಲಾಗದೆ, ಒಳ ಮೀಸಲಾತಿ ಹೆಸರಿನಲ್ಲಿ ಸಮುದಾಯಗಳ ನಡುವೆ ವಿಷಬೀಜ ಬಿತ್ತಿ, ಕುತಂತ್ರ ರಾಜಕಾರಣ ಮಾಡುತ್ತಿದ್ದೀರಿ.

2.85 ಲಕ್ಷ ಹುದ್ದೆ ಖಾಲಿಯಿವೆ: ರಾಜ್ಯದಲ್ಲಿ ಸುಮಾರು 2,85,000 ಸರ್ಕಾರಿ ಹುದ್ದೆಗಳು ಖಾಲಿ ಇವೆ. ಉದ್ಯೋಗ ಭರ್ತಿ ಮಾಡಲು ಹಣವಿಲ್ಲದೆ ಲಕ್ಷಾಂತರ ಯುವಜನರ ಭವಿಷ್ಯ ಮಸುಕಾಗಿಸಿದ್ದೀರಿ. ಮುಂದಿನ ಐದು ವರ್ಷಗಳಲ್ಲಿ ಸುಮಾರು 86 ಸಾವಿರ ನೌಕರರು ನಿವೃತ್ತರಾಗಲಿದ್ದಾರೆ.

ಪರಿಶಿಷ್ಟ ಜಾತಿಗಳ, ಹಿಂದುಳಿದ ವರ್ಗಗಳ ಕಲ್ಯಾಣ, ಕೃಷಿ, ಅರಣ್ಯ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಳಲ್ಲಿ ಐದು ಸಾವಿರಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಆದರೂ 56 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ಭರವಸೆ ನೀಡುತ್ತಾ ಪ್ರಕ್ರಿಯೆ ಮುಂದೂಡುತ್ತಲೇ ಇದ್ದೀರಿ.

ಚುನಾವಣೆ, ಒಳಮೀಸಲಾತಿ ಎಂಬ ನೆಪ ನೀಡುತ್ತೀರಿ. ಇದರಿಂದ ನಿರುದ್ಯೋಗಿಗಳು ಮತ್ತೆ ಬೀದಿಗಿಳಿದಿದ್ದಾರೆ. ಅವರ ರೊಚ್ಚು, ಆಕ್ರೋಶ ಸರ್ಕಾರವನ್ನು ಸುಮ್ಮನೇ ಬಿಡದು. ಖಾಲಿ ಖಜಾನೆ ತುಂಬಿಸಿಕೊಳ್ಳಲು ಪ್ರತಿ 500 ಮೀಟರ್‌ಗೊಂದು ವೈನ್ಸ್ ಸ್ಟೋರ್, ಬಾರ್‌ಗಳನ್ನು ತೆರೆದು ಕರ್ನಾಟಕವನ್ನು ಹೆಂಡದ ರಾಜ್ಯವನ್ನಾಗಿ ಮಾಡಿದ್ದೀರಿ. ಇದೇ ನಿಮ್ಮ ಆರ್ಥಿಕ ತಜ್ಞತೆಯ ಪಾಂಡಿತ್ಯ.

ಶೇ. 60 ವಿದ್ಯಾರ್ಥಿಗಳಿಗೆ ಆಶ್ರಯವಿಲ್ಲ: ಹಿಂದುಳಿದ ವರ್ಗಗಳ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಿಗೆ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿರುವ ಮಕ್ಕಳ ಪೈಕಿ ಶೇ.60ರಷ್ಟು ವಿದ್ಯಾರ್ಥಿಗಳಿಗೆ ಪ್ರವೇಶವೇ ಸಿಕ್ಕಿಲ್ಲ. ಹಾಸ್ಟೆಲ್‌ನಲ್ಲಿ ಸೀಟು ಸಿಗದ ಎಲ್ಲರಿಗೂ 1500 ರೂ. ವಿದ್ಯಾಸಿರಿಯೂ ಸಿಗುತ್ತಿಲ್ಲ, ಹಿಂದುಳಿದ ವರ್ಗಗಳ ಮಕ್ಕಳಿಗೆ ಸ್ಕಾಲರ್‌ಶಿಪ್ ಕೂಡ ನೀಡಿಲ್ಲ. 1.60 ಲಕ್ಷ ಮಕ್ಕಳಿಗೆ ಸ್ಕಾಲರ್‌ಶಿಪ್ ಬಾಕಿ ಇದೆ.

ಆದರೂ, ಸರ್ಕಾರದ ಆರ್ಥಿಕ ಸ್ಥಿತಿ ಗಟ್ಟಿ ಇದೆ ಎನ್ನುತ್ತಾ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದೀರಿ. ಮಕ್ಕಳ ನೋವಿನ ನಿಟ್ಟುಸಿರು ನಿಮ್ಮ ಅಹಿಂದ ಸರ್ಕಾರಕ್ಕೆ ತಟ್ಟದೇ ಇರದು. ಅರೆಕಾಲಿಕ ಉಪನ್ಯಾಸಕರಿಗೆ ತಿಂಗಳುಗಳಿಂದ ವೇತನ ಬಿಡುಗಡೆ ಮಾಡದೆ, ಅವರ ಕುಟುಂಬಗಳನ್ನು ಬೀದಿಗೆ ತಂದಿದ್ದೀರಿ. ಜ್ಞಾನ ದಾಸೋಹಿಗಳ ಬದುಕನ್ನು ಅತಂತ್ರಗೊಳಿಸಿದ ಅಪಖ್ಯಾತಿ ನಿಮ್ಮ ಸರ್ಕಾರಕ್ಕೆ ಸಲ್ಲುತ್ತದೆ.

ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿದ್ದರೆ, ಪ್ರತಿ ಜಿಲ್ಲೆಗೂ ಹೋಗೋಣ. ಬಹಿರಂಗ ವೇದಿಕೆಯಲ್ಲಿ ನಿಮ್ಮ ಯೋಜನೆಗಳು ಎಷ್ಟು ಜನರಿಗೆ ತಲುಪಿವೆ. ರೈತರು ಮತ್ತು ಶ್ರಮಿಕ ವರ್ಗದ ಕಲ್ಯಾಣ ಎಷ್ಟರ ಮಟ್ಟಿಗೆ ಆಗಿದೆ ಎಂಬುದರ ಕುರಿತು ಜನರ ಮುಂದೆ ಚರ್ಚಿಸೋಣ.

ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದು 3 ವರ್ಷಗಳಾಗಿವೆ. ಅಧಿಕಾರಕ್ಕೆ ಬಂದ ಒಂದು ತಿಂಗಳಲ್ಲಿ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುತ್ತೇವೆ ಎಂಬ ಭರವಸೆ ನೀಡಿದ್ದು ಮರೆತು ಹೋಯಿತೆ.

ನ್ಯಾಯಕ್ಕಾಗಿ ಧಾರವಾಡದಲ್ಲಿ ಲಕ್ಷಾಂತರ ಯುವಜನತೆ ಒತ್ತಾಯಿಸಿದಾಗ ಲಾಠಿ ಪ್ರಹಾರ ಮಾಡಿದ್ದೀರಿ. ಮಂಡ್ಯ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಗಳಿಗೆ ಪಿಂಚಣಿ ಕೊಡುವುದನ್ನೂ 10 ತಿಂಗಳಿಂದ ನಿಲ್ಲಿಸಲಾಗಿದೆ.

ಕಾನೂನು ಸುವ್ಯವಸ್ಥೆ ಕಾಪಾಡುವ ಪೊಲೀಸ್ ಇಲಾಖೆಗೆ ಒಂದು ತಿಂಗಳು ಕಳೆದರೂ ಸಂಬಳ ನೀಡಲು ಆಗುತ್ತಿಲ್ಲ. ಆರ್ಥಿಕ ಪರಿಸ್ಥಿತಿ ಯಾವ ಮಟ್ಟಿಗೆ ಹೋಗಿದೆ ಎಂಬುದನ್ನು ತೋರಿಸುವುದಿಲ್ಲವೇ.

ತುಂಗಭದ್ರಾ ಅಣೆಕಟ್ಟಿನ ಗೇಟ್ ಕುಸಿಯಿತು, ತೆಲಂಗಾಣ, ಆಂಧ್ರದ ಹಣಕ್ಕೆ ಕಾಯದೆ ರಾಜ್ಯ ಸರ್ಕಾರವೇ ಹಣ ಹಾಕಿ 21 ಗೇಟ್ ಕೂರಿಸಲಿದೆ ಎಂಬುದಾಗಿ ನೀರಾವರಿ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಕೊಟ್ಟರು. ಆಂಧ್ರ ಗೇಟ್ ದುರಸ್ತಿಗೆ ಹಣ ಕೊಟ್ಟಿತು. ಗ್ಯಾರಂಟಿಗಳ ಬಗ್ಗೆ ನಿಮ್ಮ ಪಕ್ಷದ ಹಿರಿಯ ಶಾಸಕ ಆರ್.ವಿ.ದೇಶಪಾಂಡೆ, ಹಣಕಾಸು ಸಲಹೆಗಾರ ಬಸವರಾಜ ರಾಯರೆಡ್ಡಿ, ಬಿ.ಆರ್.ಪಾಟೀಲ್ ಅವರಿಗೆ ಮನವರಿಕೆ ಮಾಡಿ, ಅನುದಾನ ಇಲ್ಲವೆಂದು ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಿದ್ದ ರಾಜು ಕಾಗೆ ಅವರಿಗೆ ಮೊದಲು ಮನವರಿಕೆ ಮಾಡಿ.

ರಾಜ್ಯ ಕಾಂಗ್ರೆಸ್ ಸರ್ಕಾರದ ಬಗ್ಗೆ ಜನರಿಗೆ ಕೋಪ, ಬೇಸರ ಇದೆ. ಇದರ ಪರಿಣಾಮವಾಗಿ ದಾವಣಗೆರೆ ದಕ್ಷಿಣದಲ್ಲಿ ಮತ್ತು ಬಾಗಲಕೋಟೆ ಉಪಚುನಾವಣೆಯಲ್ಲಿ ಬಿಜೆಪಿ ಗೆಲ್ಲಲಿದೆ ಎಂದರು.

ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾಗಿದೆ; ಶ್ವೇತಪತ್ರ ಹೊರಡಿಸುವ ಅಗತ್ಯ ಇಲ್ಲ

• ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ • ಉಭಯ ಸದನಗಳಲ್ಲಿ ಹಣಕಾಸು ಸ್ಥಿತಿಯ ವಿಸ್ತೃತ ಚರ್ಚೆ; ಬಜೆಟ್‌ಗೆ ಅನುಮೋದನೆ ಸಹ ಪಡೆದಿದ್ದೇವೆ

ಬೆಂಗಳೂರು, ಏ.1(ಕೆಎಂಶಿ)–ರಾಜ್ಯದ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿದ್ದು ಶ್ವೇತಪತ್ರ ಹೊರಡಿಸುವ ಅಗತ್ಯ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಕಳೆದ ಕೆಲವು ದಿನಗಳ ಹಿಂದೆ ವಿಧಾನ ಮಂಡಲದಲ್ಲಿ 2026–27ನೇ ಮುಂಗಡ ಪತ್ರಕ್ಕೆ ಅನುಮೋದನೆ ಪಡೆಯಲಾಗಿದೆ.

ಇದಕ್ಕೂ ಮುನ್ನ ವಿಧಾನಸಭೆ ಮತ್ತು ಪರಿಷತ್ತಿನಲ್ಲಿ ರಾಜ್ಯದ ಹಣಕಾಸು ಸ್ಥಿತಿಗತಿ ಬಗ್ಗೆ ವಿಸ್ತೃತ ಚರ್ಚೆಯಾಗಿ ಸರ್ಕಾರ ಉತ್ತರ ನೀಡಿದೆ. ನಮ್ಮ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿರುವಾಗ ಶ್ವೇತಪತ್ರ ಹೊರಡಿಸುವ ಅಗತ್ಯವಿಲ್ಲ. ಖಜಾನೆಯಲ್ಲಿ ಹಣ ಇಲ್ಲದಿದ್ದರೆ, ಪಂಚ ಗ್ಯಾರಂಟಿಗಳನ್ನು ನೀಡಲು ಸಾಧ್ಯವಿತ್ತೇ.

ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಹೇಗೆ ಸಾಧ್ಯವಾಗುತ್ತಿತ್ತು ಎಂದು ರಾಜ್ಯದ ಆರ್ಥಿಕ ಸ್ಥಿತಿಗತಿ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಬಿಜೆಪಿ ನಾಯಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಸರಕು ಮತ್ತು ಸೇವಾ ತೆರಿಗೆ ಸಂಗ್ರಹ ಹಾಗೂ ಹೂಡಿಕೆಯಲ್ಲಿ ದೇಶದಲ್ಲೇ 2ನೇ ಸ್ಥಾನದಲ್ಲಿರುವ ಕರ್ನಾಟಕದ ಹಣಕಾಸು ಸ್ಥಿತಿ ದೇಶದ ಆರ್ಥಿಕ ಸ್ಥಿತಿಗಿಂತ ಉತ್ತಮವಾಗಿದೆ ಎಂದರು.

ಬಿಜೆಪಿ ನಾಯಕರ ಆರೋಪ ಕುರಿತಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಜಿಡಿಪಿ ದರ ಶೇ.7.14 ಇದ್ದರೆ, ರಾಜ್ಯದ ಜಿಡಿಪಿ ಶೇ.8.1 ಇದೆ. ಇದರಲ್ಲೇ ಯಾವ ಸರ್ಕಾರದ ಆರ್ಥಿಕಸ್ಥಿತಿ ಚೆನ್ನಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದು.

ನಾವು ಅಧಿಕಾರ ವಹಿಸಿಕೊಳ್ಳುವುದಕ್ಕೂ ಮುನ್ನ ರಾಜ್ಯದ ಸಾಲ 5.30 ಲಕ್ಷ ಕೋಟಿ ಇತ್ತು. ಬರುವ 2027ರ ಮಾರ್ಚ್ ವೇಳೆಗೆ ರಾಜ್ಯದ ಸಾಲ 8.24 ಲಕ್ಷ ಕೋಟಿ ಆಗಲಿದೆ.

ಗ್ಯಾರಂಟಿಗೆ 1.31 ಲಕ್ಷ ಕೋಟಿ ವ್ಯಯ: ಬಿಜೆಪಿಯವರು ಬಡವರ ಯೋಜನೆಗಳಾದ ಗ್ಯಾರಂಟಿಗಳನ್ನು ವಿರೋಧಿಸುತ್ತಾರೆ. ಗ್ಯಾರಂಟಿ ಯೋಜನೆಗೆ ಒಟ್ಟು ಸುಮಾರು 1,31,000 ಕೋಟಿ ರೂ. ವ್ಯಯ ಮಾಡಿ ಜನಸಾಮಾನ್ಯರ ಬದುಕಿಗೆ ಅರ್ಪಿಸಿದ್ದೇವೆ. ಕಾಂಗ್ರೆಸ್ ಸರ್ಕಾರ ಯೂನಿವರ್ಸಲ್ ಬೇಸಿಕ್ ಇನ್ಕಂ ತತ್ವದಲ್ಲಿ ನಂಬಿಕೆಯಿರಿಸಿ, ತಳಸಮುದಾಯದವರಿಗೆ ಅನುಕೂಲ ಕಲ್ಪಿಸುತ್ತಿದೆ. ಸಮಾಜದ ಕಟ್ಟಕಡೆಯ ಕಷ್ಟಗಳಿಗೆ ಸ್ಪಂದಿಸುವುದು ಮುಖ್ಯ ಎಂದರು. ಬಿಜೆಪಿಯವರು ಗ್ಯಾರಂಟಿಗಳಲ್ಲಿ ಭ್ರಷ್ಟಾಚಾರ ನಡೆಯುತ್ತದೆ. ಖಜಾನೆ ಖಾಲಿಯಾಗುತ್ತದೆ ಎಂದು ಟೀಕಿಸುತ್ತಾರೆ. ಆದರೆ ಜನರ ಖಾತೆಗೆ ನೇರವಾಗಿ ಹಣ ತಲುಪುವುದರಿಂದ ಭ್ರಷ್ಟಾಚಾರಕ್ಕೆ ಆಸ್ಪದವಿಲ್ಲ.

ನಾಲ್ಕು ವರ್ಷದಲ್ಲಿ 2,56,000 ಸಾಲ ನಮ್ಮದು: ಬಿಜೆಪಿಯವರು ತಮ್ಮ ಅವಧಿಯ 2023ರ ಮಾರ್ಚ್‌ವರೆಗೆ 53,0000 ಕೋಟಿ ರೂ.ಗೂ ಹೆಚ್ಚು ಸಾಲ ಮಾಡಿದ್ದರೆ, ನಮ್ಮ ಕಾಂಗ್ರೆಸ್ ಸರ್ಕಾರ, ಕಳೆದ ನಾಲ್ಕು ವರ್ಷದಲ್ಲಿ 2,56,000 ಕೋಟಿ ರೂ. ಸಾಲ ಮಾಡಿದೆ, ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದಾಗ ದೇಶದ ಮೇಲೆ 53.11 ಲಕ್ಷ ಕೋಟಿ ರೂ. ಸಾಲವಿತ್ತು. ಈಗ 218 ಲಕ್ಷ ಕೋಟಿ ರೂ. ಸಾಲವಿದೆ. ಅಂದರೆ 12 ವರ್ಷದ ಅಧಿಕಾರಾವಧಿಯಲ್ಲಿ 165 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ.

ಬಿಜೆಪಿ ಪ್ರಣಾಳಿಕೆಯಲ್ಲಿ ಸರ್ಕಾರದ ಬೆಲೆ ಏರಿಕೆ ಟೀಕಿಸಲಾಗಿದೆ. ಎಲ್‌ಪಿಜಿ ಸಿಲಿಂಡರ್‌ಗೆ 414 ರೂ. ಇದ್ದದ್ದು, ಪ್ರಧಾನಿ ಮೋದಿ ಬಂದ ನಂತರ ಸುಮಾರು ಒಂದು ಸಾವಿರ ರೂ. ಆಗಿದೆ.

ಬಿಜೆಪಿಯದು ಬರೀ ಬೆಲೆ ಏರಿಕೆ: ಪೆಟ್ರೋಲ್, ಡೀಸೆಲ್ ದರವನ್ನೂ ಕೇಂದ್ರ ಸರ್ಕಾರ ಹೆಚ್ಚಿಸಿದೆ. ದೇಶದ ವಿವಿಧ ರಾಜ್ಯಗಳ ಬೆಲೆ ಏರಿಕೆಗೆ ಹೋಲಿಸಿದರೆ, ರಾಜ್ಯದಲ್ಲಿ ಗಣನೀಯವಾಗಿ ಬೆಲೆಗಳು ಕಡಿಮೆಯಿದೆ. ಕರ್ನಾಟಕದ ಹಣಕಾಸಿನ ಸ್ಥಿತಿ ಸುಭದ್ರವಾಗಿದ್ದು, ಬಿಜೆಪಿಯವರು ಸುಳ್ಳು ಹೇಳಿಕೆ ನೀಡುತ್ತಿದ್ದಾರೆ ಎಂದರು.

ಪ್ರಧಾನಿ ಮೋದಿ ಅಧಿಕಾರಾವಧಿಯಲ್ಲಿ ಡಾಲರ್ ಬೆಲೆ ಹೆಚ್ಚುತ್ತಿದ್ದು, ರೂಪಾಯಿ ಮೌಲ್ಯ ಕುಸಿಯುತ್ತಿದೆ. ಅವರು ನೀಡಿದ ಭರವಸೆಗಳನ್ನು ಈಡೇರಿಸಲಿಲ್ಲ. ಅಚ್ಛೇ ದಿನಗಳು ಬರಲೇ ಇಲ್ಲ, ರೈತರ ಆದಾಯ ದುಪ್ಪಟ್ಟು, 2 ಕೋಟಿ ಉದ್ಯೋಗ, ಎಲ್ಲರ ಖಾತೆಗೆ 15 ಲಕ್ಷ ರೂ. ಎಂದಿದ್ದರೂ, ಒಂದು ಭರವಸೆಯನ್ನೂ ಈಡೇರಿಸಲಿಲ್ಲ ಎಂದರು.

ಹೊರ್ಮುಜ್ ಬಂದ್: ನಿಂತಲ್ಲೇ ನಿಂತ 2,000 ಹಡಗು

ನೀರು, ಆಹಾರಕ್ಕಾಗಿ ನಾವಿಕರ ಮೊರೆ



ನವದೆಹಲಿ: ನಿಂತಲ್ಲೇ ನಿಂತ 2,000 ಹಡಗು, 20,000ಕ್ಕೂ ಹೆಚ್ಚು ನಾವಿಕರ ಮೊಗದಲ್ಲಿ ಭವಿಷ್ಯದ ಅನಿಶ್ಚಿತತೆಯ ಆತಂಕ.. ಎತ್ತ ನೋಡಿದರೂ ಒಂದೇ ದೃಶ್ಯ, ಸಂಗ್ರಹಿಸಿದ್ದ ಆಹಾರ, ಕುಡಿಯುವ ನೀರು ಮುಗಿಯುತ್ತಿದೆ.. ಸಹಾಯಕ್ಕಾಗಿ ಮೊರೆ ಇಡುವ ಸಂದರ್ಭ ನಿರ್ಮಾಣವಾಗಿದೆ.

ಇದು ಸದ್ಯ ಹೊರ್ಮುಜ್ ಜಲಸಂಧಿಯ ಓಮಾನ್ ಭಾಗದಲ್ಲಿ ಕಂಡುಬರುತ್ತಿರುವ ಸ್ಥಿತಿ.. ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷದ ಹಿನ್ನೆಲೆಯಲ್ಲಿ ಇರಾನ್, ಹೊರ್ಮುಜ್ ಜಲಸಂಧಿಯು ಬಂದ್ ಆಗಿದ್ದು, ತೈಲ, ಸರಕನ್ನು ಹೊತ್ತ ಸಾವಿರಾರು ಹಡಗುಗಳು ಆ ಬದಿ ಯಲ್ಲಿ ನಿಂತಿವೆ. ಸಾವಿರಾರು ಮಂದಿ ನಾವಿಕರು ಜೀವ ಕೈಯಲ್ಲಿ ಹಿಡಿದು ಹಡಗು ಸಂಚಾರಕ್ಕಾಗಿ ಕಾಯುತ್ತಿದ್ದಾರೆ. ಆಗಾಗ್ಗೆ ಸ್ಫೋಟದ ಸದ್ದು, ಬೆಂಕಿ ಕೆನ್ನಾಲಿಗೆ ಕಂಡುಬರುತ್ತಿದ್ದು, ಯಾವಾಗ ಏನಾಗುತ್ತದೋ ಎಂಬ ಆತಂಕ ಅವರಲ್ಲಿ ಮನೆ ಮಾಡಿದೆ.

ನೆರವಿಗೆ ಮೊರೆ: ನಾವಿಕರ ಸಹಾಯವಾಣಿಗೆ ದಿನಕ್ಕೆ ನೂರಾರು ಕರೆಗಳು ಬರುತ್ತಿವೆ. ಹಡಗುಗಳಲ್ಲಿ ನೀರು ಮತ್ತು ಆಹಾರ ಸೇರಿದಂತೆ ಅಗತ್ಯ ವಸ್ತುಗಳು ಮುಗಿದುಹೋಗಿದ್ದು, ಕೂಡಲೇ ಪೂರೈಸುವಂತೆ ನಾವಿಕರ ಅಂತರರಾಷ್ಟ್ರೀಯ ಸಂಚಾರ ಕಾರ್ಮಿಕರ ಸಂಘಕ್ಕೆ(ಐಟಿಎಫ್) ಮೊರೆ ಇಟ್ಟಿದ್ದಾರೆ.

ಎಲ್ಲೆಡೆ ಭಯದ ವಾತಾವರಣವಿದೆ ಎಂದು ಐಟಿಎಫ್‌ನ ಅರಬ್ ಮತ್ತು ಇರಾನ್ ವಲಯದ ನಾವಿಕರ ಸಮನ್ವಯಕಾರ ಮೊಹಮ್ಮದ್ ಅರ್‍ರಾಚೆಡಿ ಹೇಳಿದ್ದಾರೆ. ನಾವಿಕರೊಬ್ಬರಿಂದ ಮಧ್ಯರಾತ್ರಿ 2 ಗಂಟೆಗೆ ನಾನು ಕರೆ ಸ್ವೀಕರಿಸಿದೆ. ಅತ್ಯಂತ ಗಾಬರಿಗೊಂಡಿದ್ದ ನಾವಿಕ ಬಾಂಬ್ ದಾಳಿಯಲ್ಲಿ ಸಾಯಲು ನಾವು ಇಲ್ಲಿಗೆ ಬಂದಿದ್ದೇವೆಯೇ, ನಮಗೆ ಸಾಯಲು ಇಷ್ಟವಿಲ್ಲ. ದಯವಿಟ್ಟು ನಮ್ಮನ್ನು ಇಲ್ಲಿಂದ ಕರೆದುಕೊಂಡು ಹೋಗಿ ಎಂದು ಗೋಗರೆದರು ಎಂದು ಅವರು ಹೇಳಿದ್ದಾರೆ.

ನಾವಿಕರು ಏಕೆ ಹೊರಬರಲಾಗುತ್ತಿಲ್ಲ: ಸಂಘರ್ಷ ಆರಂಭವಾದ ನಂತರ, ಹೊರ್ಮುಜ್ ಜಲಸಂಧಿಯ ಸುತ್ತಲಿನ ಪ್ರದೇಶವನ್ನು ಯುದ್ಧ ವಲಯವೆಂದು ಘೋಷಿಸಲಾಗಿದೆ. ಅಂತಹ ಪರಿಸ್ಥಿತಿಯಲ್ಲಿ ನಾವಿಕರು ಕಂಪನಿಯ ವೆಚ್ಚದಲ್ಲಿ ವಾಪಸಾತಿ ಮತ್ತು ಕೆಲಸ ಮಾಡುವವರು ಎರಡು ಪಟ್ಟು ವೇತನಕ್ಕೆ ಅರ್ಹರಾಗಿರುತ್ತಾರೆ. ಆದರೆ, ಅನೇಕ ನಾವಿಕರು ಈ ಒಪ್ಪಂದಗಳಿಗೆ ಒಳಪಡದೇ ಹಡಗುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹೊರ್ಮುಜ್ ದಿಗ್ಬಂಧನವು ಅವರ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರಿದೆ.

ಉದ್ದೇಶಿತ ವಿಧಾನಸಭಾ–ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆ ಫಲ; ಹಲವರ ರಾಜಕೀಯ ಭವಿಷ್ಯಕ್ಕೆ ಕುತ್ತು ಸಾಧ್ಯತೆ

ಬೆಂಗಳೂರು,ಏ.1– ಉದ್ದೇಶಿತ ವಿಧಾನಸಭಾ ಹಾಗೂ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯು ಎಲ್ಲರ ಲೆಕ್ಕಾಚಾರಗಳನ್ನು ಉಲ್ಟಾ ಮಾಡುವುದಲ್ಲದೆ, ಅನೇಕರ ರಾಜಕೀಯ ಭವಿಷ್ಯಕ್ಕೂ ಕುತ್ತು ತರಲಿದೆ ಎನ್ನಲಾಗುತ್ತಿದೆ. ಈ ಮಧ್ಯೆ ರಾಜ್ಯದ ವಿಧಾನಸಭಾ ಕ್ಷೇತ್ರಗಳ ಸಂಖ್ಯೆಯು 224ರಿಂದ 336ಕ್ಕೆ ಹಾಗೂ ಲೋಕಸಭಾ ಕ್ಷೇತ್ರಗಳ ಸಂಖ್ಯೆಯು 28ರಿಂದ 42ಕ್ಕೆ ಹೆಚ್ಚಳಗೊಳ್ಳಬಹುದೆನ್ನಲಾಗುತ್ತಿದೆ.

ಪ್ರತಿ ಲೋಕಸಭಾ ಕ್ಷೇತ್ರಕ್ಕೆ 8 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಂತೆ ಮರು ವಿಂಗಡಣೆ ನಡೆಯಲಿದೆ. ಜೊತೆಗೆ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಕಾಯ್ದೆಯು ಕ್ಷೇತ್ರ ಮರು ವಿಂಗಡಣೆಯೊಂದಿಗೆ ಅನ್ವಯವಾಗಲಿದೆ. ಸಂಸತ್ತಿನ ಉಭಯ ಸದನಗಳಾದ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಈಗಾಗಲೇ ಮಹಿಳಾ ಮೀಸಲಾತಿ ಮಸೂದೆ–2023 (ನಾರಿ ಶಕ್ತಿ ವಂದನಾ ಅಧಿನಿಯಮ್) ಅಂಗೀಕಾರಗೊಂಡಿದೆ. ಮರು ವಿಂಗಡನೆಯ ನಂತರ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ 336ಕ್ಕೆ ಏರಿಕೆಯಾದರೆ, ಮೊದಲ ಬಾರಿಗೆ ವಿಧಾನಸಭೆಯಲ್ಲಿ 110 ಮಹಿಳಾ ಸದಸ್ಯರಿಗೆ ಅವಕಾಶ ಲಭ್ಯವಾಗುವ ಮೂಲಕ ಪರಿಶಿಷ್ಟ ಜಾತಿಯವರಿಗೆ ಶೇ.17, ಪರಿಶಿಷ್ಟ ಪಂಗಡದವರಿಗೆ ಶೇ.7 ಸೇರಿದಂತೆ ಶೇ.24ರಷ್ಟು ಮೀಸಲಾತಿ ದೊರೆಯಲಿದೆ.

ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆ ಫಲಿತಾಂಶ ಮೇ 4ರಂದು ಹೊರ ಬೀಳಲಿದ್ದು, ಆ ಬಳಿಕ ಕೇಂದ್ರ ಸರ್ಕಾರ, ಮೇ 2 ಅಥವಾ 3ನೇ ವಾರದಲ್ಲಿ ಸಂಸತ್ತಿನ ಉಭಯ ಸದನಗಳ ವಿಶೇಷ ಅಧಿವೇಶನ ಕರೆಯಲಿದೆ. ಕ್ಷೇತ್ರ ಮರು ವಿಂಗಡಣೆ ಮಸೂದೆ ಅಂಗೀಕಾರವಾದ ನಂತರ ಚುನಾವಣಾ ಆಯೋಗ, ಆಯಾ ವಿಧಾನ ಸಭಾ ಮತ್ತು ಲೋಕಸಭಾ ಕ್ಷೇತ್ರಗಳ ಗಡಿಯನ್ನು ಗುರುತಿಸುವ ಪ್ರಕ್ರಿಯೆಗೆ ಚಾಲನೆ ದೊರೆಯಲಿದೆ.

ಬೇರ್ಪಡಲಿದೆಂಯೇ ಮೈಸೂರಿನಿಂದ ಕೊಡಗು: ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಹಾಲಿ ಇರುವ 3 ಲೋಕಸಭಾ ಕ್ಷೇತ್ರಗಳ ಜೊತೆಗೆ ಹೆಚ್ಚುವರಿಯಾಗಿ 3 ಕ್ಷೇತ್ರಗಳು ರಚನೆಯಾಗಲಿವೆ.

ಇದೇ ಮೊದಲ ಬಾರಿಗೆ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಬೇರ್ಪಟ್ಟು ರಾಮನಗರ, ಮೈಸೂರಿನಿಂದ ಬೇರ್ಪಟ್ಟು ಕೊಡಗು, ಚಿಕ್ಕಮಗಳೂರು, ವಿಜಯನಗರ, ಶಿರಾ ಇಲ್ಲವೇ ತಿಪಟೂರು, ಶಿರಸಿ ಸೇರಿದಂತೆ ಹೆಚ್ಚುವರಿಯಾಗಿ 12 ಲೋಕಸಭಾ ಕ್ಷೇತ್ರಗಳು ಅಸ್ತಿತ್ವಕ್ಕೆ ಬರಲಿವೆ ಎಂದು ಹೇಳಲಾಗುತ್ತಿದೆ.



ಸರ್ಕಾರದ ನಡೆಯಿಂದ ಹತ್ತು ಹಲವು ಅನುಮಾನ

ಕ್ರೀಡಾಂಗಣ ನಿರ್ಧಾರದಿಂದ ಹಿಂದೆ ಸರಿದರೂ ಭೂಮಿ ಮಾತ್ರ ರೇಷ್ಮೆ ಇಲಾಖೆಗೆ ಇನ್ನೂ ಹಸ್ತಾಂತರಿಸಿಲ್ಲ!!

ಮೈಸೂರು,ಏ.1(ಎಂಟಿವೈ)– ತಿ.ನರಸೀಪುರದ ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ನಿರ್ಮಿಸಲುದ್ದೇಶಿಸಿದ್ದ ತಾಲೂಕು ಕ್ರೀಡಾಂಗಣ ನಿರ್ಮಾಣದಿಂದ ಹಿಂದೆ ಸರಿದಿರುವುದಾಗಿ ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ. ವೆಂಕಟೇಶ್, ವಿಧಾನಸಭಾ ಅಧಿವೇಶನದಲ್ಲಿ ಘೋಷಿಸಿದ್ದರೂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಮಂಜೂರು ಮಾಡಿದ್ದ 5.08 ಎಕರೆ ಭೂಮಿಯನ್ನು ಮರಳಿ ರೇಷ್ಮೆ ಇಲಾಖೆಗೆ ಹಿಂದಿರುಗಿಸಲು ಮೀನಾಮೇಷ ಎಣಿಸುತ್ತಿರುವುದು ಸ್ಥಳೀಯರಲ್ಲಿ ಹಲವು ಅನುಮಾನ ಮೂಡಿಸಿದೆ.

ವಿಶ್ವ ಪ್ರಸಿದ್ಧ ಮೈಸೂರು ರೇಷ್ಮೆ ಸೀರೆಗೆ ರೇಷ್ಮೆ ನೂಲು ತಯಾರಿಸಿ ಪೂರೈಸುತ್ತಿರುವ ತಿ.ನರಸೀಪುರದ ರೇಷ್ಮೆ ನೂಲು ತಯಾರಿಕಾ ಘಟಕಕ್ಕೆ 114 ವರ್ಷ ಇತಿಹಾಸವಿದ್ದು, ಮೈಸೂರಲ್ಲಿರುವ ಕೆಎಸ್‌ಐಸಿ (ರೇಷ್ಮೆ ಸೀರೆ ತಯಾರಿಕೆಗೆ)ಗೆ ನೂಲು ಸರಬರಾಜು ಮಾಡುವ ಮಾತೃಸಂಸ್ಥೆ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂತಹ ಸಂಸ್ಥೆಗೆ ಸೇರಿದ 13.11 ಎಕರೆ ಭೂಮಿಯಲ್ಲಿ 5.08 ಎಕರೆ ಭೂಮಿಯನ್ನು ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ನೀಡುವ ಮೂಲಕ ಕೆಂಗಣ್ಣಿಗೆ ಗುರಿಯಾಗಿದ್ದ ಸರ್ಕಾರ, ಹೋರಾಟ ತೀವ್ರಗೊಂಡ ಹಿನ್ನೆಲೆಯಲ್ಲಿ ಮಾ.5ರಂದು ಅಧಿವೇಶನದಲ್ಲಿಯೇ ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ತಾಲೂಕು ಕ್ರೀಡಾಂಗಣದ ಪ್ರಸ್ತಾಪವನ್ನು ಕೈಬಿಟ್ಟಿರುವುದಾಗಿ ಪ್ರಕಟಿಸಿತ್ತು. ಇದರಿಂದ ಪರಿಸರವಾದಿಗಳು, ವಿವಿಧ ಸಂಘ–ಸಂಸ್ಥೆಗಳ ಕಾರ್ಯಕರ್ತರು ಹಾಗೂ ನೂಲು ತಯಾರಿಕಾ ಘಟಕದ ನೌಕರರು ಹೋರಾಟ ಕೈಬಿಟ್ಟಿದ್ದರು.

ಭೂಮಿ ಹಿಂದಿರುಗಿಸಲು ವಿಳಂಬವೇಕೆ?: ಸರ್ಕಾರ ಒಂದೆಡೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರೂ, ಕ್ರೀಡಾ ಇಲಾಖೆಗೆ ಮಂಜೂರು ಮಾಡಿದ್ದ 5.08 ಎಕರೆ ಭೂಮಿಯನ್ನು ರೇಷ್ಮೆ ಇಲಾಖೆಗೆ ಹಸ್ತಾಂತರಿಸಲು ವಿಳಂಬ ನೀತಿ ಅನುಸರಿಸುತ್ತಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಸರ್ಕಾರದ ಎರಡು ಇಲಾಖೆಗಳ ನಡುವೆ ಆಗಿರುವ ಭೂಮಿ ಹಸ್ತಾಂತರ ಪ್ರಕ್ರಿಯೆಯಲ್ಲಿ ಪತ್ರ ವ್ಯವಹಾರದ ಮೂಲಕ ಮತ್ತೆ ಈ ಭೂಮಿಯನ್ನು ಮಾತೃ ಇಲಾಖೆಗೆ ಸುಲಭವಾಗಿ ಹಿಂದಿರುಗಿಸಬಹುದು. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆದರೆ, ಆ ಪತ್ರವನ್ನು ಮುಂದಿಟ್ಟುಕೊಂಡು ತಿ.ನರಸೀಪುರದ ತಹಶೀಲ್ದಾರರಿಂದ ಆರ್‌ಟಿಸಿಯಲ್ಲಿ ನಮೂದಾಗಿರುವ ಕ್ರೀಡಾ ಇಲಾಖೆಯ ಹೆಸರು ತೆಗೆದು, ಮತ್ತೆ ರೇಷ್ಮೆ ಇಲಾಖೆಯ ಹೆಸರು ಸೇರಿಸಬಹುದು. ಆದರೆ, ಆ ಪ್ರಕ್ರಿಯೆ ಅಧಿವೇಶನ ಮುಗಿದ ನಂತರ ನಡೆಯಬಹುದು ಎಂಬ ನಿರೀಕ್ಷೆಯಲ್ಲಿದ್ದವರಿಗೆ ಇದೀಗ ಅನುಮಾನ ಬರಿಸಿದೆ.

ಭೂಮಿ ಹಸ್ತಾಂತರಿಸುವಂತೆ ಕೇಳಿಕೊಂಡ ರೇಷ್ಮೆ ಇಲಾಖೆ: ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ಕಲ್ಲಿದ್ದಲು ಸಂಗ್ರಹಕ್ಕೆ, ಬೂದಿ ಶೇಖರಣೆಗೆ ಹಾಗೂ ಇಟಿಪಿ ನಿರ್ಮಿಸುವುದಕ್ಕೆ ಸ್ಥಳಾವಕಾಶದ ಅಗತ್ಯವಿದ್ದು, ಕ್ರೀಡಾ ಇಲಾಖೆಗೆ ನೀಡಿರುವ 5.08 ಎಕರೆ ಭೂಮಿಯನ್ನು ಮರಳಿ ನೀಡುವಂತೆ ರೇಷ್ಮೆ ಇಲಾಖೆ ಕೇಳಿಕೊಂಡಿದೆ. ಆದರೆ, ಇದಕ್ಕೆ ಇದುವರೆಗೂ ಪ್ರತಿಕ್ರಿಯೆ ಬಂದಿಲ್ಲ. ಇದರಿಂದ ಭೂಮಿ ಹಿಂದಿರುಗಿಸುವ ಪ್ರಕ್ರಿಯೆ ಇನ್ನಷ್ಟು ವಿಳಂಬವಾಗಲಿದೆಯೆ? ಎಂಬ ಪ್ರಶ್ನೆ ಕಾಡಲಾರಂಭಿಸಿದೆ.

ಉಪಚುನಾವಣೆ ಅಡ್ಡಿಯೇ?: ರಾಜ್ಯದಲ್ಲಿ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣದಲ್ಲಿ ನಡೆಯುತ್ತಿರುವ ಉಪಚುನಾವಣೆ ತಿ.ನರಸೀಪುರದಲ್ಲಿರುವ ರೇಷ್ಮೆ ನೂಲು ತಯಾರಿಕಾ ಘಟಕಕ್ಕೆ ಸೇರಿದ 5.08 ಎಕರೆ ಭೂಮಿಯನ್ನು ಕ್ರೀಡಾ ಇಲಾಖೆಯಿಂದ ವಾಪಸ್ ಕೊಡಿಸುವ ಪ್ರಕ್ರಿಯೆ ಅಡ್ಡಿಯಾಗುತ್ತಿದೆಯೇ ಎಂಬ ಪ್ರಶ್ನೆ ಉದ್ಭವಿಸಿದೆ. ಈ ಸಂಬಂಧ ಹೆಸರು ಹೇಳಲಿಚ್ಚಿಸದ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದು, ಉಪಚುನಾವಣೆ ಮುಗಿದ ಬಳಿಕ ಕ್ರೀಡಾ ಇಲಾಖೆಗೆ ಈ ಹಿಂದೆ ನೀಡಿದ್ದ ಭೂಮಿಯನ್ನು ರೇಷ್ಮೆ ಇಲಾಖೆಗೆ ಮರಳಿ ಹಸ್ತಾಂತರಿಸುವ ಪ್ರಕ್ರಿಯೆ ನಡೆಯಲಿದೆ. ಈಗಾಗಲೇ ರೇಷ್ಮೆ ಇಲಾಖೆ ಆಯುಕ್ತರು ಪತ್ರ ಬರೆದಿದ್ದು, ಇದಕ್ಕೆ ಸರ್ಕಾರದ ಹಿರಿಯ ಅಧಿಕಾರಿಗಳು ಉಪಚುನಾವಣೆ ಮುಗಿದ ನಂತರ ಭೂಮಿ ಹಿಂದಿರುಗಿಸುವ ಪ್ರಕ್ರಿಯೆ ನಡೆಯಲಿದೆ ಎಂಬ ಮಾಹಿತಿ ನೀಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಆದಷ್ಟು ಬೇಗ ಅಧಿಕೃತ ಆದೇಶ ಹೊರಡಿಸಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಯವರಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಂಸದ ಸುನೀಲ್ ಬೋಸ್ ತಿ.ನರಸೀಪುರದವರೇ ಆಗಿದ್ದಾರೆ. ಅದರಲ್ಲೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರು ಮೈಸೂರು ಜಿಲ್ಲೆಯವರೇ ಆಗಿದ್ದಾರೆ. ಅಧಿವೇಶನದಲ್ಲಿ ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಿಸುವ ನಿರ್ಧಾರದಿಂದ ಹಿಂದೆ ಸರಿದಿರುವುದಾಗಿ ಸರ್ಕಾರವೇ ಪ್ರಕಟಿಸಿದೆ. ಇದರಿಂದ ನಮಗೆ ಸರ್ಕಾರದ ನಂಬಿಕೆ ಇದೆ. ಕೊಟ್ಟ ಮಾತು ಉಳಿಸಿಕೊಂಡು ಭೂಮಿಯನ್ನು ಕ್ರೀಡಾ ಇಲಾಖೆಯಿಂದ ರೇಷ್ಮೆ ಇಲಾಖೆಗೆ ಹಿಂದಿರುಗಿಸುವ ಅಧಿಕೃತ ಆದೇಶವನ್ನು ಶೀಘ್ರವೇ ಹೊರಡಿಸಬೇಕು ಎಂದು ನೂಲು ತಯಾರಿಕಾ ಘಟಕದ ನೌಕರರು ಆಗ್ರಹಿಸಿದ್ದಾರೆ.

ರೇಷ್ಮೆ ಕಾರ್ಖಾನೆ ವಿರುದ್ಧ ಪರಿಸರ, ಶಬ್ಧ ಮಾಲಿನ್ಯ ದೂರು!


ಕ್ರೀಡಾಂಗಣ ವಿರೋಧಿಸಿದ್ದಕ್ಕೆ ಪ್ರತೀಕಾರದ ನಡೆ: ಕಾರ್ಮಿಕರ ಅಳಲು

ಮೈಸೂರು,ಏ.1(ಎಂಟಿವೈ)– ತಿ.ನರಸೀಪುರದ ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ತಾಲೂಕು ಕ್ರೀಡಾಂಗಣಕ್ಕೆ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಇದೀಗ ಕೆಲವರು ಜನ ವಸತಿ ಪ್ರದೇಶದಲ್ಲಿರುವ ನೂಲು ತಯಾರಿಕಾ ಘಟಕದಿಂದ ಪರಿಸರ ಮತ್ತು ಶಬ್ಧ ಮಾಲಿನ್ಯ ಉಂಟಾಗುತ್ತಿದೆ ಎಂಬ ಷಡ್ಯಂತ್ರ ಆರಂಭವಾಗಿದೆ.

ಕ್ರೀಡಾ ಇಲಾಖೆ ಹೆಸರಿಗೆ ಮಂಜೂರಾಗಿರುವ ರೇಷ್ಮೆ ಇಲಾಖೆಯ 5.08 ಎಕರೆ ಭೂಮಿಯನ್ನು ಮರಳಿ ವಾಪಸ್ ಪಡೆಯಲು ರೇಷ್ಮೆ ಇಲಾಖೆ ಪತ್ರ ವ್ಯವಹಾರ ನಡೆಸುತ್ತಿದ್ದು, ನೂಲು ತಯಾರಿಕಾ ಘಟಕದ ನೌಕರರು ಒತ್ತಾಯಿಸುತ್ತಿದ್ದಾರೆ. ಆದರೆ, ಕೆಲವರು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರೊಂದನ್ನು ನೀಡಿ, ಜನವಸತಿ ಪ್ರದೇಶ ಸಮೀಪವೇ ಇರುವ ರೇಷ್ಮೆ ನೂಲು ತಯಾರಿಕಾ ಘಟಕದಿಂದ ಶಬ್ದ ಮತ್ತು ಪರಿಸರ ಮಾಲಿನ್ಯವಾಗುತ್ತಿದೆ ಎಂದು ದೂರು ನೀಡಿದ್ದಾರೆ. ಈ ದೂರಿನ ಹಿಂದೆ ಷಡ್ಯಂತ್ರವಿದ್ದು, ತಾಲೂಕು ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ನಡೆದ ಪ್ರತಿಭಟನೆಗೆ ಪ್ರತೀಕಾರವಾಗಿ ನೂಲು ತಯಾರಿಕಾ ಘಟಕದ ವಿರುದ್ಧ ಸುಳ್ಳು ದೂರು ನೀಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ದೂರಿನಲ್ಲೇನಿದೆ: ರೇಷ್ಮೆ ನೂಲು ತಯಾರಿಕಾ ಘಟಕ ಜನವಸತಿ ಪ್ರದೇಶದಲ್ಲಿದ್ದು, ಇದರಲ್ಲಿನ ಯಂತ್ರಗಳ ಶಬ್ದದಿಂದ ಸ್ಥಳೀಯರಿಗೆ ತೊಂದರೆಯಾಗುತ್ತಿದೆ. ಭಾರೀ ಶಬ್ಧ ಮಾಲಿನ್ಯವಾಗುತ್ತಿದೆ. ನೂಲು ತಯಾರಿಕಾ ಪ್ರಕ್ರಿಯೆಯಲ್ಲಿ ಬಳಸಿದ ನೀರು ಸ್ಥಳೀಯ ಪರಿಸರವನ್ನು ಹಾಳು ಮಾಡುತ್ತಿದೆ. ದುರ್ವಾಸನೆ ಬೀರುತ್ತಿದ್ದು, ಸ್ಥಳೀಯರಿಗೆ ತೊಂದರೆಯಾಗುತ್ತಿದೆ. ಮಲೀನಗೊಂಡ ನೀರು ಕಪಿಲಾ ನದಿಗೆ ಸೇರುತ್ತಿದೆ ಎಂದು ಆರೋಪಿಸಲಾಗಿದೆ.

ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಶೀಲನೆ: ಪರಿಸರ ಮಾಲಿನ್ಯವಾಗುತ್ತಿರುವ ಬಗ್ಗೆ ದೂರು ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳ ತಂಡ ನೂಲು ತಯಾರಿಕಾ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದೆ. ಈ ವೇಳೆ ಯಂತ್ರಗಳಿಂದ ಶಬ್ದ ಮಾಲಿನ್ಯವಾಗುವ ಪ್ರಮಾಣದಷ್ಟು ಶಬ್ದ ಯಂತ್ರಗಳಿಂದ ಹೊರ ಬರುತ್ತಿಲ್ಲ ಎಂದು ಅಧಿಕಾರಿಗಳು ಮಾಪಕ ಬಳಸಿ, ಅವಲೋಕಿಸಿದ್ದಾರೆ. ಅಲ್ಲದೆ, ನೂಲು ತಯಾರಿಕಾ ಘಟಕದಿಂದ ಹೊರ ಬರುವ ವಾಸನೆ, ತಯಾರಿಕಾ ಘಟಕದಲ್ಲಿ ಬಳಸಲ್ಪಟ್ಟ ನೀರಿನ ಗುಣಮಟ್ಟ ಪರಿಶೀಲಿಸಿದ್ದಾರೆ. ಈ ವೇಳೆ ಬಳಸಲ್ಪಟ್ಟ ನೀರಿನಲ್ಲಿ ಯಾವುದೇ ರಾಸಾಯನಿಕ ಪದಾರ್ಥಗಳ ಅಂಶ ಪತ್ತೆಯಾಗಿಲ್ಲ. ಆದರೂ ನೀರು ಶುದ್ಧೀಕರಣ ಘಟಕ(ಇಟಿಪಿ) ನಿರ್ಮಿಸುವಂತೆ ಸೂಚನೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.



ಕ್ರೀಡಾಂಗಣ ನಿರ್ಮಾಣಕ್ಕಾಗಿ ಗುರುತಿಸಿದ್ದ ಸ್ಥಳ.

ವಸತಿ ಬಡಾವಣೆ ಮೊದಲೋ, ರೇಷ್ಮೆ ನೂಲು ತಯಾರಿಕಾ ಘಟಕ ಮೊದಲೋ...

ತಿ.ನರಸೀಪುರದಲ್ಲಿ ರೇಷ್ಮೆ ನೂಲು ತಯಾರಿಕಾ ಘಟಕವನ್ನು 1912ರಲ್ಲಿ ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ್ದು, ಇದೀಗ 114 ವರ್ಷ ಪೂರೈಸಿದೆ. 7 ಎಕರೆಯಲ್ಲಿ ನೂಲು ಬಿಚ್ಚಣಿಕೆ ಘಟಕದ ಕಟ್ಟಡ ಸೇರಿದಂತೆ ಇರುವ 13.11 ಎಕರೆ ವಿಸ್ತೀರ್ಣ ಹೊಂದಿದ್ದ ರೇಷ್ಮೆ ನೂಲು ತಯಾರಿಕೆ ಘಟಕದ 5.08 ಎಕರೆ ಭೂಮಿಯನ್ನು ಕ್ರೀಡಾಂಗಣ ನಿರ್ಮಾಣಕ್ಕೆ ನೀಡಲಾಗಿತ್ತು ಸತತ ಹೋರಾಟ ನಡೆದ ಹಿನ್ನೆಲೆಯಲ್ಲಿ ಕ್ರೀಡಾಂಗಣ ನಿರ್ಮಾಣದ ಉದ್ದೇಶದಿಂದ ರಾಜ್ಯ ಸರ್ಕಾರ ಹಿಂದೆ ಸರಿದಿದೆ. ಇದಕ್ಕೆ ಕೆಲವರಿಗೆ ಅಸಮಾದಾನವಾಗಿದ್ದು, ಕ್ರೀಡಾಂಗಣ ವಿರೋಧಿಸಿದ್ದಕ್ಕೆ ಪ್ರತಿಯಾಗಿ ನೂಲು ತಯಾರಿಕಾ ಘಟಕವನ್ನೇ ವಿರೋಧಿಸಲು ಆರಂಭಿಸಿದ್ದಾರೆ. ವಸತಿ ಪ್ರದೇಶದಲ್ಲಿದೆ ಎನ್ನುತ್ತಿದ್ದಾರೆ. ನೂಲು ತಯಾರಿಕಾ ಘಟಕ ಸ್ಥಾಪನೆಯಾದಾಗ ಈ ಭಾಗದಲ್ಲಿ ಮನೆಗಳೇ ಇರಲಿಲ್ಲ. ಕೆಲ ವರ್ಷಗಳಿಂದಷ್ಟೇ ಈ ಭಾಗದಲ್ಲಿ ಮನೆಗಳು ನಿರ್ಮಾಣವಾಗಿವೆ. ಈ ಘಟಕದಲ್ಲಿ 400ಕ್ಕೂ ಹೆಚ್ಚು ನೌಕರರು ಕೆಲಸ ಮಾಡುತ್ತಿದ್ದಾರೆ. ಈ ಘಟಕದಲ್ಲಿ ನೂಲು ತಯಾರಿಸುವ ಪ್ರಕ್ರಿಯೆಯಲ್ಲಿ ಯಾವುದೇ ರಾಸಾಯನಿಕ ವಸ್ತು ಬಳಸುವುದಿಲ್ಲ. ಆದರೆ ಮಾಲಿನ್ಯವಾಗುತ್ತಿದೆ ಎಂದು ನೀಡಿರುವ ದೂರು ದ್ವೇಷದಿಂದ ಕೂಡಿದೆ ಎಂದು ನೌಕರರು ಆರೋಪಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಟೀಚರ್ : ಗುಂಡ ಮನುಷ್ಯನಿಗೂ ಮೊಬೈಲ್‌ಗೂ ಇರುವ ವ್ಯತ್ಯಾಸ ಹೇಳು?
ಗುಂಡ : ಮೇಡಮ್ ಮನುಷ್ಯ ಕಾಲು ಇಲ್ಲದೆ ಬ್ಯಾಲೆನ್ಸ್ ಮಾಡೋಕ್ಕಾಗಲ್ಲ! ಮೊಬೈಲ್‌ನಲ್ಲಿ ಬ್ಯಾಲೆನ್ಸ್ ಇಲ್ಲದೆ ಕಾಲ್ ಮಾಡೋಕ್ಕಾಗಲ್ಲ...

ಮೈಸೂರು ಮಿತ್ರ
ಗುರುವಾರ, ಏಪ್ರಿಲ್ 2, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಅವಶ್ಯಕತೆ ಮುಗಿದ ಮೇಲೆ ಸ್ವಂತ ಆತ್ಮವೇ ದೇಹದ ಜೊತೆ ಇರಲ್ಲ... ಇನ್ನು ಮನುಷ್ಯರು ಜೊತೆಗೆ ಇರ್ತಾರಾ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾಗದೆ ಬಾಗದು / ಬಿಸಿಯಾಗದೆ ಬೆಣ್ಣೆ ಕರಗದು

ನಿಮ್ಮ ಪತ್ರಗಳು

ಗುರುತಿನ ಚೀಟಿಯನ್ನು ಐದು ವರ್ಷಕ್ಕೊಮ್ಮೆ ನವೀಕರಿಸಲಿ!!

ಮಾನ್ಯರೆ,

ನಗರ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ)ದವರು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಮಾಸಿಕ ಪಾಸ್ ನೀಡುತ್ತಿರುವುದು ಸರಿಯಷ್ಟೆ, ಪಾಸ್ ಅನ್ನು ಆಯಾಯ ತಿಂಗಳ ಅನುಸಾರ ಕೊನೆಯಲ್ಲಿ ವಿತರಿಸುತ್ತಾರೆ. ಗುರುತಿನ ಚೀಟಿಯನ್ನು ಪ್ರತಿ ವರ್ಷಕ್ಕೊಮ್ಮೆ ನವೀಕರಿಸುವಂತೆ ಮಾಡಿರುವುದು ಅಷ್ಟು ಸಮಂಜಸವಲ್ಲ. ಏಕೆಂದರೆ ಪಾಸ್ ಪಡೆಯುವ ಬಹುತೇಕ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಯುವಕ, ಯುವತಿಯರಾಗಿದ್ದು ಪ್ರತಿ ವರ್ಷ ಅವರ ವಯಸ್ಸಿನಲ್ಲಿ ಬಹಳ ಅಂತರ ಕಂಡುಬರುವುದಿಲ್ಲ. ಹೀಗೆ ಪ್ರತಿ ವರ್ಷ ಪಾಸ್ ಗುರುತಿನ ಚೀಟಿ ನವೀಕರಿಸುವುದರಿಂದ ಕೆಎಸ್‌ಆರ್‌ಟಿಸಿ ಸಂಸ್ಥೆಗೆ ನಷ್ಟವೇ ಹೊರತು ಇದರಿಂದ ಲಾಭವೇನೂ ಇಲ್ಲ. ಏಕೆಂದರೆ, ಗುರುತಿನ ಚೀಟಿಗೆ ಛಾಯಾಚಿತ್ರ ಅಂಟಿಸಬೇಕು. ಲ್ಯಾಮಿನೇಷನ್ ಮಾಡಿಸಬೇಕು. ಇದರಿಂದ ಸಾಕಷ್ಟು ವಿದ್ಯುತ್ ವ್ಯಯವಾಗುತ್ತದೆ. ಇದಲ್ಲದೇ ಅಲ್ಲಿ ಪಾಸ್ ಗುರುತಿನ ಚೀಟಿಗೆ ಕೂರಿಸಿರುವ ಸಿಬ್ಬಂದಿಯನ್ನು ಬೇರೆ ವಿಭಾಗಕ್ಕೆ ಸ್ಥಳಾಂತರಿಸಬಹುದು. ಆಗ ಸಿಬ್ಬಂದಿ ಕೊರತೆ ಕಂಡುಬರುವುದಿಲ್ಲ. ಆದುದರಿಂದ ಪಾಸ್‌ನ ಗುರುತಿನ ಚೀಟಿಯನ್ನು ಡ್ರೈವಿಂಗ್ ಲೈಸೆನ್ಸ್ ಮಾದರಿ ಐದು ವರ್ಷಕ್ಕೊಮ್ಮೆ ನವೀಕರಿಸುವಂತೆ ವಿಸ್ತರಿಸಿದರೆ ಸಂಸ್ಥೆಗೆ ತಗುಲುವ ವೆಚ್ಚ ಉಳಿತಾಯವಾಗುತ್ತದೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಕೂಲಂಕುಶವಾಗಿ ಪರಿಗಣಿಸಿ, ಮುಂದಿನ ದಿನಗಳಲ್ಲಿ ಈಗಿರುವ ಪಾಸ್ ಗುರುತಿನ ಚೀಟಿ ನವೀಕರಣದ ಒಂದು ವರ್ಷದ ಅವಧಿಯನ್ನು ಕನಿಷ್ಠ ಐದು ವರ್ಷಕ್ಕೊಮ್ಮೆ ವಿಸ್ತರಿಸಿದರೆ ತುಂಬಾ ಉಪಯುಕ್ತವಾಗುತ್ತದೆ.

–ಬಿಂಡಿಗನವಿಲೆ ಪ್ರದೀಪ, ವಿದ್ಯಾರಣ್ಯಪುರಂ, ಮೈಸೂರು

ಶಾಸಕ ದರ್ಶನ್ ಧ್ರುವನಾರಾಯಣ್ ಮೆಚ್ಚುಗೆ ನಡೆ



ಮಾನ್ಯರೆ,

ದಕ್ಷಿಣಕಾಶಿ ಎಂದೇ ಪ್ರಸಿದ್ಧವಾದ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯವು ಐತಿಹಾಸಿಕ ಹಿನ್ನೆಲೆ ಹೊಂದಿರುವ ಧಾರ್ಮಿಕ ಸ್ಥಳವಾಗಿದೆ. ಇಲ್ಲಿ ಪ್ರತಿ ವರ್ಷ ನಡೆಯುವ ಶ್ರೀಕಂಠೇಶ್ವರ ರಥೋತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಆದರೆ ಇದೇ ಮೊದಲ ಬಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ವಿವಿಧ ರೀತಿಯ ಕಾರ್ಯಕ್ರಮ ಕೈಗೊಳ್ಳುವ ಮೂಲಕ ದೊಡ್ಡ ಜಾತ್ರೆಗೆ ಮತ್ತಷ್ಟು ಮೆರೆಗನ್ನೆ ನೀಡಿದ್ದಾರೆ.

ನಂಜನಗೂಡಿನ ಪ್ರಾಚೀನ ಹೆಸರಾದ ಗರಳಪುರಿ ಎಂಬ ಹೆಸರಿನಲ್ಲಿ ಕ್ರೀಡೆ, ಸಾಂಸ್ಕೃತಿಕ, ಧಾರ್ಮಿಕ, ಕಲೆ ಬಿಂಬಿಸುವ ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸುವುದಲ್ಲದೆ, ವಿವಿಧ ರೀತಿಯ ಸ್ಪರ್ಧೆಗಳನ್ನು ಮಾಡುವ ಮುಖಾಂತರ ಪ್ರತಿಯೊಬ್ಬರಿಗೂ ಸಹ ತಮ್ಮ ಪ್ರತಿಭೆಯನ್ನು ಗುರುತಿಸಿಕೊಳ್ಳುವ ಸದಾವಕಾಶಗಳನ್ನು ಕಲ್ಪಿಸಿದ್ದಾರೆ. ಹೀಗೆ ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸುವ ಮುಖಾಂತರ ಶ್ರೀಕಂಠೇಶ್ವರ ರಥೋತ್ಸವವನ್ನು ಮತ್ತಷ್ಟು ವೈಭವೀಕರಿಸಿ, ಯಶಸ್ವಿಯಾಗಿ ನಡೆಸಿಕೊಟ್ಟ ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಒಂದು ಮೆಚ್ಚುಗೆ.

–ಸಾಯಿ ಸಂದೇಶ್ ಬಿ.ಎಸ್., ಮೈಸೂರು

ಪರಸಯ್ಯನ ಹುಂಡಿ ಅಲ್ಲ ಪರಸಯ್ಯನ ಗುಂಡಿ

ಮಾನ್ಯರೆ,

ಮೈಸೂರು ತಾಲೂಕಿನ ಪರಸಯ್ಯನ ಹುಂಡಿ ಗ್ರಾಮ ಉತ್ತಮ ರೀತಿಯಲ್ಲಿ ಬೆಳವಣಿಗೆ ಹೊಂದಿದ್ದು, ಎಲ್ಲಾ ವರ್ಗದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರಿಗಳು ಬೇರೆ ಕಡೆಯಿಂದ ಇಲ್ಲಿಗೆ ಬಂದು ವಾಸ ಮಾಡುತ್ತಿದ್ದಾರೆ. ಈ ಊರಿನಿಂದ 10 ಕಿಮೀ ದೂರದ ಊರಿನಲ್ಲಿ ಲೈಟು, ಚರಂಡಿ ಮತ್ತು ರಸ್ತೆ ಬಹಳ ಉತ್ತಮವಾಗಿವೆ. ಈ ಊರು ರಿಂಗ್ ರಸ್ತೆ ಹಾಗೂ ಹೆಚ್.ಡಿ.ಕೋಟೆ ರಸ್ತೆಗೆ ಹೊಂದಿಕೊಂಡಿರುವುದರಿಂದ ಬಹಳ ಹೆಸರುವಾಸಿಯಾಗಿದೆ. ಈ ಊರಿನ ಮೇನ್ ರಸ್ತೆ ಬಹಳ ಕೆಳಗಿನ ಐದು, ಆರು ಬಡಾವಣೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಾಗಿದೆ. ಈ ರಸ್ತೆ ಗುಂಡಿಗಳಿಂದ ಹಾಳಾಗಿದೆ. ದಿನ ಬೆಳಗ್ಗೆ, ರಾತ್ರಿ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಹಾಳಾಗಿರುವುದರಿಂದ ಮಕ್ಕಳು, ಮಹಿಳೆಯರು, ವೃದ್ಧರು ಓಡಾಡುವುದು ಕಷ್ಟವಾಗಿದ್ದು, ವಾಹನಗಳ ಅಪಘಾತ ಸಂಭವಿಸುವುದುಂಟು. ಊರು ಹೆಸರುವಾಸಿಯಾಗಿದ್ದರೂ ಯಾವುದೇ ತರಹದ ಹಬ್ಬ ಆಚರಣೆ ಮಾಡಲು ಹೊರಗಿನವರು ಬಂದರೆ ಬೇಸರ ಮಾಡಿಕೊಳ್ಳುವುದು ಸಾಮಾನ್ಯವಾಗಿದೆ. ಕೂಗಳತೆ ದೂರದಲ್ಲಿ ಪಟ್ಟಣ ಪಂಚಾಯಿತಿ ಇದ್ದು ಯಾವುದೇ ವರ್ಗದ ಅಧಿಕಾರಿಗಳು ಒಮ್ಮೆಯೂ ಭೇಟಿ ನೀಡಿರುವುದಿಲ್ಲ. ಮತ್ತು ಜನ ಪ್ರತಿನಿಧಿಗಳು ಈ ಊರನ್ನು ಮರೆತಿರುತ್ತಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಜನಪ್ರತಿನಿಧಿಗಳು ರಸ್ತೆಯನ್ನು ದುರಸ್ತಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ನೊಂದ ಮತದಾರರು, ಇಂಜಿನಿಯರ್ (ನಿವೃತ್ತ), ಪರಸಯ್ಯನ ಹುಂಡಿ ಗ್ರಾಮ

ಅರಕೆರೆಯಲ್ಲಿ ಬಸ್ ನಿಲ್ದಾಣ ನಿರ್ಮಿಸಿ

ಮಾನ್ಯರೆ,

ಶ್ರೀರಂಗಪಟ್ಟಣ ತಾಲೂಕಿನಲ್ಲಿಯೇ ಅರಕೆರೆ ದೊಡ್ಡದಾದ ಗ್ರಾಮ. ಈ ಗ್ರಾಮದಲ್ಲಿ ಹೆಚ್ಚಿನ ಶಾಲಾ– ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಇದ್ದು, ಸಾವಿರಕ್ಕೂ ಅಧಿಕ ಜನಸಂಖ್ಯೆ ಹೊಂದಿದೆ. ಈ ಗ್ರಾಮಕ್ಕೆ ಸುತ್ತಮುತ್ತಲ ಗ್ರಾಮಗಳಿಂದ ವಿದ್ಯಾರ್ಥಿಗಳು ನಾನಾ ತರಗತಿಯಲ್ಲಿ ವ್ಯಾಸಂಗ ಮಾಡುವ ಸಲುವಾಗಿ ಬರುತ್ತಾರೆ. ಈಗಾಗಲೇ ಸಾಕಷ್ಟು ಸರ್ಕಾರಿ ಬಸ್ಸುಗಳು ಸಹ ಸಂಚರಿಸುತ್ತಿವೆ. ಈ ಗ್ರಾಮದಲ್ಲಿ ಮಹಿಳೆಯರು ಹಾಲು ಉಣಿಸುವುದಕ್ಕೆ ಕೊಠಡಿ, ಶೌಚಾಲಯ, ಕುಡಿಯುವುದಕ್ಕೆ ನೀರು, ಸಾರಿಗೆ ಬಸ್ ನಿಲ್ದಾಣವಿಲ್ಲದೆ ಪರಿತಪಿಸುವಂತಾಗಿದೆ. ತುರ್ತಾಗಿ ಈ ಗ್ರಾಮಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಅಗತ್ಯವಿದ್ದು, ಈಗಾಗಲೇ ಸಾರಿಗೆ ಸಚಿವರು ಸ್ಥಳ ಒದಗಿಸಿಕೊಟ್ಟರೆ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿ ಮೂರು ವರ್ಷವಾದರೂ ಯಾವುದೇ ಪ್ರಯೋಜನವಾಗಿಲ್ಲ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು, ಸ್ಥಳೀಯ ಶಾಸಕರು ಇತ್ತ ಗಮನಹರಿಸಿ ಕೂಡಲೇ ಬಸ್ ನಿಲ್ದಾಣ ನಿರ್ಮಿಸಿ ಗ್ರಾಮದ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಎ.ಪಿ.ಸೋಮಶೇಖರ್, ಶ್ರೀರಂಗಪಟ್ಟಣ ತಾ. ಮಂಡ್ಯ ಜಿಲ್ಲೆ

ಹನುಮಂತ ವಿವೇಕದ ಸಾಕಾರಮೂರ್ತಿ

ಗೋಷ್ಪದೀಕೃತವಾರಶಿಂ ಮಶಕೀಕೃತರಾಕ್ಷಸಮ್ ।
ರಾಮಾಯಣಮಹಾಮಾಲಾರತ್ನಂ ವಂದೇಽನಿಲಾತ್ಮಜಮ್ ॥

ಸಮುದ್ರದ ಅಗಾಧಜಲರಾಶಿಯನ್ನು ಗೋವಿನ ಹೆಜ್ಜೆಯ ಗಾತ್ರವಾಗಿ ಪರಿಗಣಿಸಿ, ಅದನ್ನು ದಾಟಿ, ಯುದ್ಧದ ವೇಳೆಯಲ್ಲಿ ಲಂಕಾರಾಕ್ಷಸರನ್ನು ಸೊಳ್ಳೆಯೋಪಾದಿಯಲ್ಲಿ ತೃಣೀಕರಿಸಿ, ಅವರನ್ನು ಹೊಸಕಿ ಹಾಕಿದ ಹನುಮಂತ ರಾಮಾಯಣದ ಅನೇಕ ಪಾತ್ರಗಳೆಂಬ ರತ್ನಗಳಲ್ಲಿ ನಾಯಕಮಣಿಯ ಸ್ಥಾನದಲ್ಲಿ ಇರುವವನು ಎಂಬುದು ಈ ಶ್ಲೋಕದ ತಾತ್ಪರ್ಯ. ಆದರ್ಶದಲ್ಲಿ, ಚಾರಿತ್ರ್ಯದಲ್ಲಿ, ವೀರ್ಯ–ಶೌರ್ಯ–ಪರಾಕ್ರಮಗಳಲ್ಲಿ, ಬುದ್ಧಿಮತ್ತೆಯಲ್ಲಿ, ಸಮಯೋಚಿತ ಪ್ರಜ್ಞೆಯಲ್ಲಿ, ಪ್ರಸಂಗಾವಧಾನತೆಯಲ್ಲಿ, ಇಂಗಿತಜ್ಞತೆಯಲ್ಲಿ ಇವನಷ್ಟು ಎತ್ತರಕ್ಕೆ ಏರುವವರು ಬಹಳ ವಿರಳ. ಶತ್ರುಭಯಂಕರನೆನಿಸಿಕೊಂಡ ಈತ ಕಾರ್ಯದಕ್ಷತೆಯಲ್ಲೂ ಅಷ್ಟೇ ಪ್ರವೀಣ. ಉತ್ತಮ ರಾಯಭಾರಿಯಾಗಿ, ವಿವೇಕದ ಸಾಕಾರಮೂರ್ತಿಯಾಗಿ ಕೋಟಿ ಕೋಟಿ ಭಕ್ತಜನರ ಹೃದಯಪೀಠದಲ್ಲಿ ಸದಾ ವಿರಾಜಿಸುತ್ತಿರುವವನು. ಇಂತಹ ಮಹಾನುಭಾವನ ಪ್ರಸಂಗಾವಧಾನತೆಗೆ ಒಂದು ಸುಂದರ ಉದಾಹರಣೆ ಕಿಷ್ಕಿಂಧಾಕಾಂಡದಲ್ಲಿ ಬರುತ್ತದೆ.

ಹನುಮಂತ ತಾನೇ ಸ್ವತಃ ತನ್ನನ್ನು ರಾಮಲಕ್ಷ್ಮಣರಿಗೆ ಪರಿಚಯಿಸಿಕೊಂಡು ಅವರನ್ನು ಸುಗ್ರೀವನ ಬಳಿಗೆ ಕರೆದೊಯ್ದು ಸುಗ್ರೀವನಿಗೆ ಅವರನ್ನು ಪರಿಚಯಿಸಿಕೊಡುತ್ತಾ ಒಂದು ಮಾತನ್ನು ಹೇಳುತ್ತಾನೆ.

ಭವತಾ ಸಖ್ಯಕಾಮೌ ತೌ ಭ್ರಾತರೌ ರಾಮಲಕ್ಷ್ಮಣೌ ।
ಪ್ರತಿಗೃಹ್ಯಾರ್ಚಯಸ್ವೈ ತೌ ಪೂಜನೀಯತಮಾವುಭೌ ।

ಕಿಷ್ಕಿಂಧಾ: 5–7

ಇವರು ರಾಮಲಕ್ಷ್ಮಣರು ಅಂತ. ಅಯೋಧ್ಯಾ ಅರಸು ಕುಮಾರರು; ದಶರಥ ಮಹಾರಾಜನ ಮಕ್ಕಳು. ಇವರು ಪಿತೃವಾಕ್ಯ ಪರಿಪಾಲನೆಗಾಗಿ ವನವಾಸ ದೀಕ್ಷೆ ಹೊತ್ತು ಅರಣ್ಯಕ್ಕೆ ಬಂದಿದ್ದಾರೆ. ಮಧ್ಯಂತರದಲ್ಲಿ ರಾಮನ ಮಡದಿ ಸೀತೆ ರಾವಣನಿಂದ ಅಪಹೃತೆಯಾದಳು. ಅವಳನ್ನು ಹುಡುಕುತ್ತಾ ನಿನ್ನ ಸಹಾಯವನ್ನು ಯಾಚಿಸಿ ಇಲ್ಲಿಗೆ ಬಂದಿದ್ದಾರೆ. ಇವರನ್ನು ಸರಿಯಾಗಿ ಸ್ವಾಗತಿಸಿ, ಅರ್ಚಿಸು. ಇವರು ಪೂಜ್ಯತಮರು ಎಂದು ಹೇಳುತ್ತಾನೆ. ಹನುಮಂತನ ಈ ಮಾತಿನ ಸೂಕ್ಷ್ಮ, ಅದರ ಆಳ ಸುಗ್ರೀವನಿಗೆ ಅರ್ಥವಾಗಲೇ ಇಲ್ಲ. ರಾಜ ಮತ್ತು ಅವನ ಪರಿವಾರ ಬಂದಾಗ ಅವರನ್ನು ಹೇಗೆ ಸ್ವಾಗತಿಸಬೇಕು ಎಂಬುದಕ್ಕೆ ಒಂದು ಕ್ರಮ, ವಿಧಿ, Protocol ಅಂತ ಇರುತ್ತದೆ. ಆ ವಿಧಿಯನ್ನೇ ಅನುಸರಿಸಿ ನಡೆದುಕೊಳ್ಳಬೇಕಾಗುತ್ತದೆ. ಆದರೆ ಸುಗ್ರೀವ ಹಾಗೆ ನಡೆದುಕೊಳ್ಳಲಿಲ್ಲ. ಹಾಗಾದರೆ ಅವನು ಮಾಡಿದ್ದಾದರೂ ಏನು?

ಹನುಮಂತ ಸುಗ್ರೀವನಿಗೆ ರಾಮನ ಪರಿಚಯ ಮಾಡಿಕೊಟ್ಟ ಮೇಲೆ ಸುಗ್ರೀವ ರಾಮನ ವಿಷಯದಲ್ಲಿ ಹೇಗೆ ನಡೆದುಕೊಂಡ ಎಂದು ಗಮನಿಸಿದರೆ ಸುಗ್ರೀವ ಮಾಡಿದ ತಪ್ಪು ಏನು ಅಂತ ಗೊತ್ತಾಗುತ್ತದೆ. ಹೊಸದಾಗಿ ಪರಿಚಿತನಾದ ರಾಮನನ್ನು ಕುರಿತು ಆತ ಹೇಳಿದ– ನೀನು ಧರ್ಮದಲ್ಲಿ ಸುಶಿಕ್ಷಿತನೆಂದೂ, ವೀರನೆಂದೂ, ಸರ್ವಭೂತಗಳಲ್ಲೂ ದಯೆ ಇರುವವನೆಂದೂ ಹನುಮಂತ ಹೇಳಿದ. ಅವನು ನಿನ್ನ ಸದ್ಗುಣ ವನ್ನು ಪರಿಚಯಿಸಿದ್ದಾನೆ. ನಾನೋ ವಾನರ, ನೀನೋ ಅರಸುಕುಮಾರ, ನಿನಗೆ ನನ್ನ ಸಖ್ಯ ಬೇಕಿದ್ದರೆ ಇಗೋ ಕೈ ನೀಡಿದ್ದೇನೆ. ಕೈ ಹಿಡಿ ಎಂದು Shake-Hand ಮಾಡುವ ರೀತಿಯಲ್ಲಿ ಕೈನೀಡಿ, ಒಂದು ಬಗೆಯ ದರ್ಪವನ್ನು ತೋರಿಸಿದ. ರಾಮನ ಕಾಲಿಗೂ ಬೀಳಲಿಲ್ಲ. ನಮಸ್ಕರಿಸಲೂ ಇಲ್ಲ. ಇದು ರಾಮನಿಗೆ ಮಾಡಿದ ಅಪಚಾರವಾಯಿತು. ರಾಮ ಇದನ್ನು ಗಮನಿಸಿದ ಮತ್ತು ಸಹಿಸಿಕೊಂಡ. ಹಾಗೆಯೇ ಮುಂದೆ ಅವರೀರ್ವರಲ್ಲಿ ಅಗ್ನಿಸಾಕ್ಷಿಕವಾಗಿ ಸ್ನೇಹವೂ ಆಯಿತು.

ಅಷ್ಟು ಹೊತ್ತೂ ರಾಮನಿಗೆ ಕೂತುಕೊ ಅಂತ ಹೇಳದ ಸುಗ್ರೀವ ರಾಮನೊಡನೆ ಸ್ನೇಹವುಂಟಾಗಿ, ರಾಮನ ಮೇಲೆ ನಂಬಿಕೆ ಹುಟ್ಟಿದ ಮೇಲೆ ಎಲೆ ಮತ್ತು ಹೂಗಳಿಂದ ತುಂಬಿ ತುಳುಕುತ್ತಿದ್ದ ಸಾಲವೃಕ್ಷದ ಒಂದು ದೊಡ್ಡ ಕೊಂಬೆಯನ್ನು ಮುರಿದು ಹಾಸಿ ಅದರ ಮೇಲೆ ರಾಮನಿಗೆ ಕೂತುಕೊಳ್ಳುವಂತೆ ಹೇಳಿ ತಾನೂ ಅದರ ಮೇಲೇ ರಾಮನೊಡನೆ ಕೂತುಕೊಂಡುಬಿಟ್ಟ.

ತತಃ ಸ ಪರ್ಣಬಹುಲಾಂ ಛಿತ್ವಾ ಶಾಖಾಂ ಸುಪುಷ್ಪಿತಾಮ್ ।
ಸಾಲಸ್ಯಾಸ್ತೀರ್ಯ ಸುಗ್ರೀವೋ ನಿಷಸಾದ ಸ ರಾಘವಃ ॥

ಕಿಷ್ಕಿಂಧಾ: 5–19

ರಾಮನ ಒತ್ತಿನಲ್ಲೇ ಇದ್ದ ಲಕ್ಷ್ಮಣನನ್ನು ಬಂದೆಯಾ ಹೋದೆಯಾ ಅಂತಲೂ ವಿಚಾರಿಸಲಿಲ್ಲ. ಮಹಾ ಭಾಗವತನಾದ ಲಕ್ಷ್ಮಣನಿಗೆ ಹೀಗೆ ಅಪಚಾರವಾದುದನ್ನು ರಾಮ ಗಮನಿಸಿದ. ಮಾತ್ರವಲ್ಲ. ಹನುಮಂತನೂ ಗಮನಿಸಿದ. ಅಯ್ಯೋ ಕೆಲಸ ಕೆಟ್ಟಿತಲ್ಲ!? ಎಂದುಕೊಂಡು ಹನುಮಂತ ತನ್ನ ದೊರೆಯ ಮಾನ ಮುಚ್ಚಲು ಶ್ರೀರಾಮನಿಗೆ ಹಾಕಿದ ಸಾಲವೃಕ್ಷದ ಟೊಂಗೆಗಿಂತಲೂ ಉತ್ತಮವಾದ, ತುಂಬಾ ಹೂಗಳಿಂದ ಕೂಡಿದ ಶ್ರೀಗಂಧದ ಟೊಂಗೆಯೊಂದನ್ನು ಮುರಿದು ಲಕ್ಷ್ಮಣನಿಗೆ ನೀಡಿದ ಮತ್ತು ತಾನು ನಿಂತುಕೊಂಡೇ ಉಳಿದ. ಲಕ್ಷ್ಮಣ ಅದರ ಮೇಲೆ ಆಸೀನನಾದ.



ಲಕ್ಷ್ಮಣಾಯಾಥ ಸಂಹೃಷ್ಟೋ ಹನುಮಾನ್ ಪ್ಲವಂಗಮಃ ।
ಶಾಖಾಂ ಚಂದನವೃಕ್ಷಸ್ಯ ದದೌ ಪರಮಪುಷ್ಪಿತಾಮ್ ॥

ಕಿಷ್ಕಿಂಧಾ: 5–20

ಇದು ಕೇವಲ ಒಂದು ಸಲ ನಡೆದದ್ದಲ್ಲ. ಮತ್ತೊಮ್ಮೆಯೂ ಸುಗ್ರೀವ ಹಾಗೆಯೇ ನಡೆದುಕೊಂಡ. ಹನುಮಂತ ಮತ್ತೆ ಅದನ್ನು ಸರಿಪಡಿಸಿದ. ಹನುಮಂತನ ಆ ನಡವಳಿಕೆಯಿಂದ ಶ್ರೀರಾಮ ಪ್ರಸನ್ನನಾದನಂತೆ. (ಪ್ರಸನ್ನಮುದಧಿಂ ಯಥಾ) ಸುಗ್ರೀವ ಬೇಕು ಅಂತಲೇ ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ ಅದು. ಆದರೆ ತಪ್ಪು ತಪ್ಪೇ. ಸುಗ್ರೀವ ರಾಮನಿಗೆ ಮಾಡಿದ ಉಪಚಾರದಂತೆ ಲಕ್ಷ್ಮಣನಿಗೂ ಮಾಡಬೇಕಿತ್ತು. ಏಕೆಂದರೆ ರಾಮನಿಗೆ ಲಕ್ಷ್ಮಣ ಎಲ್ಲವೂ ಆಗಿದ್ದ. ಅವನು ರಾಮನ ಏಕೈಕ ಪರಿವಾರ. ಮಿತ್ರ, ಮಂತ್ರಿ, ಭೃತ್ಯ, ಸಖಾ ಎಲ್ಲವೂ ಆಗಿದ್ದ. ಅದನ್ನು ಗಮನಿಸದ ಸುಗ್ರೀವ ಗುರುತರ ಪ್ರಮಾದವನ್ನೇ ಎಸಗಿದ್ದ.

ನಾವು ಯಾರದೋ ಮನೆಗೆ ಹೋಗುವಾಗ ನಮ್ಮ ಸ್ನೇಹಿತರನ್ನೂ ಕರೆದುಕೊಂಡು ಹೋಗುತ್ತೇವೆ ಅಂತ ಇಟ್ಟುಕೊಳ್ಳೋಣ. ಅವರು ನಮ್ಮನ್ನು ಚೆನ್ನಾಗಿ ಆದರಿಸುತ್ತಾ, ಗೌರವಿಸುತ್ತಾ, ಉಪಚರಿಸುತ್ತಾ ನಮ್ಮ ಸ್ನೇಹಿತರನ್ನು ಅಲಕ್ಷಿಸಿದರೆ ಅದು ನಮಗೇ ಮಾಡಿದ ಅವಮಾನದಂತೆ ಆಗುತ್ತದೆ. ಸುಗ್ರೀವನೂ ಹಾಗೆಯೇ ಮಾಡಿದ್ದ. ಅದನ್ನು ಸರಿಪಡಿಸುವ ಪ್ರಸಂಗಾವಧಾನತೆಯನ್ನು ಹನುಮಂತ ಮಾಡಿದ. ಇಂತಹ ಕಾರಣಗಳಿಂದಲೇ ಹನುಮಂತನನ್ನು ವಿವೇಕದ ಸಾಕಾರಮೂರ್ತಿಯೆಂದೂ, ಚಾಣಾಕ್ಷನೆಂದೂ ಕರೆಯುವುದು.

ಅವನ ಇಂಗಿತಜ್ಞತೆಯಂತೂ ಅಮೋಘವಾದುದು. ನಮ್ಮ ದುರದೃಷ್ಟಕ್ಕೆ ಇಂದು ಬಹಳ ಮಂದಿಗೆ ಇಂಗಿತಾನುವರ್ತನೆಯೆಂದರೆ ಅರ್ಥವೇ ಆಗುವುದಿಲ್ಲ. ನಾವು ಅನೇಕ ಕೆಲಸಗಳನ್ನು ಮಾಡುತ್ತಿರುತ್ತೇವೆ. ಅದು ಸರಿಯೋ ತಪ್ಪೋ, ಗುಣವೋ ದೋಷವೋ. ಅದು ಇತರರ ಮೇಲೆ ಏನು ಪರಿಣಾಮ ಬೀರುತ್ತದೆ ಎಂದು ಯೋಚಿಸುವುದೇ ಇಲ್ಲ. ನಾವು ಮಾಡುವ ಕೆಲಸ, ಆಡುವ ಮಾತು ಬೇರೆಯವರ ಮೇಲೆ ಎಂತಹ ಪರಿಣಾಮವನ್ನುಂಟುಮಾಡುತ್ತದೆ ಎಂದು ನಾವು ಚಿಂತಿಸುವುದೇ ಇಲ್ಲ. ನಾವು ಮಾಡಿದ್ದೆಲ್ಲ ಸರಿ ಎಂದು ನಮ್ಮ ನಮ್ಮೊಳಗೇ ತೀರ್ಮಾನಿಸಿಕೊಂಡು ನಮ್ಮ ಪಾಡಿಗೆ ನಾವು ಏನೇನೋ ಮಾಡುತ್ತಿರುತ್ತೇವೆ. ವಾಸ್ತವವಾಗಿ ನಾವು ನಮ್ಮ ನಡವಳಿಕೆಯ ಪರಿಣಾಮದ ಬಗ್ಗೆ ಎಡಬಿಡದೆ ಚಿಂತಿಸುತ್ತಿರಬೇಕು. ಇತರರ ಮನೋಗತವನ್ನು ತಿಳಿದುಕೊಂಡು ಅವರು ಹೇಳಿದ ಮತ್ತು ಹೇಳದೆ ಬಿಟ್ಟಿರುವ ಮಾತನ್ನೋ, ಕೆಲಸವನ್ನೋ ನೆರವೇರಿಸುವುದೇ ಇಂಗಿತಾನುವರ್ತನೆ ಎಂದು ಕರೆಯಲ್ಪಡುತ್ತದೆ. ಈ ವಿಚಾರದಲ್ಲಿ ಆಂಜನೇಯ ನಡೆದುಕೊಂಡ ರೀತಿ ಎಲ್ಲರಿಗೂ ಒಂದು ಮಾದರಿಯೇ ಆಗಿದೆ.

ಆತ ಸೀತೆಯನ್ನು ಹುಡುಕುತ್ತಾ... ಹುಡುಕುತ್ತಾ... ರಾವಣನ ಕಣ್ಮಣಿಯಂತಿದ್ದ ಅವನ ಅಶೋಕವನದತ್ತ ಹೋದ. ಅಲ್ಲಿ ಅವನಿಗೆ ಸೀತೆ ಕಂಡಳು. ಆದರೆ ಅವನು ಅಲ್ಲಿಗೆ ಹೋದ ಸಮಯ ರಾತ್ರಿಯಾಗಿತ್ತು. ಬೆಳಗಾಗಲು ಸ್ವಲ್ಪವೇ ಸಮಯವಿತ್ತು. ಅಷ್ಟರಲ್ಲಿ ರಾವಣನ ಸವಾರಿ ಅವಳಲ್ಲಿ ಪ್ರಣಯಯಾಚನೆ ಮಾಡಲು ಅಲ್ಲಿಗೆ ಬಂತು. ಹನುಮಂತ ಶಿಂಶಪಾವೃಕ್ಷದ ಮೇಲೆ ಮರೆಯಲ್ಲಿ ಕೂತು ಅದನ್ನೆಲ್ಲ ಗಮನಿಸತೊಡಗಿದ. ರಾವಣನ ಪ್ರಣಯಯಾಚನೆಗೆ ಸೀತೆ ಧಿಕ್ಕಾರ ಸೂಚಿಸಿದಳು. ಅದರಿಂದ ಸಿಟ್ಟುಗೊಂಡ ರಾವಣ ಅವಳು ಒಲಿಯುವುದಕ್ಕೆ ಎರಡು ತಿಂಗಳ ಅವಧಿಯನ್ನು ನೀಡಿ ಹೊರಟುಹೋದ.

ರಾವಣನ ಈ ದರಿದ್ರ ಕೋಟಲೆಯನ್ನು ಸಹಿಸಲಾರದ ಸೀತಾದೇವಿ ನಂತರ ಸ್ವಲ್ಪ ಹೊತ್ತಿನಲ್ಲಿ ಆತ್ಮಹತ್ಯೆಗೆ ಯತ್ನಿಸುತ್ತಾಳೆ. ಇಂತಹ ಸಂದರ್ಭದಲ್ಲಿ ಹನುಮಂತ ಏನು ಮಾಡಬೇಕು? ದಿಢೀರನೆ ಅವಳೆದುರು ಪ್ರತ್ಯಕ್ಷನಾಗಬೇಕೇ, ಹಾಗೆ ಪ್ರತ್ಯಕ್ಷನಾದರೆ ಅವನೇ ವೇಷ ಮರೆಸಿಕೊಂಡು ಬಂದ ರಾವಣ ಅಂತ ಆಕೆ ತಿಳಿದರೆ ಏನು ಮಾಡುವುದು! ಅವಳಲ್ಲಿ ವಿಶ್ವಾಸ ಸಂಪಾದಿಸುವುದು ಹೇಗೆ? ಅವಳಲ್ಲಿ ಮಾತನಾಡಬೇಕಾದ ಭಾಷೆ ಯಾವುದು? ಹೀಗೆ ಅವನಿಗೆ ಅನೇಕ ಗೋಜಲುಗಳು ಕಾಣಿಸಿ ಕೊಳ್ಳುತ್ತವೆ.. ಇಲ್ಲಿಯೇ ಅವನ ಬುದ್ಧಿವಂತಿಕೆಯಿರುವುದು.

ಹಾಗಾದರೆ ಏನು ಮಾಡಿದ? ಸೀತೆಗೆ ತನ್ನಲ್ಲಿ ನಂಬಿಕೆ ಹುಟ್ಟುವಂತೆ ಅವನು ರಾಮನ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಿದ. ರಾಮ ದಶರಥನ ಮಗ, ವನವಾಸ, ಸೀತಾ ವಿಯೋಗ, ಸುಗ್ರೀವ ಸಖ್ಯ, ವಾಲಿ ಹನನ, ಸೀತಾನ್ವೇಷಣೆ, ತಾನು ಸಮುದ್ರ ಲಂಘಿಸಿ ಇಲ್ಲಿ ಬಂದದ್ದು ಎಲ್ಲವನ್ನೂ ತಿಳಿಸಿದ. ಅದರಿಂದ ಸೀತೆಗೆ ಹನುಮಂತನ ಮೇಲೆ ನಂಬಿಕೆ ಹುಟ್ಟಿತು. ಮುಂದೆ ಅವನು ರಾಮನಾಮಾಂಕಿತ ಮುದ್ರೆಯುಂಗುರವನ್ನು ಸೀತೆಗೆ ನೀಡಿದ್ದು, ಅವಳು ಚೂಡಾಮಣಿಯನ್ನು ನೀಡಿದ್ದು ಎಲ್ಲರಿಗೂ ಗೊತ್ತು.

ಇವೆಲ್ಲ ಆದ ಮೇಲೆ ಅವನು ಏನು ಮಾಡಿದ ಅನ್ನುವುದು ಬಹಳ ಮುಖ್ಯ. ಅಶೋಕವನ ಧ್ವಂಸ, ರಾವಣನ ಕಿಂಕರರೆಂಬ ಎಂಭತ್ತು ಸಾವಿರ ರಕ್ಕಸರನ್ನು ಕೊಂದು ಹಾಕಿದ್ದು, ರಾವಣನ ಮುದ್ದು ಮಗ ಅಕ್ಷನೆಂಬುವನನ್ನು ಕೊಂದು ಅವನ ಹೆಣದ ಗುರುತೂ ಸಿಗದಂತೆ ಉಂಡೆ ಮಾಡಿ ಎಸೆದಿದ್ದು, ರಾವಣನಿಗೆ ಉಪದೇಶ ಮಾಡಿದ್ದು ಇತ್ಯಾದಿ ಇತ್ಯಾದಿ.

ಇಲ್ಲಿ ನಾವು ಗಮನಿಸಬೇಕಾದ ಅಂಶಗಳು– ರಾಮ ಹನುಮಂತನಿಗೆ ರಾವಣನನ್ನು ಕಂಡು ಬಾ, ಅವನಿಗೆ ಹಿತೋಪದೇಶ ಮಾಡಿ ಬಾ, ಅಶೋಕವನವನ್ನು ನಾಶ ಮಾಡಿ ಬಾ, ಲಂಕೆಯನ್ನು ಸುಟ್ಟು ಬಾ, ರಾಕ್ಷಸರನ್ನು ಕೊಂದು ಬಾ ಎಂದಿರಲಿಲ್ಲ. ಆದರೆ ಹನುಮಂತ ಇವಿಷ್ಟನ್ನೂ ಮಾಡಿದ್ದ. ಇಲ್ಲಿಯೇ ಅವನ ಇಂಗಿತಜ್ಞತೆ ಇರುವುದು.

ರಾವಣನಿಗೆ ಒಮ್ಮೆ ಹಿತೋಪದೇಶ ಮಾಡಿದರೆ ಹೇಗೆ ಒಂದು ವೇಳೆ ಅದಕ್ಕೆ ಆತ ಬಗ್ಗಿದರೆ! ಶರಣಾಗತವತ್ಸಲನಾದ ರಾಮನಿಗೆ ಇದು ಪ್ರಿಯವೇ ಆದೀತು! ಅವನಿದನ್ನು ಮೆಚ್ಚುತ್ತಾನೆ ಎಂದು ಯೋಚಿಸಿದವನೇ ರಾವಣನ ಗಮನ ಸೆಳೆಯುವುದಕ್ಕೆ ಅವನ ಅಶೋಕವನವನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡುತ್ತಾನೆ. ಅದರಿಂದ ಕುಪಿತನಾದ ರಾವಣ ಅವನನ್ನು ಸದೆಬಡಿಯುವುದಕ್ಕೆ ತನ್ನ ಸೈನಿಕರನ್ನು ಕಳುಹಿಸುತ್ತಾನೆ. ಮಗ ಇಂದ್ರಜಿತುವನ್ನೂ ಕಳುಹಿಸುತ್ತಾನೆ. ಇಂದ್ರಜಿತು ಅವನ ಮೇಲೆ ಬ್ರಹ್ಮಾಸ್ತ್ರಪ್ರಯೋಗ ಮಾಡಿ ಅವನನ್ನು ಬಂಧಿಸಿ ರಾವಣನ ಬಳಿ ಕರೆದೊಯ್ಯುತ್ತಾನೆ. ರಾವಣನ ಬಳಿ ಹೋಗುವುದಕ್ಕೆ ಇದೊಂದು ಸುವರ್ಣ ಅವಕಾಶವಾಯಿತು ಅವನಿಗೆ. ಅಲ್ಲಿ ಆತ ಅವನಿಗೆ ಅವನ ತಪ್ಪನ್ನು ಮನವರಿಕೆ ಮಾಡಿಕೊಡುತ್ತಾನೆ. ಆದರೆ ಮೂರ್ಖ ರಾವಣ ಅವನ ಮಾತನ್ನು ಕೇಳುವುದಿಲ್ಲ. ಬದಲಿಗೆ ಅವನ ಬಾಲಕ್ಕೆ ಬೆಂಕಿಯಿಡಲು ಸೇವಕರಿಗೆ ಆಜ್ಞಾಪಿಸುತ್ತಾನೆ. ಅದೇ ಅವನಿಗೆ ತಿರುಗು ಬಾಣವಾಗಿ ಲಂಕಾದಹನಕ್ಕೆ ಕಾರಣವಾಯಿತು. ಇಷ್ಟು ಮಾಡಿ ಹನುಮಂತ ಹಿಂತಿರುಗಿ ರಾಮನಿಗೆ ಸೀತೆಯನ್ನು ಕಂಡ ಶುಭವಾರ್ತೆಯನ್ನು ನಿವೇದಿಸಿದ.

ಇಲ್ಲಿ ಹನುಮಂತ ಯಾವುದನ್ನೂ ಅನುಚಿತವಾಗಿ ಮಾಡಿರಲಿಲ್ಲ. ರಾಮನ ಇಂಗಿತಕ್ಕೆ ತಕ್ಕಂತೆ ನಡೆದುಕೊಂಡಿದ್ದ. ದೌತ್ಯದ ಬಗ್ಗೆ ಸ್ವತಃ ವಾಲ್ಮೀಕಿಯೇ ಬರೆದಂತೆ ನಡೆದುಕೊಂಡಿದ್ದ ಹನುಮಂತ.

ಕಾರ್ಯೇ ಕರ್ಮಣಿ ನಿರ್ದಿಷ್ಟೇ ಯೋ ಬಹೂನ್ಯಪಿ ಸಾಧಯೇತ್ ।
ಪೂರ್ವಕಾರ್ಯಾರೋಧೇನ ಸ ಕಾರ್ಯಂ ಕರ್ತುಮರ್ಹತಿ ॥
ನ ಹ್ಯೇಕಃ ಸಾಧಕೋ ಹೇತುಃ ಸ್ವಲ್ಪಸ್ಯಾಪೀಹ ಕರ್ಮಣಃ ।
ಯೋಹ್ಯರ್ಥಂ ಬಹುಧಾ ವೇದ ಸ ಸಮರ್ಥೋರ್ಥಸಾಧನೇ ॥

ಸುಂದರಕಾಂಡಃ 41–5, 6

ಒಬ್ಬನನ್ನು ಒಂದು ಕಾರ್ಯಕ್ಕೆ ನೇಮಿಸಿದಾಗ ಆ ಕಾರ್ಯಕ್ಕೆ ವಿರೋಧವಿಲ್ಲದಂತೆ ಅದರ ಜೊತೆಗೇ ಇತರ ಕಾರ್ಯಗಳನ್ನೂ (ಪೂರಕವಾದ, ಆದರೆ ಹೇಳಲ್ಪಡದ) ಯಾವನು ಸಾಧಿಸಿಕೊಂಡು ಬರುತ್ತಾನೋ ಅವನು ಯೋಗ್ಯನೇ ಸರಿ. ಆ ಕೆಲಸ ಎಷ್ಟೇ ಚಿಕ್ಕದಾಗಿದ್ದರೂ ಅದನ್ನು ಸಾಧಿಸುವುದಕ್ಕೆ ಒಂದೇ ಮಾರ್ಗ ಅಥವಾ ಒಂದೇ ಸಾಧನ ಇರುವುದಿಲ್ಲ. ಹಲವು ಮಾರ್ಗಗಳು, ಹಲವು ಸಾಧನಗಳು ಇರುತ್ತವೆ. ಹಾಗೆ ಸಾಧಿಸುವವನನ್ನು ಸಮರ್ಥನೆಂದು ಕರೆಯುತ್ತಾರೆ. ಹನುಮಂತನಿಗೆ ಈ ಎಲ್ಲ ಗುಣಗಳೂ ಇದ್ದವು. ಹನುಮಂತ ತನಗೆ ಹೊಸದಾಗಿ ಪರಿಚಯವಾದ ಸಂದರ್ಭದಲ್ಲಿ ರಾಮನೇ ಹನುಮಂತನ ವಾಗ್ವೈಭವವನ್ನು ಕುರಿತು ಒಂದು ಮಾತನ್ನು ಹೇಳಿದ್ದ. ಅವನ ವಾಕ್ಚಾತುರ್ಯದ ಮಹತ್ವವನ್ನು ಕೊಂಡಾಡುವಾಗ–

ಏವಂ ವಿಧೋ ಯಸ್ಯ ದೂತೋ ನ ಭವೇತ್ ಪಾರ್ಥಿವಸ್ಯ ತು ।
ಸಿದ್ಧ್ಯಂತಿ ಹಿ ಕಥಂ ತಸ್ಯ ಕಾರ್ಯಾಣಾಂ ಗತಯೋಽನಘ ॥
ಗುಣಗಣೈರ್ಯುಕ್ತಾ ಯಸ್ಯ ಸ್ಯುಃ ಕಾರ್ಯಸಾಧಕಾಃ ।
ತಸ್ಯ ಸಿದ್ಧ್ಯಂತಿ ಸರ್ವಾರ್ಥಾಃ ದೂತವಾಕ್ಯಪ್ರಚೋದಿತಾಃ ॥

ಕಿಷ್ಕಿಂಧಾ: 3–34, 35

ಯಾವ ರಾಜನ ಬಳಿ ಇಂತಹ ದೂತನಿರುವುದಿಲ್ಲವೋ, ಅವನ ವಿವಿಧ ರಾಜಕಾರ್ಯಗಳು ಹೇಗೆ ತಾನೆ ಫಲಪ್ರದವಾದಾವು. ಇಂತಹ ಗುಣಗಳಿಂದ ಕೂಡಿದ ದೂತನೊಬ್ಬ ಯಾವ ರಾಜನಿಗೆ ದೊರೆಯುವನೋ ಅವನ ಕಾರ್ಯಗಳು ಖಂಡಿತಕ್ಕೂ ಸಿದ್ಧಿಸುತ್ತವೆ. ಇಂತಹವನು ತನಗೆ ದೊರೆತರೆ ಎಂಬ ಧ್ವನಿಯಲ್ಲಿ ರಾಮ, ಹನುಮಂತನ ಕುರಿತು ಲಕ್ಷ್ಮಣನಿಗೆ ಹೇಳಿದ್ದ. ರಾಮ ಉಲ್ಲೇಖಿಸಿದ ಈ ಎಲ್ಲ ಗುಣಗಳೂ ಇದ್ದ ಹನುಮಂತ ರಾಮಾಯಣ ಪಾತ್ರಗಳೆಂಬ ರತ್ನಗಳಲ್ಲಿ ಮಹಾರತ್ನವಾಗಿ ಇಂದಿಗೂ ವಿರಾಜಿಸುತ್ತಿದ್ದಾನೆ.



ಗ.ನಾ.ಭಟ್ಟ
ಸಂಸ್ಕೃತ ವಿದ್ವಾಂಸರು

ಕ್ರೈಸ್ಟ್ ಕಾಲೇಜಲ್ಲಿ ವಿಶ್ವ ಮಹಿಳಾ ದಿನಾಚರಣೆ: ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ



ಕ್ರೈಸ್ಟ್ ಕಾಲೇಜಿನಲ್ಲಿ ನಡೆದ ಮಹಿಳಾ ದಿನಾಚರಣೆಯಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಏ. 1– ಕರ್ನಾಟಕ ರಾಜ್ಯ ವೈಚಾರಿಕ ಚಿಂತಕರ ವೇದಿಕೆಯು ಶ್ರೀರಾಂಪುರದ ಕ್ರೈಸ್ಟ್ ಕಾಲೇಜಿನಲ್ಲಿ ಮಂಗಳವಾರ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮವನ್ನು ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಜಂಟಿ ಆಯುಕ್ತ ಡಾ.ಬಿ.ಟಿ.ಬಾಣೇಗೌಡ ಉದ್ಘಾಟಿಸಿದರು. ಪ್ರಾಂಶುಪಾಲ ಫಾ.ಜಿಂಟೋ ಜೋಸ್ ಅಧ್ಯಕ್ಷತೆ ವಹಿಸಿದ್ದರು. ಸಾಧಕರನ್ನು ನಗರಪಾಲಿಕೆ ಉಪ ಆಯುಕ್ತೆ ಪ್ರತಿಭಾ ಚಂದ್ರಶೇಖರ್ ಸನ್ಮಾನಿಸಿದರು. ವೇದಿಕೆಯ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್ ಪ್ರಾಸ್ತಾವಿಕ ಭಾಷಣ ಮಾಡಿದರು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ವೇದರಾಜ್ ಕೂರಗಲ್, ಶ್ರೀ ವೇದವ್ಯಾಸ ಸೇವಾ ಟ್ರಸ್ಟ್ ಅಧ್ಯಕ್ಷೆ ಪನ್ನಗ ವಿಜಯ ಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಸರ್ಕಾರಿ ಮಹಿಳಾ ನೌಕರರ ಸಂಘದ ಅಧ್ಯಕ್ಷೆ ಡಾ.ಕಾವೇರಿ ಪ್ರಕಾಶ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

ಕೆ.ಆರ್.ಆಸ್ಪತ್ರೆಯ ಪ್ರಾಧ್ಯಾಪಕಿ ಡಾ.ಎ. ಮಂಜುಳಾದೇವಿ, ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆ ಡಾ.ರೇಖಾ ಅರುಣ್ ಅವರಿಗೆ ಕರ್ನಾಟಕ ಗಾನವೈದ್ಯರತ್ನ, ಗಾಯಕಿಯರಾದ ಮೈಸೂರಿನ ತೇಜಾವತಿ, ನೀತು ಉಮೇಶ್, ಜಿ.ಪಲ್ಲವಿ ಪೈ, ಆನಗಟ್ಟಿಯ ಜ್ಞಾನವೇಣಿ ಅವರಿಗೆ ಕರ್ನಾಟಕ ಗಾನಕೋಗಿಲೆ, ಶ್ರೀರಾಂಪುರ ಗ್ರಾಪಂ ಮಾಜಿ ಸದಸ್ಯೆ ಕಮಲಮ್ಮ ನಟರಾಜ್, ಪೀಸ್ ಆಟೋ ಮತ್ತು ಟ್ಯಾಕ್ಸಿ ಅಸೋಸಿಯೇಷನ್ ಅಧ್ಯಕ್ಷೆ ಸೌಮ್ಯಾ ಆಟೋರಾಣಿ, ಭಾರತ್ ಭೀಮ್ ಸೇನೆ ಮಹಿಳಾ ಘಟಕದ ಅಧ್ಯಕ್ಷೆ ಮಹದೇವಮ್ಮ, ಮಹದೇವಪುರದ ಸಮಾಜ ಸೇವಕಿ ನಾಗರತ್ನಮ್ಮ ನಾಗರಾಜ್, ಉಷಾರಾವ್, ಪೌರ ಕಾರ್ಮಿಕರಾದ ಸುಶೀಲಾ, ಚೈತ್ರಾ ಅವರಿಗೆ ಸಮಾಜ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ರವಿಶಂಕರ್, ದೊರೆಸ್ವಾಮಿ, ಸ್ವಾತಿ ಸತ್ಯ, ಗೀತಾ ಪಾಂಡುಜಿ, ಶಿಕ್ಷಕ ಪ್ರಕಾಶ್ ಮೊದಲಾದವರು ಇದ್ದರು. ಸ್ನೇಹಾ ಪ್ರಾರ್ಥಿಸಿದರು. ಸ್ನೇಹ ಹೆಗ್ಡೆ ಸ್ವಾಗತಿಸಿದರು. ಅಲ್ನ ರೋಸ್ ಕಾರ್ಯಕ್ರಮ ನಿರೂಪಿಸಿದರು. ಪನ್ನಗ ವಿಜಯ ಕುಮಾರ್, ಗೀತಾ ಶ್ರೀಧರ್ ಮತ್ತು ತಂಡದವರು ಗೀತಗಾಯನ ನಡೆಸಿಕೊಟ್ಟರು.

ಏ.5, ಡಾ.ಬಾಬು ಜಗಜೀವನ ರಾಮ್ ಜನ್ಮ ದಿನಾಚರಣೆ



ಮೈಸೂರು,ಏ.1–ಮೈಸೂರು ಜಿಲ್ಲಾ ಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರಪಾಲಿಕೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಅವರ ಸಂಘಗಳ ಒಕ್ಕೂಟದ ವತಿಯಿಂದ ಡಾ.ಬಾಬು ಜಗಜೀವನ ರಾಮ್ ಅವರ 119 ನೇ ಜನ್ಮ ದಿನಾಚರಣೆಯನ್ನು ಏ.5 ರಂದು ಬೆಳಗ್ಗೆ 11 ಘಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ.

ಬೆಳಗ್ಗೆ 9:30 ಗಂಟೆಗೆ ನಗರದ ರೈಲ್ವೆ ನಿಲ್ದಾಣದ ಬಳಿಯಿರುವ ಡಾ.ಬಾಬು ಜಗಜೀವನ ರಾಮ್ ಅವರ ವೃತ್ತದಲ್ಲಿರುವ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುತ್ತದೆ. ಬೆಳಗ್ಗೆ 10 ಗಂಟೆಗೆ ನಗರದ ರೈಲ್ವೆ ನಿಲ್ದಾಣದಿಂದ ಕಲಾಮಂದಿರದವರೆಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷ ಅನಿಲ್‌ಕುಮಾರ್ ಸಿ. ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿ ಸಿದ್ದೇಗೌಡ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಎಂ, ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಅಧ್ಯಕ್ಷ ಹೆಚ್. ಡಿ. ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎನ್. ರಂಗಸ್ವಾಮಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಡಾ. ಪುಷ್ಪ ಅಮರನಾಥ್ ಆಗಮಿಸಲಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ರವಿಶಂಕರ್ ಡಿ., ಟಿ.ಎಸ್. ಶ್ರೀವತ್ಸ, ಜಿ.ಡಿ. ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ ಎಸ್., ಕೆ.ವಿವೇಕಾನಂದ, ಕೆ.ಶಿವಕುಮಾರ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ಯಾರಿಜಾನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಮಾಜಶಾಸ್ತ್ರ ಉಪನ್ಯಾಸಕ ಹಾಲಪ್ಪ ಉಪನ್ಯಾಸವನ್ನು ನೀಡಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿಗಳ 119ನೇ ಜಯಂತ್ಯೋತ್ಸವ ಆಚರಣೆ





ತ್ರಿವಿಧ ದಾಸೋಹಿ, ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿಗಳ 119ನೇ ಜಯಂತ್ಯೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಮೈಸೂರಿನ ಬಸವೇಶ್ವರ ರಸ್ತೆಯಲ್ಲಿ ಸಡಗರಮತ್ತು ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಶಿವಾರ್ಚಕರ ಸಂಘದ ರಾಜ್ಯಾಧ್ಯಕ್ಷ ಮಲ್ಲಣ್ಣ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಪಾಲಿಕೆ ಮಾಜಿ ಸದಸ್ಯರಾದ ಪ್ರದೀಪ್‌ಕುಮಾರ್, ಕೆ.ವಿ.ಮಲ್ಲೇಶ್, ಬಸವ ಬಳಗಗಳ ಒಕ್ಕೂಟಗಳ ಅಧ್ಯಕ್ಷ ಚಂದ್ರಶೇಖರ್, ಬ್ಯಾತಳ್ಳಿ ನಾಗರಾಜ್, ವರುಣ ಮಹೇಶ್ ಉಪಸ್ಥಿತರಿದ್ದರು. ಬಲಚಿತ್ರದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಮೆರವಣಿಗೆಯಲ್ಲಿ ತಾಳಕ್ಕೆ ಹೆಜ್ಜೆ ಹಾಕಿದರು.

ಮೈಸೂರು,ಏ.1–ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿಗಳ 119ನೇ ಜಯಂತ್ಯೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಇಂದು ಮೈಸೂರಿನ ಬಸವೇಶ್ವರ ರಸ್ತೆಯಲ್ಲಿ ಅತ್ಯಂತ ಸಡಗರ ಮತ್ತು ಸಂಭ್ರಮದಿಂದ ಆಚರಿಸಲಾಯಿತು.

ಬೆಳಿಗ್ಗೆ 9 ಗಂಟೆಗೆ ಬಸವೇಶ್ವರ ರಸ್ತೆಯ 13ನೇ ಕ್ರಾಸ್‌ನಿಂದ ಪ್ರಾರಂಭವಾದ ಶ್ರೀಗಳ ಭಾವಚಿತ್ರವುಳ್ಳ ಭವ್ಯ ಮೆರವಣಿಗೆಗೆ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ಶಿವಾರ್ಚಕರ ಸಂಘದ ರಾಜ್ಯಾಧ್ಯಕ್ಷ ಮಲ್ಲಣ್ಣ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರದೀಪ್ ಕುಮಾರ್, ಮಲ್ಲೇಶ್, ಬಸವ ಬಳಗಗಳ ಒಕ್ಕೂಟಗಳ ಅಧ್ಯಕ್ಷ ಚಂದ್ರಶೇಖರ್, ಬ್ಯಾತಳ್ಳಿ ನಾಗರಾಜ್, ವರುಣ ಮಹೇಶ್ ಚಾಲನೆ ನೀಡಿದರು.

ಮೆರವಣಿಗೆಯುದ್ದಕ್ಕೂ ಜಾನಪದ ಕಲಾತಂಡಗಳ ಪ್ರದರ್ಶನ, ಮೇಳಗಳು ಮತ್ತು ಸಾವಿರಾರು ಭಕ್ತಾದಿಗಳ ಜಯ ಘೋಷಗಳು ಮೊಳಗಿದವು.

ಬಸವೇಶ್ವರ ರಸ್ತೆಯಿಂದ ಆರಂಭಗೊಂಡ ಮೆರವಣಿಗೆಯು ನೂರೊಂದು ಗಣಪತಿ ದೇವಸ್ಥಾನ, ರಾಮಾನುಜ ರಸ್ತೆ, ಕಂಸಾಳೆ ಮಾದೇವಯ್ಯ ವೃತ್ತ ಹಾಗೂ ಚಾಮುಂಡಿಪುರಂ ವೃತ್ತದ ಮೂಲಕ ಸಾಗಿ, ಸಾರ್ವಜನಿಕರ ಗಮನ ಸೆಳೆಯಿತು. ಈ ವೇಳೆ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗದ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರಾದ ಅಂಬಳೆ ಶಿವಣ್ಣ, ಸಂದೀಪ್ ಚಂದ್ರಶೇಖರ್, ಗೆಜ್ಜಗಳ್ಳಿ ಶಂಕರ್, ಮುಕುಂದ ರಾಜೇ ಅರಸ್, ಮಹಾದೇವಸ್ವಾಮಿ, ಹಡ್ಜನ ಗುರುಸ್ವಾಮಿ, ಪ್ರಭು, ಮಾರಶೆಟ್ಟಳ್ಳಿ ಮಹದೇವು, ಮಲ್ಲೇಶ್, ವೃಷಭೇಂದ್ರ, ಬಸವರಾಜು, ಜಯಣ್ಣ, ಹಡ್ಜನ ರಾಜು, ಶಿವಣ್ಣ, ಶಿವಕುಮಾರ ಶಾಸ್ತ್ರಿಗಳು, ಮುರುಡಗಳ್ಳಿ ಕುಮಾರ್, ಎಚ್‌ಎನ್ ಚಂದ್ರಶೇಖರ್, ಬಾಲಕೃಷ್ಣ ಗುಂಡಪ್ಪ, ಭಾಸ್ಕರ್, ನವೀನ್ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದು, ಶ್ರೀಗಳ ತತ್ವ ಆದರ್ಶಗಳನ್ನು ಸ್ಮರಿಸಿದರು.



ಶ್ರೀ ಡಾ. ಶಿವಕುಮಾರ ಸ್ವಾಮಿಗಳ ಭಕ್ತವೃಂದ ಸಮಿತಿ ವತಿಯಿಂದ ಮೈಸೂರಿನ ಬಸವೇಶ್ವರ ಮುಖ್ಯ ರಸ್ತೆ 13ನೇ ಕ್ರಾಸ್‌ನಲ್ಲಿ ಏರ್ಪಡಿಸಿದ್ದ ಶಿವಕುಮಾರ ಸ್ವಾಮೀಜಿಯವರ 119ನೇ ಜಯಂತೋತ್ಸವ ಹಾಗೂ ಗುರುವಂದನ ಕಾರ್ಯಕ್ರಮದ ಅಂಗವಾಗಿ ಡಾ.ಶಿವಕುಮಾರ ಸ್ವಾಮಿಗಳಿಗೆ ಹಾಗೂ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಲಾಯಿತು. ಕುದೇರು ಮಠದ ಗುರುಲಿಂಗ ಸ್ವಾಮೀಜಿ, ನರಗ್ಯಾತನಹಳ್ಳಿ ಶಿವಕುಮಾರ ಸ್ವಾಮೀಜಿ, ಅಲ್ಕೈ ಮಠದ ಬಸವಣ್ಣ ಸ್ವಾಮೀಜಿ, ನೀಲ್ಲೋಗೆ ಮಠದ ಮಲ್ಲಪ್ಪ ಸ್ವಾಮೀಜಿ, ಮೈಸೂರು ನಗರಪಾಲಿಕೆ ಮಾಜಿ ಸದಸ್ಯರಾದ ಜಗದೀಶ್, ಮುಖಂಡರಾದ ಶಿವಪ್ರಸಾದ್, ಮೋಹನ್, ಶಿವಕುಮಾರ್, ಬಸವ ಬಳಗದ ಚಾಮುಂಡಿಪುರಂ ಅಧ್ಯಕ್ಷ ಸಂದೀಪ್, ಸಮಿತಿ ಗೌರವ ಅಧ್ಯಕ್ಷ ಅಂಬಳೆ ಶಿವಣ್ಣ, ಡಾ.ಶಿವಕುಮಾರ ಸ್ವಾಮಿಗಳ ಭಕ್ತ ವೃಂದ ಮತ್ತು ವೀರಶೈವ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

ತ್ರಿವಿಧ ದಾಸೋಹಿಗಳಾದ ಶ್ರೀಗಳ ಜಯಂತಿಯನ್ನು ಆಚರಿಸುವ ಮೂಲಕ ಅವರ ಕಾಯಕ ಯೋಗದ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವುದು ನಮ್ಮ ಉದ್ದೇಶವಾಗಿದೆ. ಸಾವಿರಾರು ಭಕ್ತರು ಶಿಸ್ತುಬದ್ಧವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಭಕ್ತಾದಿಗಳಿಗೆ ಎಳನೀರು ವಿತರಣೆ



ಚಾಮುಂಡಿಪುರಂ ವೃತ್ತದಲ್ಲಿ ಭಕ್ತಾದಿಗಳಿಗೆ ಎಳನೀರು ವಿತರಿಸಲಾಯಿತು.

ಮೈಸೂರು, ಏ. 1– ಶ್ರೀ ಸಿದ್ಧಗಂಗಾ ಶಿವಕುಮಾರ ಸ್ವಾಮಿಗಳ ಭಕ್ತವೃಂದದ ವತಿಯಿಂದ ಶಿವಕುಮಾರ ಸ್ವಾಮಿಗಳ ವರ್ಧಂತಿ ಅಂಗವಾಗಿ ಚಾಮುಂಡಿಪುರಂ ವೃತ್ತದಲ್ಲಿ ಭಕ್ತಾದಿಗಳಿಗೆ ಎಳನೀರು ವಿತರಿಸಲಾಯಿತು. ಬಳಿಕ ಮಾತನಾಡಿದ ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಿದ್ಧಗಂಗಾ ಶ್ರೀಗಳಿಗೆ 'ಭಾರತ ರತ್ನ' ಪುರಸ್ಕಾರ ನೀಡಿ ಗೌರವಿಸಬೇಕು. ತ್ರಿವಿಧ ದಾಸೋಹಿ ಸಿದ್ದಗಂಗಾ ಶ್ರೀಗಳು ಮಾಡಿದ ಕಾರ್ಯ ದೇಶಕ್ಕೆ ಮಾದರಿಯಾಗಿದೆ. ಭಾರತ ರತ್ನ ನೀಡಿದರೆ ಪ್ರಶಸ್ತಿಗೆ ಒಂದು ಗೌರವ ಸಂದಿದಂತಾಗುತ್ತದೆ. ಜಾತಿ, ಮತ, ಪಂಥ, ಭಾಷೆ, ಧರ್ಮ ಎನ್ನದೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಿ ನಾಡನ್ನು ಶ್ರೀಮಂತಗೊಳಿಸಿದ ಶ್ರೀಗಳಿಗೆ ತಕ್ಷಣವೇ ಭಾರತರತ್ನ ಘೋಷಿಸಬೇಕು ಎಂದರು.

ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಪಾಲಿಕೆ ಮಾಜಿ ಸದಸ್ಯ ಜಗದೀಶ್, ನಿರೂಪಕ ಅಜಯ್ ಶಾಸ್ತ್ರಿ, ದೂರ ರಾಜಣ್ಣ, ಸುಚಿಂದ್ರ ಇನ್ನಿತರರು ಹಾಜರಿದ್ದರು.



ಮೈಸೂರು ಕುವೆಂಪುನಗರದ ಶ್ರೀ ಶಿವಕುಮಾರ ಸ್ವಾಮೀಜಿಗಳ ವೃತ್ತದಲ್ಲಿ ಜಗದಾಂಬ ಪೆಟ್ರೋಲ್ ಬಂಕ್ ಅಭಿಮಾನಿಗಳ ವತಿಯಿಂದ ಶ್ರೀ ಶಿವಕುಮಾರ ಸ್ವಾಮಿಗಳ ಜಯಂತ್ಯೋತ್ಸವ ಪ್ರಯುಕ್ತ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ನಂತರ ಭಕ್ತಾದಿ ಗಳಿಗೆ ಪ್ರಸಾದ ವಿತರಿಸಲಾಯಿತು. ಈ ವೇಳೆ ಷಡಕ್ಷರಿ ರಜಿನಿ, ಮುಖಂಡರಾದ ಜಗದೀಶ್, ಗುರುಸ್ವಾಮಿ, ರವಿಕುಮಾರ್, ಕಿರಣ್‌ಕುಮಾರ್, ಕಡಕೊಳ ಜಗದೀಶ್, ಹೇಮಂತ್ ಕುಮಾರ್, ಆನಂದ್, ಮಂಜು, ಶಿವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಭಕ್ತರಿಗೆ ಮಜ್ಜಿಗೆ, ಪಾನಕ ವಿತರಿಸಿ ಶಿವಕುಮಾರ ಸ್ವಾಮೀಜಿ ಜಯಂತಿ ಆಚರಣೆ



ಶ್ರೀ ಶಿವಕುಮಾರ ಸ್ವಾಮೀಜಿ ಜಯಂತಿ ಹಿನ್ನೆಲೆ ಮಜ್ಜಿಗೆ, ಪಾನಕ ವಿತರಿಸಲಾಯಿತು.

ಮೈಸೂರು,ಏ.1–ಮೈಸೂರಿನ ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನದಲ್ಲಿ ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಶ್ರೀ ಶಿವಕುಮಾರ ಮಹಾಸ್ವಾಮೀಜಿ ಅವರ 119ನೇ ಜಯಂತಿಯನ್ನು ಬುಧವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಬಳಿಕ ಭಕ್ತರಿಗೆ ಮಜ್ಜಿಗೆ ಮತ್ತು ಪಾನಕವನ್ನು ವಿತರಿಸುವ ಮೂಲಕ ದಾಸೋಹದ ಪರಂಪರೆಯನ್ನು ಸ್ಮರಿಸಲಾಯಿತು. ಸಮಾಜದ ಎಲ್ಲ ವರ್ಗದ ಜನರು ಪಾಲ್ಗೊಂಡು, ಸಮಾನತೆ ಮತ್ತು ಸೇವೆಯ ಸಂದೇಶವನ್ನು ಆಚರಣೆ ಮೂಲಕ ಜೀವಂತಗೊಳಿಸಿದರು.

ತ್ರಿವಿಧ ದಾಸೋಹದ ತತ್ವವನ್ನು ಜೀವನದಲ್ಲೇ ಅಳವಡಿಸಿಕೊಂಡಿದ್ದ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರು ಅನ್ನ, ಅಕ್ಷರ ಮತ್ತು ಆಶ್ರಯದ ಮೂಲಕ ಲಕ್ಷಾಂತರ ಜನರ ಬದುಕಿಗೆ ಬೆಳಕು ತಂದ ಮಹಾನ್ ಯೋಗಿಗಳು. ಅವರ ಸೇವಾ ಮನೋಭಾವ, ತ್ಯಾಗ ಮತ್ತು ಮಾನವೀಯತೆ ಇಂದಿನ ಪೀಳಿಗೆಗೆ ದಾರಿದೀಪವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ಚಿಕ್ಕಹಳ್ಳಿ ಸ್ವಾಮಿ ವರುಣ ಮಹೇಶ್, ಬೀರಿಹುಂಡಿ ಮಲ್ಲೇಶ್, ಎಂ.ಜಿ. ಮಹೇಶ್, ಗುರೂರು ಮಹೇಶ್, ಶಿವಸ್ವಾಮಿ, ಅಶೋಕ, ಶಿವಾನಂದ, ಶಾಂತಮ್ಮ ಜಯಲಕ್ಷ್ಮಿ, ಮೀನಾ, ಮಹದೇವು, ನಟರಾಜು, ಮನುಗನಹಳ್ಳಿ ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.

ಏ.4ರಂದು ಮಂಕುತಿಮ್ಮನ ಕಗ್ಗಗಳು ಗಾಯನ, ವ್ಯಾಖ್ಯಾನ ಕಾರ್ಯಕ್ರಮ

ಮೈಸೂರು, ಏ. 1– ಮೈಸೂರಿನ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ವತಿಯಿಂದ ಏ.4ರಂದು ಸಂಜೆ 6 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಸಂಗೀತ ಕಲಾನಿಧಿ ಮೈಸೂರು ವಾಸುದೇವಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾದಲ್ಲಿ ಎಸ್.ಜಿ.ರಘುರಾಂ ಸಂಸ್ಮರಣೆ ಕಾರ್ಯಕ್ರಮದ ಅಂಗವಾಗಿ ಡಾ. ಡಿವಿಜಿ ಅವರ ಮಂಕುತಿಮ್ಮನ ಕಗ್ಗಗಳು ಗಾಯನ ಮತ್ತು ವ್ಯಾಖ್ಯಾನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಡಾ. ರೋಹಿಣಿ ಮೋಹನ್ ನಡೆಸಿಕೊಡಲಿದ್ದಾರೆ.

ನೇಮಕ



ಮೈಸೂರು: ಮೈಸೂರು ನಗರ ಜನಾತದಳ (ಜಾತ್ಯಾತೀತ) ಪಕ್ಷದ ನರಸಿಂಹರಾಜ ಕ್ಷೇತ್ರದ ಅಧ್ಯಕ್ಷರನ್ನಾಗಿ ಮಂಡಿ ಮೊಹಲ್ಲಾದ ರಿಜ್ವಾನ್ ಅಹಮದ್ ಅವರನ್ನು ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು ನೇಮಿಸಿದ್ದಾರೆ.

ಪೂರ್ವಭಾವಿ ಸಭೆ ಮುಂದೂಡಿಕೆ

ಮೈಸೂರು, ಏ.1– ಏ.20ರ ಬಸವ ಜಯಂತಿ ಅಂಗವಾಗಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿತ್ತು. ಕಾರಣಾಂತರದಿಂದ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಏ.6 (ಸೋಮವಾರ)ರ ಮಧ್ಯಾಹ್ನ 12.30 ಗಂಟೆಗೆ ಸಿದ್ದಾರ್ಥ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರೆಯಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಏ.1– ವಿವೇಕಾನಂದ ವಿದ್ಯುತ್ ಮಾರ್ಗದಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಏ.2 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿವೇಕಾನಂದ ನಗರ, ಮಾತಾಜಿ ಭಂಡಾರ ಸುತ್ತಮುತ್ತ, ಶಿವ ದೇವಸ್ಥಾನ ಹಿಂಭಾಗ, ಜೆಎಸ್‌ಎಸ್ ಶಾಲೆ ಸುತ್ತಮುತ್ತ, ಡೊಮಿನಾಸ್ ಸುತ್ತಮುತ್ತ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಸಾಧಕರಿಗೆ 'ಸ್ಫೂರ್ತಿಸಖಿ' ಪ್ರಶಸ್ತಿ ಪ್ರದಾನ



ವಿವಿಧ ವಿಭಾಗಗಳಲ್ಲಿ ಸಾಧನೆಗೈದ ಮುದ್ದು ಮಾದಪ್ಪ, ಡಾ.ಕೆ.ವಿ. ಲಕ್ಷ್ಮೀದೇವಿ, ಕೆರೋಡಿ ಲೋಲಾಕ್ಷಿ, ಹೇಮಮಾಲಾ, ವಾಣಿಸುಬ್ಬಯ್ಯ, ಪದ್ಮಾ ವೆಂಕಟೇಶ್, ನಂದಿನಿ ರಂಗನಾಥ್, ಲತಾ ಮೋಹನ್ ಅವರಿಗೆ ಸ್ಫೂರ್ತಿ ಸಖಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು: ನಗರದ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ತನ್ನ ಮೂರನೇ ವರುಷದ ಹರುಷವನ್ನು ಸಂಭ್ರಮದಿಂದ ಆಚರಿಸಿಕೊಂಡಿತು.

ವಿವಿಧ ವಿಭಾಗಗಳಲ್ಲಿ ಸಾಧನೆಗೈದ ಮುದ್ದುಮಾದಪ್ಪ, ಡಾ.ಕೆ.ವಿ.ಲಕ್ಷ್ಮೀದೇವಿ, ಕೆರೋಡಿ ಲೋಲಾಕ್ಷಿ, ಹೇಮಮಾಲಾ, ವಾಣಿಸುಬ್ಬಯ್ಯ, ಪದ್ಮಾ ವೆಂಕಟೇಶ್, ನಂದಿನಿ ರಂಗನಾಥ್, ಲತಾ ಮೋಹನ್ ಅವರುಗಳಿಗೆ ಸ್ಫೂರ್ತಿಸಖಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಿವೃತ್ತ ತಹಸೀಲ್ದಾರ್ ಹಾಗೂ ಅಂಕಣಕಾರರಾದ ಡಾ.ವಿ.ರಂಗನಾಥ್ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಹಿರಿಯ ಸಮಾಜ ಸೇವಕರಾದ ರಘುರಾಂ ವಾಜಪೇಯಿ, ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಅಧಿಕಾರಿ ರಾಜಾರಾಂ ಭಟ್ ಆಗಮಿಸಿದ್ದರು.

ಇದೇ ಸಂದರ್ಭದಲ್ಲಿ ಹದಿನಾಲ್ಕು ತಂಡಗಳು ಜನಪದ ಗೀತಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿ ಕ್ರಮವಾಗಿ ಬಾಲ ತ್ರಿಪುರಾಂಬಿಕಾ ಭಜನಾ ಮಂಡಳಿ, ಗಾಯತ್ರಿ ಮಹಿಳಾ ಸಮಾಜ, ವಿಜಯನಗರದ ಹೆಚ್‌ವಿಎಲ್ ಲೇಡಿಸ್ ಕ್ಲಬ್ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನಗಳಿಗೆ ಭಾಜನರಾದರು. ವಿವಿಧ ಹೂಗಳು, ತರಕಾರಿಗಳು, ಹಣ್ಣುಗಳನ್ನು ಬಳಸಿ 32 ಸ್ಪರ್ಧಿಗಳು ದೇಸಿ ಪಾನೀಯ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಗೀತಾ ರಾಜಾರಾಂ, ಸ್ನೇಹಾ ಇನಾಂದಾರ್, ಮಹಾಲಕ್ಷ್ಮಿ ಕ್ರಮವಾಗಿ ಪ್ರಥಮ ದ್ವಿತೀಯ ತೃತೀಯ ಸ್ಥಾನ ಪಡೆದರು. ಸೀರೆಯ ನಿಖರವಾದ ಬೆಲೆ ಹೇಳುವ ಮೂಲಕ ಸಖಿಗೊಂದು ಸ್ಯಾರಿ ಸ್ಪರ್ಧೆ ಹಾಗೂ ಥಟ್ ಅಂತ ಹಾಡಿ ಎನ್ನುವ ಮನರಂಜನಾ ಸ್ಪರ್ಧೆಗಳಲ್ಲಿ ಹಲವಾರು ಮಹಿಳೆಯರು ಪಾಲ್ಗೊಂಡು ಸಂಭ್ರಮಿಸಿದರು. ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ಉಪಸ್ಥಿತರಿದ್ದರು.

ಕಡಕೊಳದಲ್ಲಿ ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನೂತನ ಕಟ್ಟಡಗಳ ಉದ್ಘಾಟನೆ



ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನೂತನ ಕಟ್ಟಡಗಳನ್ನು ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಉದ್ಘಾಟಿಸಲಾಯಿತು.

ಮೈಸೂರು, ಏ.1– ಮೈಸೂರಿನ ಶೇಷಾದ್ರಿಪುರಂ ಎಜುಕೇಶನಲ್ ಟ್ರಸ್ಟ್ ಅಡಿಯಲ್ಲಿ ಸ್ಥಾಪಿತವಾದ ಮೈಸೂರು ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ನೂತನ ಕಟ್ಟಡಗಳನ್ನು ನಗರದ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಉದ್ಘಾಟಿಸಲಾಯಿತು.

ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜಿ, ವಿಟಿಯು ಕುಲಪತಿ ಡಾ.ಎಸ್. ವಿದ್ಯಾಶಂಕರ್ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀಗಳು ಮಾತನಾಡಿ, ಈ ವೇಳೆ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸಂಸ್ಥಾಪಕರಾದ ಆನಂದಮ್ಮ ಮತ್ತು ಸೀತಮ್ಮ ಅವರನ್ನು ಸ್ಮರಿಸಬೇಕು. ಅವರ ದೂರದೃಷ್ಟಿ ಪ್ರಶಂಸನೀಯ. ಶಿಕ್ಷಣವು ಬೆಳಕಿನಂತೆ ಹರಡಬೇಕು. ಕಂಪ್ಯೂಟರ್ ಸಂಬಂಧಿತ ಶಾಖೆಗಳತ್ತ ಹೆಚ್ಚುತ್ತಿರುವ ಒಲವು ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗಬಹುದು ಎಂದು ಕಳವಳ ವ್ಯಕ್ತಪಡಿಸಿದರು.

ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಮಾತನಾಡಿ, ಕಡಿಮೆ ವೆಚ್ಚದಲ್ಲಿ ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿರುವ ಎಸ್‌ಇಟಿ ಟ್ರಸ್ಟ್‌ನ ಕಾರ್ಯ ಶ್ಲಾಘನೀಯ. ವಿದ್ಯಾರ್ಥಿಗಳು ತಾಂತ್ರಿಕ ಜ್ಞಾನದ ಜೊತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ ಎಂದರು.

ವಿಟಿಯು ಕುಲಪತಿ ಡಾ.ವಿದ್ಯಾಶಂಕರ್ ಮಾತನಾಡಿ, ರಾಜ್ಯ ಮತ್ತು ವಿಶ್ವವಿದ್ಯಾಲಯದ ಗುಣಮಟ್ಟದ ತಾಂತ್ರಿಕ ಶಿಕ್ಷಣದ ಪಾತ್ರ ಹಿರಿದು, ಇಂಟರ್ನ್‌ಶಿಪ್‌ಗಳು, ಕೈಗಾರಿಕಾ ಸಹಭಾಗಿತ್ವ ಹಾಗೂ ನವೀನ ಅಧ್ಯಯನ ವಿಧಾನಗಳ ಮಹತ್ವ ವಿವರಿಸಿದರು.

ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವಿನ್ಯಾಸ ಆಲೋಚನೆ ಅಗತ್ಯವಿದೆ. ಎಐ ಎಲ್ಲಾ ಶಾಖೆಗಳಲ್ಲೂ ಅನ್ವಯಿಸಬಹುದು. ವಿದ್ಯಾರ್ಥಿಗಳು ವಿಷಯ ಆಯ್ಕೆಯಲ್ಲಿ ಒತ್ತಡಕ್ಕೆ ಒಳಗಾಗಬಾರದು. ಎಲೆಕ್ಟ್ರಿಕಲ್, ಮೆಕ್ಯಾನಿಕಲ್ ಮತ್ತು ಸಿವಿಲ್ ಶಾಖೆಗಳ ಭವಿಷ್ಯದ ಕುರಿತು ತಿಳಿಸಿಕೊಟ್ಟರು.

ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಅಧ್ಯಕ್ಷ ಎನ್.ಆರ್. ಪಂಡಿತ್ ಆರಾಧ್ಯ ಮಾತನಾಡಿ, ಸ್ವಯಂ ಉದ್ಯೋಗದ ಮಹತ್ವ ಅಗತ್ಯ. ವಿದ್ಯಾರ್ಥಿಗಳು ತಂತ್ರಜ್ಞಾನದ ಜೊತೆಗೆ ಸಂಸ್ಕೃತಿಯನ್ನೂ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳ ಕಲಿಕೆ ಉತ್ತಮಗೊಳಿಸಲು ಹೊಸ ಬೋಧನಾ ವಿಧಾನ ಅನುಸರಿಸುತ್ತಿರುವ ಅಧ್ಯಾಪಕರನ್ನು ಅವರು ಪ್ರಶಂಸಿಸಿದರು. ಎಸ್‌ಇಟಿ ಸಂಸ್ಥೆಯ ಗೌರವ ಕಾರ್ಯದರ್ಶಿ ನಾಡೋಜ ವುಡೆ ಪಿ.ಕೃಷ್ಣ ಮಾತನಾಡಿ, ನಿಪುಣ ಇಂಜಿನಿಯರ್‌ಗಳನ್ನು ರೂಪಿಸುವಲ್ಲಿ ಸಂಸ್ಥೆಯು ಶ್ರಮಿಸುತ್ತಿದೆ. 1944ರಲ್ಲಿ ಸ್ಥಾಪನೆಯಾದ ಎಸ್‌ಇಟಿ ಟ್ರಸ್ಟ್ ಕರ್ನಾಟಕದಾದ್ಯಂತ 34 ಸಂಸ್ಥೆಗಳನ್ನು ಹೊಂದಿದ್ದು, 1500 ಅಧ್ಯಾಪಕರು, 26 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಟ್ರಸ್ಟ್ ಸದಸ್ಯರು, ಅಧ್ಯಾಪಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಸೇರಿದಂತೆ 1,500ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ರಷ್ಯನ್ ಭಾಷೆಗೆ ಬಸವಾದಿ ಶರಣರ ವಚನಗಳ ಅನುವಾದ ಮಾಡಿದ ಡಾ.ಗಲೀನ ಕೊಪೆಲಿಯೋವಿಚ್‌ಗೆ ಅಭಿನಂದನೆ

ಕೆ.ಸಿ.ಶಿವಪ್ಪರ 'ಮುದ್ದುರಾಮ' ಚರಿತ ಚೌಪದಿ'ಯೂ ರಷ್ಯನ್ ಭಾಷೆಗೆ ಅನುವಾದ ಸಿದ್ಧತೆ

ಮೈಸೂರು, ಏ.1(ಎಂಟಿವೈ)– ಸಮಾನತೆಯ ಹರಿಕಾರರಾದ ಬಸವಾದಿ ಶರಣರ ವಚನಗಳನ್ನು ರಷ್ಯನ್ ಭಾಷೆಗೆ ಅನುವಾದಿಸಿರುವ ರಷ್ಯಾದ ಡಾ.ಗಲೀನ ಕೊಪೆಲಿಯೋವಿಚ್ ಅವರನ್ನು ಬಸವ ಬಳಗಗಳ ಒಕ್ಕೂಟದ ವತಿಯಿಂದ ಬುಧವಾರ ಸನ್ಮಾನಿಸಲಾಯಿತು.



ಬಸವಾದಿ ಶರಣರ ವಚನಗಳನ್ನು ರಷ್ಯನ್ ಭಾಷೆಗೆ ಅನುವಾದಿಸಿರುವ ರಷ್ಯಾದ ಡಾ.ಗಲೀನ ಕೊಪೆಲಿಂಯೋವಿಚ್ ಹಾಗೂ ಮಾರ್ಗದರ್ಶಕ ಪ್ರೊ.ಹೆಚ್.ಎಸ್.ಹರಿಶಂಕರ್ ಅವರನ್ನು ಬಸವ ಬಳಗಗಳ ಒಕ್ಕೂಟದಿಂದ ಬುಧವಾರ ಸನ್ಮಾನಿಸಲಾಯಿತು.

ಮೈಸೂರಿನ ಕುವೆಂಪುನಗರದ ಅನಿಕೇತನ ರಸ್ತೆ ಐದನೇ ಕ್ರಾಸಿನಲ್ಲಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಹೆಚ್.ಎಸ್. ಹರಿಶಂಕರ್ ನಿವಾಸದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ರಷ್ಯಾದ ಡಾ.ಗಲೀನ ಕೊಪೆಲಿಯೋವಿಚ್ ಹಾಗೂ ಅವರಿಗೆ ಮಾರ್ಗದರ್ಶನ ನೀಡಿದ ಪ್ರೊ.ಹೆಚ್.ಎಸ್. ಹರಿಶಂಕರ್ ಅವರನ್ನು ಹಿರಿಯ ಕವಿ ಪ್ರೊ.ಕೆ.ಸಿ.ಶಿವಪ್ಪ, ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ, ಫಲತಾಂಬೂಲ ಹಾಗೂ ಸ್ಮರಣಿಕೆ ನೀಡಿ ಸನ್ಮಾನಿಸಿದರು.

ಇದೇ ವೇಳೆ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಮಾತನಾಡಿ, ಅನುವಾದ ಸವಾಲಿನ ಕೆಲಸ. ಒಂದು ಭಾಷೆಯ ಪದಗಳಿಗೆ ಸಮನಾದ ಪದಗಳು ಮತ್ತೊಂದು ಭಾಷೆಯಲ್ಲಿ ಸಿಗುವುದಿಲ್ಲ. ಇಂತಹ ಮಹತ್ವದ ಕೆಲಸವನ್ನು ಡಾ.ಗಲೀನ ಮಾಡಿರುವುದು ಶ್ಲಾಘನೀಯ. ಇಂಗ್ಲಿಷ್‌ನವರು ಹೋದ ಕಡೆಯೆಲ್ಲಾ ತಮ್ಮ ಭಾಷೆಯನ್ನು ಪ್ರಚಾರ ಮಾಡಿದರು. ಆದ್ದರಿಂದಲೇ ಇಂಗ್ಲಿಷ್ ಭಾಷೆ ವ್ಯಾಪಕವಾಗಿ ಬೆಳೆದಿದೆ. ಆದರೆ ನಾವು ಕನ್ನಡವನ್ನು ಆ ರೀತಿ ಮಾಡಲು ಸಾಧ್ಯವಾಗಿಲ್ಲ ಎಂದು ವಿಷಾದಿಸಿದರು.

ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಹೆಚ್.ಎಸ್. ಹರಿಶಂಕರ್ ಮಾತನಾಡಿ, ರಷ್ಯಾದ ಗಲೀನ ಅವರು ಮುಂದಿನ ದಿನಗಳಲ್ಲಿ ಕೆ.ಸಿ.ಶಿವಪ್ಪರ 'ಮುದ್ದುರಾಮ ಚರಿತ ಚೌಪದಿ'ಗಳನ್ನು ರಷ್ಯನ್ ಭಾಷೆಗೆ ಅನುವಾದಿಸಲಿದ್ದು, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ ಎಂದರು.

ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್ ಮಾತನಾಡಿ, ಗಲೀನ ಅವರು ಅಕ್ಕಮಹಾದೇವಿ ಅವರ ವಚನಗಳನ್ನು ರಷ್ಯನ್ ಭಾಷೆಗೆ ಅನುವಾದಿಸುವಂತೆ ಸಲಹೆ ನೀಡಿದರು.

ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಏ.19–20 ರಂದು ಕಲಾಮಂದಿರದಲ್ಲಿ ಅದ್ಧೂರಿಯಾಗಿ ನಡೆಯುವ ಬಸವ ಜಯಂತಿಯಲ್ಲಿ ಗಲೀನ ಅವರನ್ನು ಸನ್ಮಾನಿಸುವ ಉದ್ದೇಶ ಇತ್ತು. ಆದರೆ ಅವರು ನಾಳೆಯೇ ರಷ್ಯಾಗೆ ತೆರಳುತ್ತಿರುವುದರಿಂದ ಡಾ.ಸಿದ್ಧಗಂಗಾ ಶಿವಕುಮಾರ ಸ್ವಾಮಿಗಳ ಜಯಂತಿಯ ದಿನವಾದ ಇಂದು ಅಭಿನಂದಿಸಲಾಗುತ್ತಿದೆ ಎಂದರು.

ಸನ್ಮಾನ ಸ್ವೀಕರಿಸಿದ ಬಳಿಕ ಅನುವಾದಕರಾದ ರಷ್ಯಾದ ಡಾ.ಗಲೀನ ಕೊಪೆಲಿಯೋ ವಿಚ್ ಮಾತನಾಡಿ, ತಾವು ಫ್ಯಾಷನ್‌ಗೆ ಕನ್ನಡವನ್ನು ಕಲಿತು, ಶರಣರ ವಚನಗಳ ಮಹತ್ವ ಅರಿತು ರಷ್ಯನ್ ಭಾಷೆಗೆ ಅನುವಾದಿಸಿದ್ದೇನೆ. ಇದಕ್ಕೆ ಪ್ರೊ.ಹೆಚ್.ಎಸ್. ಹರಿಶಂಕರ್ ಅವರ ಮಾರ್ಗದರ್ಶನ ಕಾರಣ. ಇಂದು ರಷ್ಯಾದಲ್ಲಿ ಈ ಕೃತಿ ಬಿಡುಗಡೆಯಾಗಿದೆ. ಮತ್ತಷ್ಟು ಕೃತಿಗಳನ್ನು ಅನುವಾದಿಸುತ್ತೇನೆ ಎಂದು ಹೇಳಿ ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಡಾ.ಕಾ.ರಾಮೇಶ್ವರಪ್ಪ ವಚನ ಪ್ರಸ್ತುತಪಡಿಸಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಮೈಸೂರು ತಾ. ಅಧ್ಯಕ್ಷ ದೇವರಾಜ ಪಿ. ಚಿಕ್ಕಹಳ್ಳಿ, ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷ ಶಿವಮೂರ್ತಿ ಕಾನ್ಯ, ಬಸವ ಬಳಗಗಳ ಒಕ್ಕೂಟದ ಪದಾಧಿಕಾರಿಗಳಾದ ಎ.ಪಿ.ವಿರೂಪಾಕ್ಷ, ಜಯಶಂಕರ್, ಬಿ.ಆರ್.ಶಿವಕುಮಾರ್, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಕೆನರಸಿಂಹಮೂರ್ತಿ, ರಂಗನಾಥ್ ಮೈಸೂರು, ಲೇಖಕಿಯರಾದ ಮಂಗಳಾ ಮುದ್ದು ಮಾದಪ್ಪ, ಬಿ.ಕೆ.ಮೀನಾಕ್ಷಿ, ಕೆರೋಡಿ ಲೋಲಾಕ್ಷಿ, ಕನ್ನಡ ಚಳವಳಿಗಾರಾದ ಮೂಗೂರು ನಂಜುಂಡಸ್ವಾಮಿ, ಶಾಸನತಜ್ಞ ಹೆಚ್.ಎಂ.ನಾಗರಾಜರಾವ್, ಪ್ರೊ.ಹೆಚ್.ಎಸ್. ಗೋಪಿನಾಥ್ ಹರಿಹರ, ಬಾಗಳಿ ಮಹೇಶ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ



ಮೇಲುಕೋಟೆಯ ಕಲ್ಯಾಣಿಯಲ್ಲಿ ಬುಧವಾರ ರಾತ್ರಿ ವೈರಮುಡಿ ತೆಪ್ಪೋತ್ಸವ ವಿಜೃಂಭಣೆಯಿಂದ ನೆರವೇರಿತು.

ಮೇಲುಕೋಟೆಯಲ್ಲಿ ವಿಜೃಂಭಣೆಯ
ವೈರಮುಡಿ ತೆಪ್ಪೋತ್ಸವ

ಇಂದು ತೀರ್ಥಸ್ನಾನ ಅವಭೃತ ಪಟ್ಟಾಭಿಷೇಕ

ವೈರಮುಡಿ ಬ್ರಹ್ಮೋತ್ಸವದಲ್ಲೇ ಪ್ರಮುಖವಾದ ಚೆಲುವನಾರಾಯಣಸ್ವಾಮಿಯ ಜಯಂತಿಯ ದಿನವಾದ ಗುರುವಾರ ವೈರಮುಡಿ ಜಾತ್ರಾಮಹೋತ್ಸವದ 9ನೇ ತಿರುನಾಳ್ ಅಂಗವಾಗಿ ಕಲ್ಯಾಣಿಯಲ್ಲಿ ಮಧ್ಯಾಹ್ನ 11 ಗಂಟೆಯ ನಂತರ ತೀರ್ಥಸ್ನಾನ ನಡೆಯಲಿದೆ. ನಂತರ ಸಂಜೆ 5 ಗಂಟೆಗೆ ಪರಕಾಲಮಠದಲ್ಲಿ ಪಟ್ಟಾಭಿಷೇಕ ನಡೆಯಲಿದೆ. ಇದರೊಂದಿಗೆ ವಜ್ರಖಚಿತ ರಾಜಮುಡಿ ಕಿರೀಟದ ಅಲಂಕಾರ ಸಮಾಪ್ತಿಯಾಗಲಿದೆ. ರಾತ್ರಿ ಸಮರಭೂಪಾಲವಾಹನ, ವೈರಮುಡಿ ಬ್ರಹ್ಮೋತ್ಸವದ ಯಶಸ್ಸಿನಲ್ಲಿ ಪ್ರಮುಖ ಪಾತ್ರವಹಿಸಿದ ನಾಲ್ಕೂ ಸ್ಥಾನಾಚಾರ್ಯರಿಗೆ ಮಾಲೆಮರ್ಯಾದೆ ನೆರವೇರಲಿದೆ.

ಮೇಲುಕೋಟೆ : ದಕ್ಷಿಣಭಾರತದ ಎರಡನೇ ಅತಿದೊಡ್ಡ ಹಾಗೂ ಆಕರ್ಷಕವಾದ ಮೇಲುಕೋಟೆ ಕಲ್ಯಾಣಿಯಲ್ಲಿ ಝಗಮಗಿಸುವ ದೀಪಾಲಂಕಾರದ ನಡುವೆ ಶ್ರೀ ಚೆಲುವನಾರಾಯಣಸ್ವಾಮಿ "ವೈರಮುಡಿ ತೆಪ್ಪೋತ್ಸವ " ಬುಧವಾರ ರಾತ್ರಿ ಅದ್ದೂರಿಯಾಗಿ ನೆರವೇರಿತು.

ಮೇಲುಕೋಟೆಯ ವೈರಮುಡಿ ಜಾತ್ರಾ ಮಹೋತ್ಸವದ ತೆಪ್ಪೋತ್ಸವ ಭಾರತದ ಶ್ರೀವೈಷ್ಣವ ದೇವಾಲಯಗಳಲ್ಲೇ ಅತ್ಯಾಕರ್ಷಕ ಆಚರಣೆ ಎಂಬ ಖ್ಯಾತಿ ಪಡೆದಿದ್ದು ಯೋಗನರಸಿಂಹಸ್ವಾಮಿ ಬೆಟ್ಟದ ತಳಭಾಗದ ಕಲ್ಯಾಣಿ, ಸಾಲುಮಂಟಪಗಳು ಭುವನೇಶ್ವರಿ ಮಂಟಪಗಳಿಗೆ ವಿಶೇಷ ದೀಪಾಲಂಕಾರ ಮಾಡಿದ್ದು ಚೆಲುವನ ತೆಪ್ಪೋತ್ಸವದ ವೈಭವವನ್ನು ನೂರ್ಮಡಿಮಾಡಿತ್ತು.

ಪರಾಭವನಾಮ ಸಂವತ್ಸರದ ವೈರಮುಡಿ ಬ್ರಹ್ಮೋತ್ಸವದ 8ನೇ ತಿರುನಾಳ್ ಅಂಗವಾಗಿ ವಜ್ರಖಚಿತ ರಾಜಮುಡಿ ಕಿರೀಟ ಧಾರಣೆಯೊಂದಿಗೆ ಪಂಚಕಲ್ಯಾಣಿಯಲ್ಲಿ ತೆಪ್ಪೋತ್ಸವ ನೆರವೇರಿತು. ಕಲ್ಯಾಣಿಯ ನಾಲ್ಕೂ ಕಡೆಯ ಸೋಪಾನಗಳ ಮೇಲೆ ಭಕ್ತಾದಿಗಳು ಸಹಸ್ರಾರು ಸಂಖ್ಯೆಯಲ್ಲಿ ಕಿಕ್ಕಿರಿದು ತುಂಬಿದ್ದರು. ಕಲ್ಯಾಣಿಯ ಸಾಲುಮಂಟಪಗಳು, ಬಳೆಮಂಟಪಗಳು, ಭುವನೇಶ್ವರಿ ಮಂಟಪ, ಧಾರಾಮಂಟಪ ಸೇರಿದಂತೆ ಇಡೀ ಕಲ್ಯಾಣಿ ಸಮುಚ್ಚಯಕ್ಕೆ ಅತ್ಯಾಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ರಾತ್ರಿ 7 ಗಂಟೆಗೆ ಕಲ್ಯಾಣಿಯಲ್ಲಿ ಮುಹೂರ್ತ ಪಠಣೆಯ ನಂತರ ವಿದ್ಯುತ್ ದೀಪಾಲಂಕಾರ ಮತ್ತು ಪುಷ್ಪಾಲಂಕಾರದಿಂದ ಕಂಗೊಳಿಸುತ್ತಿದ್ದ ತೆಪ್ಪಮಂಟಪದಲ್ಲಿ ಸ್ವಾಮಿಯನ್ನು ಪ್ರತಿಷ್ಠಾಪಿಸಿ ವೈಭವದ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು. ತೆಪ್ಪೋತ್ಸವಕ್ಕೂ ಮುನ್ನ ಮತ್ತು ನಂತರ ವಿಶೇಷ ನಾದಸ್ವರ ವಾದನದೊಂದಿಗೆ ಚೆಲುವ ನಾರಾಯಣಸ್ವಾಮಿಗೆ ವೈಭವದ ಉತ್ಸವ ನೆರವೇರಿಸಲಾಯಿತು. ತೆಪ್ಪೋತ್ಸವದ ಆರಂಭದ ವೇಳೆ ಸ್ಕೈಶಾಟ್ಸ್ ಸಿಡಿಸಿದಾಗ ಭಕ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. 2ವರ್ಷದ ನಂತರ ಮಾಡಿದ ಲೇಸರ್ ಷೋ ಸಹ ಗಮನ ಸೆಳೆಯಿತು

ಅಪರ ಜಿಲ್ಲಾಧಿಕಾರಿ ಶಿವಾನಂದಮೂರ್ತಿ ಆಸಕ್ತಿಯ ಪರಿಣಾಮ ವಿಶೇಷವಾಗಿ ನಡೆದ ವೈರಮುಡಿ ತೆಪ್ಪೋತ್ಸವದ ಮೂರು ಸುತ್ತಿನ ವೇಳೆ ಮ್ಯಾಂಡಲಿನ್ ಮಾಂತ್ರಿಕ ಯು.ಶ್ರೀನಿವಾಸ್ ಶಿಷ್ಯ ವೆಂಕಟೇಶ್‌ರಿಂದ ಮ್ಯಾಂಡಲಿನ್ ವಾದನ, ಹಿರಿಯ ಐ.ಎ.ಎಸ್ ಅಧಿಕಾರಿ ಯಶವಂತರ ಸಹೋದರನ ಪುತ್ರಿ ಭೂಮಿಕಾ ಮಂಜಪ್ಪ ತಂಡದಿಂದ ಭರತನಾಟ್ಯ ಪ್ರದರ್ಶನ, ಎಸ್.ಎನ್.ಐ ಸಾಂಸ್ಕೃತಿಕ ವೇದಿಕೆಯ ನಾದೋಪಾಸನ ಸೇವೆಯಡಿ ಆಕಾಶವಾಣಿ ಎಗ್ರೇಡ್ ಕಲಾವಿದ ವಿದ್ವಾನ್ ಶ್ರೀಧರ ತಂಡದ ವಿಶೇಷ ನಾದಸ್ವರ ವಾದನ ತೆಪ್ಪೋತ್ಸವದ ವೈಭವದ ಕ್ಷಣಗಳಿಗೆ ನಾದ ಮಾಧುರ್ಯ ತುಂಬಿತು.

ಡಾ.ಶಿವಕುಮಾರ ಸ್ವಾಮೀಜಿಜನ್ಮದಿನ ಆಚರಣೆ



ಕೆ.ಆರ್.ಪೇಟೆ: ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ತಾಲೂಕು ವೀರಶೈವ ಲಿಂಗಾಯಿತ ಮಹಾಸಭಾ ವತಿಯಿಂದ ತ್ರಿವಿಧ ದಾಸೋಹಿ ಲಿಂಗೈಕ್ಯ ಡಾ. ಶಿವಕುಮಾರ ಮಹಾಸ್ವಾಮೀಜಿ ಅವರ 119ನೇ ಜನ್ಮ ದಿನವನ್ನು ಅನ್ನ ದಾಸೋಹ ನಡೆಸುವ ಮೂಲಕ ಆಚರಿಸಲಾಯಿತು.

ತಿಂಡಿಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀಗಳಾದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿ ಅವರು ಶಿವಕುಮಾರ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಲ್ಲಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಸುಜೇಂದ್ರಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ತಾಲೂಕು ವೀರಶೈವ ಮಹಾಸಭಾ ಮುಖಂಡರಾದ ಬ್ಯಾಂಕ್ ಪರಮೇಶ್ವರ್, ತೋಟಪ್ಪಶೆಟ್ಟಿ, ಉದ್ಯಮಿ ಕೆ.ಎಸ್.ರಾಜೇಶ್, ಮೋದೂರು ಮಂಜುನಾಥ್, ವಕೀಲರಾದ ಪುರ ಮಂಜುನಾಥ್, ಕೆ.ಎನ್.ನಾಗರಾಜು, ಆರ್‌ಟಿಓ ಮಲ್ಲಿಕಾರ್ಜುನ್ ಆಪ್ತ ಸಹಾಯಕ ಗಂಜಿಗೆರೆ ಮಹೇಶ್, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಉಪಾಧ್ಯಕ್ಷ ಯಗಚಗುಪ್ಪೆ ಶಿವಪ್ಪ, ಜಿಲ್ಲಾ ನಿರ್ದೇಶಕ ನಾಡಬೋಗನಹಳ್ಳಿ ದಿನೇಶ್, ತಾಲೂಕು ಮಹಾಸಭಾ ನಿರ್ದೇಶಕರಾದ ಮಂಚಿಬೀಡು ಬಸವಲಿಂಗಪ್ಪ, ಡಿ.ಸಿ.ಕುಮಾರ್, ವೈ.ಸಿ. ಕುಮಾರ್, ಮೆಳ್ಳಹಳ್ಳಿ ರಾಜಶೇಖರ್ ಇದ್ದರು.

ಕುರುಬರ ಸಂಘದಲ್ಲಿ ಭ್ರಷ್ಟಾಚಾರ ಸಾಬೀತು ಪಡಿಸಿದರೆ ನೇಣಿಗೇರುತ್ತೇನೆ

ಮಂಡ್ಯ, ಏ.1– ಜಿಲ್ಲೆಯ ಕುರುಬರ ಸಂಘದ ಅಭಿವೃದ್ದಿಯನ್ನು ಸಹಿಸದ ಆಡಳಿತ ಮಂಡಳಿಯ ಮಾಜಿ ನಿರ್ದೇಶಕ ದೊಡ್ಡಯ್ಯ ಮತ್ತು ಆತನ ಪುತ್ರನ ಕುಮ್ಮಕ್ಕಿನಿಂದ ಕೆಲವು ಕೆಲವು ಅತೃಪ್ತ ಮನಸ್ಥಿತಿಯುಳ್ಳ ವ್ಯಕ್ತಿಗಳು ಸಂಘದ ಘನತೆಗೆ ಚ್ಯುತಿ ತರುತ್ತಿದ್ದು ಸಂಘದ ಆಡಳಿತದಲ್ಲಿ ಭ್ರಷ್ಟಾಚಾರವೆಸಗಿರುವುದನ್ನು ರುಜುವಾತು ಪಡಿಸಿ ಪ್ರಮಾಣ ಮಾಡಿದರೆ ಬಹಿರಂಗ ನೇಣಿಗೆ ಶರಣಾಗುತ್ತೇನೆಂದು ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಶಶಿಧರ್ ತಿಳಿಸಿದರು.

ನಗರದ ಕುರುಬರ ಸಂಘದ ಆವರಣದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ಆಡಳಿತ ಮಂಡಳಿಯ ಸಭೆಯಲ್ಲಿ ಭಾಗಿಯಾಗಿದ್ದ ಹಾರೋಹಳ್ಳಿ ಕೃಷ್ಣ, ಸಾತನೂರು ಮಹೇಶ, ಅಣಸಾಲೆ ಕೃಷ್ಣ ಎಂಬ ನಿರ್ದೇಶಕರು ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿರುವುದು ಸತ್ಯಾಂಶಕ್ಕೆ ದೂರವಾಗಿದ್ದು, ಆರೋಪ ಸಾಬೀತುಪಡಿಸಲು ಬೀರೇಶ್ವರ ಸ್ವಾಮಿ ದೇವರ ಮುಂದೆ ಪ್ರಮಾಣಕ್ಕೆ ಬರಲಿ ಎಂದು ಸವಾಲು ಹಾಕಿದರು.

ಮಂಡ್ಯ ನಗರದ ಉದಯಗಿರಿ ನಿವಾಸಿ ರಮೇಶ್ ಹಾಗೂ ಸಾತನೂರು ಶೈಲೇಶ್



ಎಂಬುವವರು ಸಂಘದ ಸಮುದಾಯ ಭವನದಲ್ಲಿ ಅವರ ಕುಟುಂಬದ ಮದುವೆ ಕಾರ್ಯ ಮಾಡಿಕೊಂಡು ತಲಾ 45 ಸಾವಿರ ಬಾಡಿಗೆ ಪಾವತಿಸದೇ ವಂಚಿಸಿದ್ದಾರೆ. ಇಂತಹವರು ಪ್ರತಿಭಟನೆಗೆ ಬರಲು ನೈತಿಕತೆ ಉಳಿಸಿಕೊಂಡಿದ್ದಾರೆಯೇ ಎಂದು ಪ್ರಶ್ನಿಸಿದರು.

ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಎಂ.ಎಲ್. ಸುರೇಶ್ ಅವರ ಅಧಿಕಾರಾವಧಿಯಲ್ಲಿ ಹಲವು ಅಭಿವೃದ್ದಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. 4 ಕೋಟಿ ರೂ. ಅನುದಾನ ತಂದು ನೂತನ ವಿದ್ಯಾರ್ಥಿನಿಲಯ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ, ಸಮುದಾಯ ಭವನದ ಪೂರ್ವದ್ವಾರದಲ್ಲಿ ನೆನೆಗುದಿಗೆ ಬಿದ್ದಿದ್ದ ಗೇಟ್ ಅಳವಡಿಕೆ, ಅಪೂರ್ಣಗೊಂಡಿದ್ದ ವಿನಾಯಕ ದೇವಾಲಯ, ಅತಿಥಿ ಗೃಹ ನಿರ್ಮಾಣ ಮಾಡಲಾಗಿದೆ. ಇದನ್ನು ಸಹಿಸದ ಕೊಳಕು ಮನಸ್ಥಿತಿಯ ಕೆಲವೇ ವ್ಯಕ್ತಿಗಳು ಸಮಾಜ, ಜಿಲ್ಲೆ ಹಾಗೂ ಮುಖ್ಯಮಂತ್ರಿಗಳಿಗೆ ಅಗೌರವ ತರುವ ಸಲುವಾಗಿ ಕಪ್ಪು ಮಸಿ ಎರಚಿ ಸಮುದಾಯದ ಗೌರವ ಕಳೆದಿದ್ದಾರೆ. ಇದು ಖಂಡನಾರ್ಹ ಎಂದರು.

ಜಿಲ್ಲಾ ಸಂಘದ ಮಾಜಿ ಅಧ್ಯಕ್ಷ ನಾಗರಾಜು ಅವರಿಗೂ ದೊಡ್ಡಯ್ಯ ಮತ್ತು ಅವರ ಕೆಲವು ಅನುಯಾಯಿಗಳು ಕಿರುಕುಳ ನೀಡಿ ಕನಕ ಸಮುದಾಯ ಭವನ ನಿರ್ಮಾಣಕ್ಕೆ ಶ್ರಮಿಸಿದ ನಾಗರಾಜು ಕಣ್ಣೀರು ಹಾಕುವಂತೆ ಹಿಂಸಿಸಿದ್ದಾರೆ. ಇಂತಹವರಿಂದ ನೀತಿ ಪಾಠ ಕೇಳುವ ಅಗತ್ಯವಿಲ್ಲವೆಂದರು.

ಮಂಡ್ಯ ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಎಂ.ವೀರಪ್ಪ, ನಗರಸಭೆ ಮಾಜಿ ಸದಸ್ಯ ಮಹೇಶ್, ಕೇಂದ್ರ ಸಮಿತಿ ಸದಸ್ಯೆ ಸಾವಿತ್ರಮ್ಮ ಮಾತನಾಡಿದರು. ಗೋಷ್ಠಿಯಲ್ಲಿ ಸಾತನೂರು ರಾಜು, ನರಸಪ್ಪ ಹೆಗಡೆ, ಮೀನಾಕ್ಷಿ, ಹುಚ್ಚಪ್ಪ ಪಾರ್ಥ ಉಪಸ್ಥಿತರಿದ್ದರು.

ಕಿಕ್ಕೇರಿ ಕೃಷ್ಣಮೂರ್ತಿಗೆ ಪರಿಸರ ಮಿತ್ರ ಪ್ರಶಸ್ತಿ



ಕರ್ನಾಟಕ ಪರಿಸರ ರಕ್ಷಣಾ ಪ್ರತಿಷ್ಠಾನ ವತಿಯಿಂದ ಪರಿಸರ ಪ್ರೇಮಿ, ಗಾಯಕ ಡಾ.ಕಿಕ್ಕೇರಿ ಕೃಷ್ಣಮೂರ್ತಿಗೆ 'ಪರಿಸರ ಮಿತ್ರ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಿಕ್ಕೇರಿ: ಹಸಿರು ಉಸಿರಾದರೆ ಬದುಕು ನಂದನವನವಾಗಲಿದೆ ಎಂಬುದನ್ನು ಅರಿತು ಬೆಳೆಯುವ ಭವಿಷ್ಯದ ಮಕ್ಕಳಿಗೆ ಪರಿಸರ ಪಾಠ ಕಲಿಸಿ ಎಂದು ಪರಿಸರ ಪ್ರೇಮಿ ಸುಗಮ ಸಂಗೀತ ಗಾಯಕ ಡಾ. ಕಿಕ್ಕೇರಿ ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಕೇಂಬ್ರಿಡ್ಜ್ ಶಾಲಾವರಣದಲ್ಲಿ ಬೆಂಗಳೂರಿನ ಕರ್ನಾಟಕ ಪರಿಸರ ರಕ್ಷಣಾ ಪ್ರತಿಷ್ಠಾನ ಏರ್ಪಡಿಸಿದ್ದ ಸಮಾರಂಭದಲ್ಲಿ 'ಪರಿಸರ ಮಿತ್ರ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಸಂಗೀತದ ಉಗಮವೇ ಪ್ರಕೃತಿ. ಜುಳು ಜುಳು ಜಲದ ನಾದ, ಕೋಗಿಲೆ ಕೂಗು ಎಲ್ಲವೂ ಸಂಗೀತದ ಝೇಂಕಾರದ ಸಂಗೀತ ನಾದವಾಗಿದೆ ಎಂದರು.

ನಮ್ಮ ಪೂರ್ವಿಕರು ಪ್ರಕೃತಿಯನ್ನು ಪ್ರೀತಿಸಿ ಶತಾಯುಷಿಗಳಾಗಿ, ಆರೋಗ್ಯವಂತರಾಗಿ ಬದುಕಿ ಬಾಳಿದವರು. ಇವರ ಆರೋಗ್ಯದ ಗುಟ್ಟು ವನೌಷಧಿ ಸಸ್ಯಗಳಲ್ಲಿ ಅಡಗಿತ್ತು. ಮರಗಿಡ ಬರಿದಾದರೆ ಬದುಕು ಸರ್ವನಾಶವಾಗಲಿದೆ. ಮಕ್ಕಳಿಗೆ ಪರಿಸರದ ಅಕ್ಷರ ಜ್ಞಾನ ಕಲಿಸಿ. ಬೇಸಿಗೆ ಬಂದಿದೆ ಪ್ರಾಣಿ ಪಕ್ಷಿಗಳು ನೊಣ, ನೀರು ಇಲ್ಲದೆ ಸಾಯುತ್ತಿವೆ. ಇನ್ನಾದರೂ ಹಣ್ಣು ಹಂಪಲು ನೀಡುವ, ಮಳೆ, ಭೂಮಿ ಫಲವತ್ತತೆ ಹಿಡಿದುಕೊಳ್ಳುವ ಮರಗಿಡ ಬೆಳೆಸಿ. ಅಳಿದುಳಿದ ಕಾಡು ಬರಿದು ಮಾಡದೆ ಉಳಿಸಿ ಎಂದು ವಿನಂತಿಸಿದರು.

ಮುಖ್ಯಶಿಕ್ಷಕಿ ಎಚ್.ಎಂ. ದೀಪಾ, ಮೇಲ್ವಿಚಾರಕಿ ಅನುಪಮಾ, ವೆಂಕಟೇಶ್, ಗುರುಮೂರ್ತಿ, ಪ್ರಶಾಂತ್, ಶೇಕ್ಷವಲ್ಲಿ, ಕೋಮಲಾ, ಶುಭಾ, ರಕ್ಷಿತಾ ಇದ್ದರು.

ಒಂದನೇ ಪುಟದಿಂದ

ತನಿಖೆ ಪೂರ್ವಾನುಮತಿಗೆ ಹೈಕೋರ್ಟ್ ಅಸ್ತು

ಹಿತದೃಷ್ಟಿಯಿಂದ ತನಿಖೆಗೆ ಪರಮಾದೇಶ ನೀಡಬೇಕು ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದೆ.

ಭ್ರಷ್ಟಾಚಾರದಂತಹ ಗಂಭೀರ ಆರೋಪಗಳು ಕೇಳಿ ಬಂದಾಗ ಅವುಗಳನ್ನು ಆರಂಭದಲ್ಲೇ ನಂದಿಸುವುದು ಸಾಧುವಲ್ಲ. ನಿಜಾಂಶವನ್ನು ತನಿಖಾ ಪ್ರಕ್ರಿಯೆಯ ಮೂಲಕ ಬಯಲು ಮಾಡಲು ಅವಕಾಶ ನೀಡಬೇಕು. ಆಗ ಮಾತ್ರ ಜನರಿಗೆ ಸತ್ಯ ಅರ್ಥವಾಗುತ್ತದೆ. ಹಾಲಿ ಪ್ರಕರಣದ ಆರೋಪಗಳು ಸಾರ್ವಜನಿಕ ಪ್ರಾಮಾಣಿಕತೆಯ ಹೃದಯವನ್ನೇ ಜಖಂಗೊಳಿಸುವಂತಿವೆ. ರೋಹಿಣಿ ಸಿಂಧೂರಿ ಕೇವಲ ಆಡಳಿತಾತ್ಮಕ ಲೋಪ ಎಸಗಿದ್ದಾರೆ ಎಂಬುದಲ್ಲ. ಇವರ ನಿರ್ಧಾರದಿಂದ ಸಾರ್ವಜನಿಕ ಬೊಕ್ಕಸಕ್ಕೆ ಗಂಭೀರವಾದ ನಷ್ಟ ಉಂಟಾಗಿದೆ ಗಮನಾರ್ಹ ಎಂದು ನ್ಯಾಯಪೀಠ ವಿವರಿಸಿದೆ.

ಆರೋಪದ ತನಿಖೆಗೆ ಪೂರ್ವಾನುಮತಿ ನೀಡಲು ನಿರಾಕರಿಸಿರುವ ನಿರ್ಧಾರ ವಸ್ತುನಿಷ್ಠ ಮತ್ತು ತಾರ್ಕಿಕ ಅಂಶಗಳಿಂದ ಕೂಡಿಲ್ಲ. ಇಲಾಖೆಯು, ಆರೋಪಗಳ ಗಂಭೀರತೆಯನ್ನು ಗಮನವಿಟ್ಟು ಪರಿಶೀಲಿಸಿ ನ್ಯಾಯೋಚಿತ ನಿರ್ಧಾರ ಕೈಗೊಳ್ಳಲು ವಿಫಲವಾಗಿರುವುದು ಎದ್ದು ಕಾಣುತ್ತದೆ. ಅಷ್ಟೇ ಅಲ್ಲ, ಇದು ಅಧಿಕಾರಿ ವರ್ಗದ ಯಾಂತ್ರಿಕ ಕಸರತ್ತಿನಂತೆ ಕಾಟಾಚಾರದ ಪ್ರತಿಬಿಂಬವಾಗಿದೆ ಎಂದು ಡಿಪಿಎಆರ್ ನಿರ್ಧಾರಕ್ಕೆ ಕಿಡಿ ಕಾರಿದೆ.

ಇಲಾಖಾ ವಿಚಾರಣೆಗಳು ಮತ್ತು ಕ್ರಿಮಿನಲ್ ವಿಚಾರಣೆಗಳು ವಿಭಿನ್ನ ತಳಹದಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ಪರಿಗಣಿಸಲಾಗುವ ಪುರಾವೆ ಮತ್ತು ಉದ್ದೇಶದ ಮಾನದಂಡಗಳನ್ನು ಪ್ರತ್ಯೇಕ ಕಾನೂನುಗಳಿಂದ ನಿಯಂತ್ರಿಸಲಾಗುತ್ತದೆ. ಇಲಾಖಾ ವಿಚಾರಣೆಯಲ್ಲಿ ಅಧಿಕಾರಿಯನ್ನು ದೋಷಮುಕ್ತಗೊಳಿಸಿದ ಮಾತ್ರಕ್ಕೆ ಕ್ರಿಮಿನಲ್ ತನಿಖೆ ನಡೆಯುವುದನ್ನು ತಡೆಯಲು ಸಾಧ್ಯವಿಲ್ಲ ಎಂಬುದು ಈಗಾಗಲೇ ನ್ಯಾಯಾಂಗ ಪರಾಮರ್ಶೆಯಲ್ಲಿ ಇತ್ಯರ್ಥವಾಗಿರುವ ಅಂಶ ಎಂಬುದನ್ನು ಎತ್ತಿಹಿಡಿದಿದೆ. ಅರ್ಜಿದಾರರ ಪರ ಬಿಪಿನ್ ಹೆಗಡೆ ವಾದ ಮಂಡಿಸಿದ್ದರು.

ಬೊಕ್ಕಸಕ್ಕೆ 7.65 ಕೋಟಿ ನಷ್ಟ ಆರೋಪ: ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಿಸಬೇಕು ಮತ್ತು ಪ್ಲಾಸ್ಟಿಕ್ ಬಳಕೆಗೆ ಇತಿಶ್ರೀ ಹಾಡಿ ಬಟ್ಟೆಯ ಕೈಚೀಲಗಳನ್ನು ಬಳಸಬೇಕು ಎಂದು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ಅವರು ಜಿಲ್ಲೆಯ ನಗರ, ಗ್ರಾಮಾಂತರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶಿಸಿದ್ದರು.

ಈ ನಿಟ್ಟಿನಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಚೀಲಕ್ಕೆ 13 ಇದ್ದರೆ ಅವುಗಳನ್ನು ಪ್ರತಿ ಚೀಲಕ್ಕೆ 52ರಷ್ಟು ದರ ನೀಡಿ ಖರೀದಿಸಲಾಗಿದೆ. ಈ ಮೂಲಕ ಸರ್ಕಾರದ ಬೊಕ್ಕಸಕ್ಕೆ 7,65,15,816 ಕೋಟಿ ನಷ್ಟ ಉಂಟು ಮಾಡಲಾಗಿದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಪ್ರಯೋಜನ ನೀಡುವ ಉದ್ದೇಶದಿಂದ ಕಲ್ಯಾಣ ಯೋಜನೆಗಳಿಗೆ ಮೀಸಲಿಟ್ಟ ಹಣವನ್ನು ಈ ಕೈಚೀಲಗಳ ಖರೀದಿಗೆ ಬಳಸಲಾಗಿದೆ. ಗ್ರಾಮ ಸ್ವರಾಜ್ಯದ ಎಲ್ಲ ಕನಸುಗಳನ್ನು ಗಾಳಿಗೆ ತೂರಿ ಭ್ರಷ್ಟಾಚಾರ ಎಸಗಲಾಗಿದೆ ಎಂದು ಅರ್ಜಿದಾರರು ಆರೋಪಿಸಿದ್ದರು.

ಲಕ್ಷ ಮನೆಗಳಿಗೆ ನಾಲ್ಕೈದು ವರ್ಷದಲ್ಲಿ ಗ್ಯಾಸ್ ಸಂಪರ್ಕ

ಹಿನ್ನೆಲೆಯಲ್ಲಿ ಮನೆ ಮನೆಗೆ ಗ್ಯಾಸ್ ಸಂಪರ್ಕ ಕಲ್ಪಿಸುವುದು ಸ್ವಲ್ಪ ವಿಳಂಬವಾಗುತ್ತಿದೆ ಎಂದು ತಿಳಿಸಿದರು.

ಪೈಪ್ ಮೂಲಕ ಮನೆ ಮನೆಗೆ ಗ್ಯಾಸ್ ಸಂಪರ್ಕ ನೀಡುತ್ತಿರುವ ಈ ಯೋಜನೆಯಲ್ಲಿ ಹಲವು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಯಾವುದೇ ರೀತಿಯ ಪ್ರಕೃತಿ ವಿಕೋಪಗಳು ಸಂಭವಿಸಿದಾಗಲೂ ಗ್ಯಾಸ್ ಪೈಪ್ ಲೈನ್ ಗೆ ಧಕ್ಕೆ ಆಗದಂತೆ ವಿನ್ಯಾಸಗೊಳಿಸಲಾಗಿದೆ ಎಂದರು.

ಮಧ್ಯಪ್ರಾಚ್ಯ ಯುದ್ಧದಿಂದ ಗ್ಯಾಸ್ ಪೂರೈಕೆಯಲ್ಲಿ ನಮಗೆ ಯಾವುದೇ ತೊಂದರೆ ಆಗಿಲ್ಲ. ಮೈಸೂರು ಸೇರಿದಂತೆ ಕರ್ನಾಟಕದ 14 ಸ್ಥಳಗಳಲ್ಲಿ ಗ್ಯಾಸ್ ಪೂರೈಸುತ್ತಿದ್ದು, ಅಗತ್ಯವಿರುವಷ್ಟು ಅನಿಲ ನಮ್ಮಲ್ಲಿ ಲಭ್ಯವಿರುವ ಹಿನ್ನೆಲೆಯಲ್ಲಿ ಯುದ್ಧದ ಪರಿಣಾಮ ಉಂಟಾಗಿಲ್ಲ ಎಂದು ನಿತೀನ್ ಸ್ಪಷ್ಟಪಡಿಸಿದರು. ಥಿಂಕ್ ಗ್ಯಾಸ್‌ನ ಹಿರಿಯ ಉಪಾಧ್ಯಕ್ಷ ಬ್ರಿಜೇಶ್ ಸಿಂಗ್, ವಿಭಾಗೀಯ ಮುಖ್ಯಸ್ಥ ಸಂಜೀವ್ ಸೋಮನ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮತ್ತೊಂದು ಹೆಸರು ಸಿದ್ದರಾಮಯ್ಯ

ಆಡಳಿತ ಪಕ್ಷವನ್ನು ಜನರು ಕ್ಷಮಿಸಬಾರದು. ಕಾಂಗ್ರೆಸ್‌ನ ಇಚ್ಛೆಯಂತೆ ಸರ್ಕಾರ ನಡೆಯುತ್ತಿದೆ. ಅಭಿವೃದ್ಧಿ ಕಾರ್ಯಗಳನ್ನು ಹಿಂದಕ್ಕೆ ಹಾಕುತ್ತಿದೆ ಮತ್ತು ಜನರ ಹಿತಾಸಕ್ತಿಗಳನ್ನು ಪರಿಗಣಿಸುತ್ತಿಲ್ಲ ಎಂದು ಅವರು ಹೇಳಿದರು.

ಪ್ರಸ್ತುತ ಸರ್ಕಾರ ಅತ್ಯಂತ ಭ್ರಷ್ಟ ಸರ್ಕಾರ ಎಂದು ಹೇಳಿದ ಯಡಿಯೂರಪ್ಪ, ದಾವಣಗೆರೆ ಮತ್ತು ಬಾಗಲಕೋಟೆ ಉಪಚುನಾವಣೆಯಲ್ಲಿ ಜನರು ಪಕ್ಷಕ್ಕೆ ಪಾಠ ಕಲಿಸುತ್ತಾರೆ. ಎಂದು ಹೇಳಿದರು. ಕಾಂಗ್ರೆಸ್ ಸರ್ಕಾರ ತನ್ನ ಖಾತರಿ ಯೋಜನೆಗಳ ಹೆಸರಿನಲ್ಲಿ ರಾಜ್ಯವನ್ನು ದಿವಾಳಿ ಮಾಡಿದೆ. ರಸ್ತೆಗಳು ದಯನೀಯ ಸ್ಥಿತಿಯಲ್ಲಿವೆ. ಒಂದು ಕಿಲೋಮೀಟರ್ ರಸ್ತೆ ಕೂಡ ನಿರ್ಮಿಸಲಾಗುತ್ತಿಲ್ಲ. ರೈತರಿಗೆ ವಿದ್ಯುತ್ ನೀಡಲಾಗುತ್ತಿಲ್ಲ ಎಂದರು. ನಾನು ದಾವಣಗೆರೆಯಲ್ಲಿ ನಮ್ಮ ಅಭ್ಯರ್ಥಿ ಶ್ರೀನಿವಾಸ್ ಪರ ಪ್ರಚಾರ ಮಾಡುತ್ತೇನೆ. ಏಪ್ರಿಲ್ 5 ಮತ್ತು 6 ರಂದು, ಬಾಗಲಕೋಟೆಯಲ್ಲಿ ನಮ್ಮ ಅಭ್ಯರ್ಥಿ ಚರಂತಿಮಠ ಪರ ಪ್ರಚಾರ ಮಾಡುತ್ತೇನೆ. ನಮ್ಮ ಅಭ್ಯರ್ಥಿಗಳು ಎರಡೂ ಕ್ಷೇತ್ರಗಳಲ್ಲಿ ಭಾರೀ ಅಂತರದಿಂದ ಗೆಲ್ಲುತ್ತಾರೆ ಎಂದು ನನಗೆ ನೂರಕ್ಕೆ ನೂರು ವಿಶ್ವಾಸವಿದೆ ಎಂದು ಯಡಿಯೂರಪ್ಪ ಹೇಳಿದರು.

ಕರ್ನಾಟಕದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನರ ಕಲ್ಯಾಣವನ್ನು ಮರೆತು ರಾಜ್ಯದಲ್ಲಿ ತುಘಲಕ್ ದರ್ಬಾರ್ ಹೋಲುವ ಆಡಳಿತ ನಡೆಸುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರಕ್ಕೆ ಬಹುಮತವಿದೆ. ಅವರು ಉಪ ಚುನಾವಣೆಯಲ್ಲಿ ಗೆದ್ದರೆ, ಅದು ಅವರಿಗೆ ಅಧಿಕಾರದ ಅಮಲಿನಲ್ಲಿ ಹೆಚ್ಚಿನ ಭ್ರಷ್ಟಾಚಾರದಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡಿದಂತಾಗುತ್ತದೆ. ಆದ್ದರಿಂದ ಎರಡೂ ಕ್ಷೇತ್ರಗಳ ಮತದಾರರು ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್‌ಗೆ ಪಾಠ ಕಲಿಸಬೇಕೆಂದು ನಾನು ಕೈಮುಗಿದು ಮನವಿ ಮಾಡುತ್ತೇನೆ ಎಂದು ಅವರು ಹೇಳಿದರು.

ನೀವೂ ಸಕ್ರಿಯವಾಗಿ ಪಾಲ್ಗೊಳ್ಳಿ

ಇದರಲ್ಲಿ 4,517 ಗಣತಿದಾರರು, 867 ಮೇಲ್ವಿಚಾರಕರು ಸೇರಿದಂತೆ ಒಟ್ಟು 5,384 ಸಿಬ್ಬಂದಿ ಭಾಗಿಯಾಗಲಿದ್ದಾರೆ.

ಅದೇ ರೀತಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1,832 ಬ್ಲಾಕ್‌ಗಳನ್ನು ಮಾಡಿದ್ದು, 2,023 ಗಣತಿದಾರರು, 341 ಮೇಲ್ವಿಚಾರಕರು ಸೇರಿದಂತೆ ಒಟ್ಟು 2,364 ಸಿಬ್ಬಂದಿ ಗಣತಿ ಕಾರ್ಯ ನಿರ್ವಹಿಸಲಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ 6,013 ಬ್ಲಾಕ್‌ಗಳಲ್ಲಿ 6,540 ಗಣತಿದಾರರು, 1,208 ಮೇಲ್ವಿಚಾರಕರು ಸೇರಿದಂತೆ 7,748 ಸಿಬ್ಬಂದಿ ಗಣತಿಯಲ್ಲಿ ಕೆಲಸ ಮಾಡಲಿದ್ದಾರೆ. ಪ್ರತಿ ಗಣತಿ ಬ್ಲಾಕಿಗೆ ಒಬ್ಬ ಗಣತಿದಾರರು ಹಾಗೂ ಪ್ರತಿ 6 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ. ಜೊತೆಗೆ ಹೆಚ್ಚುವರಿಯಾಗಿ ಶೇ.10ರಷ್ಟು (ಮೀಸಲು) ಗಣತಿದಾರರನ್ನು ಮತ್ತು ಮೇಲ್ವಿಚಾರಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಎಲ್ಲಾ ಸೇರಿದಂತೆ 7,748 ಸಿಬ್ಬಂದಿ ಗಣತಿ ಕಾರ್ಯ ನಿರ್ವಹಿಸಲಿದ್ದಾರೆ ಎಂದರು. ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ರಾಜ್ಯ ಮಟ್ಟದ ತರಬೇತಿಯನ್ನು ಜಿಲ್ಲೆಯ 7 ಮಂದಿ ಮಾಸ್ಟರ್ ತರಬೇತುದಾರರಿಗೆ ನೀಡಲಾಗಿದೆ. ಜಿಲ್ಲಾ ಮಟ್ಟದ ತರಬೇತಿಯನ್ನು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ 110 ಕ್ಷೇತ್ರ ತರಬೇತುದಾರರಿಗೆ ನೀಡಲಾಗಿದೆ ನೇಮಕಗೊಂಡಿರುವ ಗಣತಿದಾರರು ಮತ್ತು ಮೇಲ್ವಿಚಾರಕರು ತಾಲೂಕು ಮಟ್ಟದಲ್ಲಿ ಕ್ಷೇತ್ರ ತರಬೇತುದಾರರಿಂದ ಏ.11 ರವರೆಗೆ (ಮಾ.29 ರಿಂದ) ತರಬೇತಿ ಆಯೋಜಿಸಲಾಗಿದೆ ಎಂದರು. ಎಡಿಸಿ ಡಾ.ಪಿ.ಶಿವರಾಜು, ಜಿ.ಎಸ್.ಸೋಮಶೇಖರ್ ಇದ್ದರು.

ಕಟ್ಟುವುದಕ್ಕೆ ಇನ್ನು ಬ್ರೇಕ್

ಪೊಲೀಸರು ಆನ್‌ಲೈನ್‌ನಲ್ಲಿ ಮಾಹಿತಿಯನ್ನು ಪರಿಶೀಲಿಸಿ, ಅಲ್ಲಿ ಸಿಗದೆ ಹೋದರೆ, ಸರಿ ಸುಮಾರು 10,000 ರೂಪಾಯಿಗಳವರೆಗೆ ಫೈನ್ ಹಾಕುತ್ತಿದ್ದರು.

ಡಿಜಿಟಲ್ ವ್ಯವಸ್ಥೆಯಲ್ಲಿ ಪಾರದರ್ಶಕತೆ: ಆದರೆ, ಈಗ ರಾಜ್ಯ ಸರ್ಕಾರವು ಏಪ್ರಿಲ್ 1, 2026ರಿಂದ ಪಿಯುಸಿಸಿ ಮಾಹಿತಿಯನ್ನು ನೇರವಾಗಿ ಕೇಂದ್ರ ಸರ್ಕಾರದ ವಾಹನ್ ಪೋರ್ಟಲ್‌ಗೆ ಲಿಂಕ್ ಮಾಡುವ ಕ್ರಮ ಕೈಗೊಂಡಿದೆ. ಇದರ ಮೂಲಕ ವಾಹನಗಳ ಮಾಲಿನ್ಯ ಪ್ರಮಾಣಪತ್ರಗಳ ಮಾಹಿತಿ ದೇಶದಾದ್ಯಂತ ಲಭ್ಯವಾಗಲಿದ್ದು, ಡಿಜಿಟಲ್ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ. ಈ ಹೊಸ ವ್ಯವಸ್ಥೆಯಿಂದ ವಾಹನ ಮಾಲೀಕರಿಗೆ ಮೊದಲನೆಯದಾಗಿ, ಇತರ ರಾಜ್ಯಗಳಲ್ಲಿ ದಂಡ ಬೀಳುವ ಸಮಸ್ಯೆ ಕಡಿಮೆಯಾಗುತ್ತದೆ. ಎರಡನೆಯದಾಗಿ, ವಾಹನದ ಎಲ್ಲಾ ದಾಖಲೆಗಳು ಒಂದೇ ಪ್ಲಾಟ್‌ಫಾರ್ಮ್‌ನಲ್ಲಿ ಲಭ್ಯವಾಗುವುದರಿಂದ ಇತರೆ ರಾಜ್ಯಗಳ ಪೊಲೀಸರ ಪರಿಶೀಲನೆಗೆ ಸುಲಭವಾಗುತ್ತದೆ. ಅದರಂತೆ, ಇದು ಸಮಯ ಮತ್ತು ಹಣ ಎರಡನ್ನೂ ಉಳಿಸುತ್ತದೆ. ವಾಹನದ ಮಾಲಿನ್ಯ ಪ್ರಮಾಣಪತ್ರದ ವಿವರಗಳು ಇನ್ನು ಮುಂದೆ ಎಂಪರಿವಾಹನ್ ಅಥವಾ ಡಿಜಿಲಾಕರ್ ಆಪ್‌ಗಳಲ್ಲಿಯೂ ಕಾಣಿಸಿಕೊಳ್ಳಲಿವೆ.

ಏರಿಕೆ ಆತಂಕ

ನಗರ ಡ್ರಗ್ಸ್ ಅಂಡ್ ಕೆಮಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಮಾಯಣ್ಣ ತಿಳಿಸಿದ್ದಾರೆ.

ನಮ್ಮ ಕೈಯ್ಯಲ್ಲಿ ಇಲ್ಲ: ಔಷಧ ದರ ಏರಿಕೆ ಕುರಿತು ಪ್ರತಿಕ್ರಿಯಿಸಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಔಷಧ ದರ ನಿಗದಿ ಮಾಡುವುದು ಕೇಂದ್ರ ಸರ್ಕಾರದ ಪಾಲಿಸಿಯ ಮೇಲೆ ಅವಲಂಬಿತವಾಗಿದೆ. ಯುದ್ಧದ ಎಫೆಕ್ಟ್‌ನಿಂದ ದರ ಏರಿಕೆಯಾದರೆ ಅದು ನಮ್ಮ ಕೈಯಲ್ಲಿ ಇಲ್ಲ. ಆದರೆ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಔಷಧದ ಕೊರತೆಯಾಗದಂತೆ ನಾವು ಕ್ರಮ ಕೈಗೊಳ್ಳುತ್ತೇವೆ. ಹೆಚ್ಚಿನ ದರ ನೀಡಿಯಾದರೂ ಔಷಧ ಖರೀದಿ ಮಾಡಿ ಜನರಿಗೆ ತಲುಪಿಸುತ್ತೇವೆ ಎಂದು ಭರವಸೆ ನೀಡಿದ್ದಾರೆ. ಒಟ್ಟಿನಲ್ಲಿ ವಾಣಿಜ್ಯ ಗ್ಯಾಸ್ ಕೊರತೆ ಬಳಿಕ ಈಗ ಔಷಧಗಳ ಬೆಲೆ ಏರಿಕೆ ಬಿಸಿ ಜನರಿಗೆ ತಟ್ಟಲಿದ್ದು, ಮುಂದಿನ ದಿನಗಳಲ್ಲಿ ಏನೆಲ್ಲ ಸಮಸ್ಯೆಯಾಗಲಿದೆ ಎಂದು ಕಾದು ನೋಡಬೇಕಿದೆ.

ಡೆಲ್ಲಿಗೆ ಸುಲಭ ತುತ್ತಾದ ಲಕ್ನೋ ಸೂಪರ್ ಜೈಂಟ್ಸ್



ಸಮೀರ್ ರಿಜ್ವಿ ಹಾಗೂ ಟ್ರಿಸ್ಟನ್ ಸ್ಟಬ್ಸ್ ಜೊತೆಯಾಟ.

ಲಖನೌ, ಏ.1(ವಿವಿಹೆಚ್)– ಟಿ.ನಟರಾಜನ್, ಲುಂಗಿ ಎನ್‌ಗಿಡಿ ಅವರ ಮಾರಕ ಬೌಲಿಂಗ್ ದಾಳಿ ಹಾಗೂ ಯುವ ಬ್ಯಾಟರ್ ಸಮೀರ್ ರಿಜ್ವಿ ಅವರ ಆಕರ್ಷಕ ಅರ್ಧಶತಕದಾಟದ ನೆರವಿನಿಂದ ಅತಿಥೇಯ ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದ ಡೆಲ್ಲಿ ಕ್ಯಾಪಿಟಲ್ಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ಬುಧವಾರ ನಡೆದ 19ನೇ ಆವೃತ್ತಿಯ ಐಪಿಎಲ್ ಪಂದ್ಯಾವಳಿಯ 5ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ 18.4 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದು ಕೊಂಡು 141 ರನ್ ಗಳಿಸಿ ಎದುರಾಳಿ ತಂಡಕ್ಕೆ 142ರನ್‌ಗಳ ಸಾಧಾರಣ ಗುರಿ ನೀಡಿತು. ಈ ಮೊತ್ತವನ್ನು ಸರಾಗವಾಗಿ ಬೆನ್ನತ್ತಿದ ಡೆಲ್ಲಿ, 17.1 ಓವರ್‌ಗಳಲ್ಲಿ ಕೇವಲ 4 ವಿಕೆಟ್ ನಷ್ಟಕ್ಕೆ 145 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಎಲ್‌ಎಸ್‌ಜಿ ಇನ್ನಿಂಗ್ಸ್: ಟೂರ್ನಿಯ ಮೊದಲ ಪಂದ್ಯ ಆಡಿದ ಲಕ್ನೋ ತಂಡಕ್ಕೆ ನಿರೀಕ್ಷಿತ ಆರಂಭ ಕಂಡುಬರಲಿಲ್ಲ. ಆರಂಭಿಕರಾಗಿ ಕಣಕ್ಕಿಳಿದ ನಾಯಕ ರಿಷಭ್ ಪಂತ್ 7ರನ್ ಗಳಿಸಿದ್ದ ವೇಳೆ ಇಲ್ಲದ ರನ್ ಕದಿಯಲು ಹೋಗಿ ರನ್‌ಔಟ್ ಆಗಿ ಹೊರನಡೆಯುವ ಮೂಲಕ ತಂಡಕ್ಕೆ ಆರಂಭಿಕ ಆಘಾತ ನೀಡಿದರು.

ಬಳಿಕ ಬಂದ ಭರವಸೆಯ ಆಟಗಾರ ಐಡೆನ್ ಮಾರ್ಕ್ರಂ 11ರನ್‌ಗೆ ಸುಸ್ತಾಗಿ ಪೆವಿಲಿಯನ್ ಸೇರಿದರು. ಬದೋನಿ ಶೂನ್ಯ ಸಂಪಾದಿಸಿದರೆ, ಹೊಡಿಬಡಿ ದಾಂಡಿಗ ನಿಕೋಲಸ್ ಪೂರನ್ 8 ರನ್ ಗೆ ವಿಕೆಟ್ ಒಪ್ಪಿಸಿ ಹೊರನಡೆದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಉತ್ತಮ ಇನ್ನಿಂಗ್ಸ್ ಕಟ್ಟಿದ ಆರಂಭಿಕ ಬ್ಯಾಟರ್ ಮಿಚೆಲ್ ಮಾರ್ಷ್ 28 ಎಸೆತಗಳಲ್ಲಿ 2ಬೌಂಡರಿ, 3 ಸಿಕ್ಸರ್ ಸಹಿತ 35 ರನ್ ಗಳಿಸಿದರು. ಇವರಿಗೆ ಸಾಥ್ ನೀಡಿದ ಅಬ್ದುಲ್ ಸಮದ್ 25 ಎಸೆತ ಎದುರಿಸಿ 3 ಬೌಂಡರಿ ಹಾಗೂ 1 ಸಿಕ್ಸರ್ ಸಹಿತ 36 ರನ್ ಕಲೆಹಾಕಿ ತಂಡಕ್ಕೆ ಚೇತರಿಕೆ ನೀಡಿದರು.

ಉಳಿದಂತೆ ಮುಕುಲ್ ಚೌಧರಿ 14, ಮೊಹಮ್ಮದ್ ಶಮಿ 1 ರನ್, ಏನ್ರಿಚ್ ನೋಕಿಯೋ ಹಾಗೂ ಮೋಸಿನ್ ಖಾನ್ ಗೋಲ್ಡನ್ ಡಕ್ ಆದರು. ಶಹಬಾಜ್ ಅಹ್ಮದ್ 15 ರನ್ ಗಳಿಸಿ ಅಜೇಯರಾಗಿ ಉಳಿದರು. ಡೆಲ್ಲಿ ಪರ ಲುಂಗಿ ಎನ್‌ಗಿಡಿ ಹಾಗೂ ಎನ್.ನಟರಾಜನ್ ತಲಾ 3 ವಿಕೆಟ್, ಕುಲ್ದೀಪ್ ಯಾದವ್ 2 ವಿಕೆಟ್ ಹಾಗೂ ನಾಯಕ ಅಕ್ಷರ್ ಪಟೇಲ್ ಒಂದು ವಿಕೆಟ್ ಪಡೆದು ಗಮನ ಸೆಳೆದರು.

ಡಿಸಿ ಇನ್ನಿಂಗ್ಸ್: ಈ ಸಾಧಾರಣ ಮೊತ್ತ ಬೆನ್ನತ್ತಿದ ಡೆಲ್ಲಿ ತಂಡಕ್ಕೆ ಲಕ್ನೋ ಆರಂಭಿಕ ಆಘಾತ ನೀಡಿತು. ಆರಂಭಿಕ ಬ್ಯಾಟರ್ ಕೆ.ಎಲ್.ರಾಹುಲ್ ಅವರನ್ನು ಮೊಹಮ್ಮದ್ ಶಮಿ ಗೋಲ್ಡನ್ ಡಕ್ ಮಾಡಿದರು. ಪಥುಮ್ ಸಿಸ್ಸಂಕಾ 1 ರನ್‌ಗೆ ಸುಸ್ತಾಗಿ ಪೆವಿಲಿಯನ್ ಸೇರಿದರು.

ನಿತೀಶ್ ರಾಣಾ 15, ನಾಯಕ ಅಕ್ಷರ್ ಪಟೇಲ್ ಗೋಲ್ಡನ್ ಡಕ್ ಆಗುವ ಮೂಲಕ ಡೆಲ್ಲಿ ತಂಡ 4.3 ಓವರ್‌ಗಳಲ್ಲಿ ಕೇವಲ 26 ರನ್‌ಗೆ ಪ್ರಮುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು.

ಈ ವೇಳೆ ಒಂದಾದ ಸಮೀರ್ ರಿಜ್ವಿ ಹಾಗೂ ಟ್ರಿಸ್ಟನ್ ಸ್ಟಬ್ಸ್ ತಂಡಕ್ಕೆ ಆಧಾರವಾದರು. ಈ ಜೋಡಿ 76 ಎಸೆತಗಳಲ್ಲಿ 119 ರನ್‌ಗಳ ಶತಕದಾಟದ ಜೊತೆಯಾಟ ನೀಡುವ ಮೂಲಕ ತಂಡಕ್ಕೆ ಗೆಲುವು ತಂದುಕೊಟ್ಟರು. ಸಮೀರ್ ರಿಜ್ವಿ 47 ಎಸೆತಗಳಲ್ಲಿ 5 ಬೌಂಡರಿ, 4 ಭರ್ಜರಿ ಸಿಕ್ಸರ್ ಸೇರಿ ಅಜೇಯ 70 ರನ್ ಗಳಿಸಿದರೆ, ಇವರಿಗೆ ಸಾಥ್ ನೀಡಿದ ಸ್ಟಬ್ಸ್ 32 ಎಸೆತಗಳಲ್ಲಿ 3 ಬೌಂಡರಿ ಹಾಗೂ 1 ಸಿಕ್ಸರ್ ಒಳಗೊಂಡಂತೆ 39 ರನ್ ಕಲೆಹಾಕಿ ಅಜೇಯರಾಗಿ ಉಳಿದರು.

ಲಕ್ನೋ ಪರ ಪ್ರಿನ್ಸ್ ಯಾದವ್ 2 ವಿಕೆಟ್, ಮೊಹಮ್ಮದ್ ಶಮಿ ಹಾಗೂ ಮೋಹ್ಸಿನ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದರು. ಸಮಯೋಚಿತ ಆಟದ ಮೂಲಕ ಡೆಲ್ಲಿ ಕ್ಯಾಪಿಟಲ್ಸ್ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ಸಮೀರ್ ರಿಜ್ವಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೊಬೈಲ್‌ನಲ್ಲಿ ದಾಖಲೆ ಭರ್ತಿ ಮಾಡಿ ಸ್ವಯಂ ಗಣತಿಗೆ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಚಾಲನೆ

ಬೆಂಗಳೂರು, ಏ.1(ಕೆಎಂಶಿ)–ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಜನಗಣತಿ 2027ರ ಸ್ವಯಂ ಗಣತಿ ವ್ಯವಸ್ಥೆಯಡಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಮ್ಮ ಮೊಬೈಲ್ ಮೂಲಕ ಇಂದು ದಾಖಲಾತಿ ಪೂರ್ಣಗೊಳಿಸಿದರು.

ಇಂದಿನಿಂದ ಈ ತಿಂಗಳ 15ರವರೆಗೆ ಎಲ್ಲಾ ನಾಗರಿಕರು ಅಧಿಕೃತ ಪೋರ್ಟಲ್ se.census.gov.in ಮೂಲಕ ತಮ್ಮ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸಿಕೊಳ್ಳಲು ಅವರು ರಾಜ್ಯದ ಜನರಲ್ಲಿ ಮನವಿ ಮಾಡಿದ್ದಾರೆ.



ನಮ್ಮ ಜನಗಣತಿ–ನಮ್ಮ ಅಭಿವೃದ್ಧಿ ಧ್ಯೇಯ ವಾಕ್ಯದೊಂದಿಗೆ ಸರ್ಕಾರ ಜನಗಣತಿ 2027 ಹಮ್ಮಿಕೊಂಡಿದ್ದು, ಸ್ವಯಂ ಗಣತಿ ಪ್ರಕ್ರಿಯೆ ಸರಳ ಮತ್ತು ಸುರಕ್ಷಿತವಾಗಿದೆ. ಮೊಬೈಲ್ ಸಂಖ್ಯೆ ಮತ್ತು ಓಟಿಪಿ ಮೂಲಕ ಸುಲಭವಾಗಿ 5 ರಿಂದ 10 ನಿಮಿಷಗಳಲ್ಲಿ ಸ್ವಯಂ ಗಣತಿ ಪೂರ್ಣಗೊಳಿಸಬಹುದಾಗಿದೆ.

ಪ್ರಕ್ರಿಯೆ ಪೂರ್ಣಗೊಂಡ ನಂತರ ನಿಮ್ಮ ಅರ್ಜಿ ಸಂಖ್ಯೆ ದೊರೆಯಲಿದ್ದು ಈ ಸಂಖ್ಯೆಯನ್ನು ಏಪ್ರಿಲ್ 16 ರಿಂದ ಮೇ 15 ರವರೆಗೆ ಮನೆ–ಮನೆಗೆ ಭೇಟಿ ನೀಡುವ ಗಣತಿದಾರರಿಗೆ ನೀಡಿದಲ್ಲಿ, ಗಣತಿದಾರರು ಸ್ವಲ್ಪ ಸಮಯದಲ್ಲಿ ಗಣತಿ ಪೂರ್ಣಗೊಳಿಸಲು ಹಾಗೂ ತಿದ್ದುಪಡಿ ಇದ್ದಲ್ಲಿ ಮಾಡಿಕೊಳ್ಳಬಹುದಾಗಿದೆ.

ಒಂದು ವೇಳೆ ಮೊಬೈಲ್ ಅಥವಾ ಕಂಪ್ಯೂಟರ್ ಇಲ್ಲದಿದ್ದಲ್ಲಿ ಸಮೀಪದ ಕಂಪ್ಯೂಟರ್ ಕೇಂದ್ರಗಳಿಂದ ಅಥವಾ ಸ್ನೇಹಿತರ ಮೊಬೈಲ್‌ನಿಂದ ಮಾಹಿತಿ ಸಲ್ಲಿಸಿ ನೋಂದಣಿ ಸಂಖ್ಯೆ ಪಡೆಯಬಹುದಾಗಿದೆ.

ಬೈಕ್‌ಗೆ ವಾಹನ ಡಿಕ್ಕಿ: ಪತಿ ಸಾವು, ಪತ್ನಿಗೆ ಗಾಯ

ಮೈಸೂರು, ಏ.1– ಬೈಕ್‌ಗೆ ವಾಹನ ಡಿಕ್ಕಿ ಹೊಡೆದ ಪರಿಣಾಮ ಪತಿ ಸಾವನ್ನಪ್ಪಿ, ಪತ್ನಿ ತೀವ್ರವಾಗಿ ಗಾಯಗೊಂಡಿರುವ ಘಟನೆ ಬುಧವಾರ ಮಧ್ಯಾಹ್ನ ವರುಣ ಮೇಲ್ಗಾಲುವೆ ಬಳಿ ನಂಜನಗೂಡು ರಸ್ತೆಯಲ್ಲಿ ಸಂಭವಿಸಿದೆ.

ಮೃತ ವ್ಯಕ್ತಿಯನ್ನು ಮೈಸೂರಿನ ರಾಘವೇಂದ್ರ ನಿವಾಸಿ ಎಂದು ಹೇಳಲಾಗಿದ್ದು, ನಂಜನಗೂಡು ಶ್ರೀಕಂಠೇಶ್ವರ ದೇವಾಲಯಕ್ಕೆ ಪತ್ನಿಯೊಂದಿಗೆ ಬೈಕ್‌ನಲ್ಲಿ ಹೋಗಿ ಬರುವಾಗ ಈ ದುರಂತ ಸಂಭವಿಸಿದೆ ಎನ್ನಲಾಗಿದೆ. ವಾಹನ ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ರಸ್ತೆ ಬದಿಯ ಸೇತುವೆ ಕೆಳಗೆ ಹಾರಿದೆ. ಇದರಿಂದ ಪತಿಗೆ ತೀವ್ರ ಗಾಯವಾಗಿ ಸ್ಥಳದಲ್ಲೇ ಅಸುನೀಗಿದರೇ, ಪತ್ನಿ ತೀವ್ರವಾಗಿ ಗಾಯಗೊಂಡಿದ್ದಾರೆ. ಅವರನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಆಹ್ವಾನ



ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್‌ನ ನಿಕಟ ಪೂರ್ವ ಅಧ್ಯಕ್ಷರು, ಅಪೆಕ್ಸ್ ಬ್ಯಾಂಕ್ ಮಾಜಿ ಉಪಾಧ್ಯಕ್ಷರೂ ಆದ ಹುಣಸೂರು ಶಾಸಕರಾದ ಜಿ.ಡಿ.ಹರೀಶ್‌ಗೌಡ ಅವರನ್ನು ಏಪ್ರಿಲ್ 19 ಮತ್ತು 20ರಂದು ನಡೆಯುವ ಬಸವ ಜಯಂತಿ ಮಹೋತ್ಸವಕ್ಕೆ ಬಸವ ಬಳಗದ ಅಧ್ಯಕ್ಷ ಎಂ.ಚಂದ್ರಶೇಖರ್ ಆಹ್ವಾನಿಸಿದರು. ಈ ವೇಳೆ ಶಿವಮೂರ್ತಿ ಕಾನ್ಯ, ಕೆ.ವಿ. ಮಲ್ಲೇಶ್, ಎ.ಪಿ.ವಿರೂಪಾಕ್ಷ, ಜಯಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾಗಿ ತನ್ವೀರ್ ಸೇಠ್ ಆಯ್ಕೆ



ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದ ಶಾಸಕ ತನ್ವೀರ್ ಸೇಠ್ ಅವರನ್ನು ಬ್ಯಾಂಕ್ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು,ಏ.1–ಮೈಸೂರಿನ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಆಡಳಿತ ಮಂಡಳಿ ಮಾಸಿಕ ಸಭೆ ಬ್ಯಾಂಕ್‌ನ ಅಧ್ಯಕ್ಷ ಕೆ.ಸಿ.ಶೌಕತ್ ಪಾಶಾ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆಯಿತು.

ಸಭೆಯಲ್ಲಿ ನರಸಿಂಹರಾಜ ಕ್ಷೇತ್ರದ ಶಾಸಕ ಹಾಗೂ ಮಾಜಿ ಸಚಿವ ತನ್ವೀರ್ ಸೇಠ್ ಅವರನ್ನು ಸರ್ವಾನುಮತದಿಂದ ಬ್ಯಾಂಕ್‌ನ ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಯಿತು. ಇತ್ತೀಚೆಗೆ ಬ್ಯಾಂಕ್‌ನ ಹಿರಿಯ ನಿರ್ದೇಶಕ ಅಬ್ದುರ್ ರಹ್ಮಾನ್ ಶರೀಫ್ ಅವರು ತಮ್ಮ ನಿರ್ದೇಶಕ ಹುದ್ದೆಗೆ ರಾಜೀನಾಮೆ ನೀಡಿದ್ದರಿಂದ ಈ ಸ್ಥಾನ ಖಾಲಿಯಾಗಿತ್ತು. ಈ ಸಂದರ್ಭದಲ್ಲಿ ಅಧ್ಯಕ್ಷ ಕೆ.ಸಿ. ಶೌಕತ್ ಪಾಶಾ ಅವರು ತನ್ವೀರ್ ಸೇಠ್ ಅವರನ್ನು ಅಭಿನಂದಿಸಿದರು.

ಮೈಸೂರು ನಂ.1 ಸ್ವಚ್ಛ ನಗರವಾಗಿಸಲು ನೀವೂ ಸಹಕರಿಸಿ

ಹೋಟೆಲ್ ಉದ್ಯಮಿಗಳಲ್ಲಿ ನಗರಪಾಲಿಕೆ ಆಯುಕ್ತರ ಮನವಿ

ಮೈಸೂರು,ಏ.1(ಎಂಟಿವೈ)–ಮೈಸೂರು ನಗರವನ್ನು ಸ್ವಚ್ಛತೆಯಲ್ಲಿ ನಂಬರ್ ಒನ್ ಆಗಿಸಲು ಎಲ್ಲಾ ಹೋಟೆಲ್ ಮಾಲೀಕರು ಸಹಕಾರ ನೀಡುವುದರ ಜೊತೆಗೆ ಸ್ವಚ್ಛ ಸರ್ವೇಕ್ಷಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಮನವಿ ಮಾಡಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ನಡೆದ ಹೋಟೆಲ್ ಮಾಲೀಕರ ಸಂಘದ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ಸ್ವಚ್ಛ ನಗರಿಯಾಗಿ ಮತ್ತೊಮ್ಮೆ ಮೈಸೂರು ನಂಬರ್ ಒನ್ ಸ್ಥಾನಕ್ಕೇರುವ ನಿಟ್ಟಿನಲ್ಲಿ ಸ್ವಚ್ಛ ಸರ್ವೇಕ್ಷಣೆ ನಡೆಸಲಾಗುತ್ತಿದ್ದು, ಇದರಲ್ಲಿ ಹೋಟೆಲ್ ಮಾಲೀಕರು ಸಕ್ರಿಯವಾಗಿ ಭಾಗವಹಿಸಬೇಕು. ಅಲ್ಲದೆ, ತಮ್ಮ ಗ್ರಾಹಕರಿಗೂ ಸ್ವಚ್ಛ ಸರ್ವೇಕ್ಷಣೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು. ಹೋಟೆಲ್ ಉದ್ಯಮಕ್ಕೆ ಪಾಲಿಕೆಯಿಂದ ಎಲ್ಲ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಈಗಾಗಲೇ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯ ನಡೆಯುತ್ತಿರುವುದು ಸ್ವಾಗತಾರ್ಹ. ಅನಧಿಕೃತ ರಸ್ತೆಬದಿ ವ್ಯಾಪಾರಿಗಳ ತೆರವು ಕಾರ್ಯ ಮಾಡಬೇಕು. ಈಗಾಗಲೇ ನಗರದಲ್ಲಿ ಮನೆ–ಮನೆಗೆ ಅನಿಲ ಪೈಪ್‌ಲೈನ್ ಸಂಪರ್ಕ ವ್ಯವಸ್ಥೆ ಬಂದಿದೆ. ಅದನ್ನು ನಗರದೆಲ್ಲೆಡೆ ವಿಸ್ತರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್. ಪ್ರಶಾಂತ್ ಮಾತನಾಡಿ, ಟ್ರಾವೆಲ್‌ಮಾರ್ಟ್ 2026 ಈ ಬಾರಿ ಆಯೋಜಿಸಲಾಗಿದೆ. ಇದನ್ನು ಯಶಸ್ವಿಗೊಳಿಸುವ ಮೂಲಕ ಸಾಂಸ್ಕೃತಿಕ ಸೌಂದರ್ಯದೊಂದಿಗೆ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಇದು ಸಹಕಾರಿ ಎಂದರು. ಹೋಟೆಲ್ ಮಾಲೀಕರ ಪತ್ತಿನ ಧರ್ಮದತ್ತಿ ಅಧ್ಯಕ್ಷ ರವಿಶಾಸ್ತ್ರಿ, ಉಪಾಧ್ಯಕ್ಷ ಸುರೇಶ್, ಸುಬ್ರಹ್ಮಣ್ಯ ತಂತ್ರಿ, ಹೋಟೆಲ್ ಮಾಲೀಕರ ಸಂಘದ ಕಾರ್ಯದರ್ಶಿ ಎ.ಆರ್. ರವೀಂದ್ರ ಭಟ್, ಥಿಂಕ್ ಪೈಪ್‌ಲೈನ್ ಗ್ಯಾಸ್‌ನ ವಲಯ ಮುಖ್ಯಸ್ಥ ಬ್ರಿಜೇಶ್ ಸಿಂಗ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಹೋಟೆಲ್ ಮಾಲೀಕರ ಸಂಘದ ಸಭೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಮಾತನಾಡಿದರು.

> “ಮೈಸೂರಿನ ಹೆಬ್ಬಾಳ್, ಕೂರ್ಗಳ್ಳಿ, ದಟ್ಟಗಳ್ಳಿ, ರಾಮಕೃಷ್ಣ ಪರಮಹಂಸ ವೃತ್ತ ಸೇರಿದಂತೆ ನಗರದಲ್ಲಿ 240 ಕಿ.ಮೀ ಪಿಎನ್‌ಜಿ ಪೈಪ್‌ಲೈನ್ ಅಳವಡಿಸಲಾಗಿದೆ. ಪೈಪ್‌ಲೈನ್ ಮೂಲಕ 5 ಸಾವಿರ ಮನೆಗಳಿಗೆ ಗ್ಯಾಸ್ ಸಂಪರ್ಕ ನೀಡಲು ಹೆಸರು ನೋಂದಣಿ ಮಾಡಿಸಿಕೊಂಡಿದ್ದಾರೆ. 100 ಮಂದಿ ಹೋಟೆಲ್ ಮಾಲೀಕರು ಹೆಸರು ನೋಂದಾಯಿಸಿದ್ದು, ಅವರಲ್ಲಿ 22 ಹೋಟೆಲ್ ಹಾಗೂ 42 ಕೈಗಾರಿಕೆಗಳು ಪೈಪ್‌ಲೈನ್ ಮೂಲಕ ಕಾರ್ಯ ನಿರ್ವಹಿಸುತ್ತಿವೆ.
> –ಶಂಭುಲಿಂಗ, ಪ್ರೊಡಕ್ಷನ್ ಮ್ಯಾನೇಜರ್, ಪಿಎನ್‌ಜಿ ಗ್ಯಾಸ್ ಕಂಪನಿ

> “ಆನ್‌ಲೈನ್‌ನಲ್ಲಿ ವಾಣಿಜ್ಯ ಅನಿಲವನ್ನು ನೊಂದಾಯಿಸಿದರೆ ಮಾತ್ರ ಸಕಾಲಕ್ಕೆ ದೊರೆಯಲಿದೆ. ಪಿಎನ್‌ಜಿ ಪೈಪ್‌ಲೈನ್ ಸಂಪರ್ಕ ಯಾವುದೇ ಕಾಲಕ್ಕೆ ಬರಲಿ, ನೀವೂ ನೋಂದಣಿ ಮಾಡಿಕೊಳ್ಳಬೇಕು. ಆಗ ಕಾಳಸಂತೆಯಲ್ಲಿ ಅನಿಲ ಮಾರಾಟ ತಡೆಗಟ್ಟಲು ಸಾಧ್ಯ – ನಾರಾಯಣಗೌಡ, ಅಧ್ಯಕ್ಷ, ಹೋಟೆಲ್ ಮಾಲೀಕರ ಸಂಘ, ಮೈಸೂರು

ಸಾರ್ವಜನಿಕ ಸ್ಥಳದಲ್ಲಿ ನಶೆಯಲ್ಲಿ ತೇಲಾಡುವವರ ಬಗ್ಗೆ ಜನರಿಂದ ಮಾಹಿತಿ

ಹಲವು ಕಡೆ ಹಲವರ ವಶಕ್ಕೆ ಪಡೆದು ವಿಚಾರಣೆ, ಪ್ರಕರಣ ದಾಖಲು

ಮೈಸೂರು,ಏ.1(ಜಿಎ)–ಮೈಸೂರಿನಲ್ಲಿ ಮಾದಕ ವಸ್ತು ವ್ಯಸನಿಗಳ ಬಗ್ಗೆ ಪೊಲೀಸರು ಮಾತ್ರವಲ್ಲದೇ ಸಾರ್ವಜನಿಕರು ಹದ್ದಿನ ಕಣ್ಣಿಟ್ಟಿದ್ದು, ಸಾರ್ವಜನಿಕ ಸ್ಥಳದಲ್ಲಿ ನಶೆಯಲ್ಲಿ ತೇಲಾಡತ್ತಿರುವ ಅನುಮಾನಾಸ್ಪದ ವ್ಯಕ್ತಿಗಳು ಕಂಡ ತಕ್ಷಣ ಪೊಲೀಸರಿಗೆ ಮಾಹಿತಿ ನೀಡುವ ಮೂಲಕ ಪೊಲೀಸರೊಂದಿಗೆ ಕೈಜೋಡಿಸಿದ್ದಾರೆ.

ಮೈಸೂರು ನಗರ ಮತ್ತು ಜಿಲ್ಲೆ ಪೊಲೀಸರು ಮಾದಕ ವಸ್ತು ಮಾರಾಟ ಮಾಡುವವರು ಮತ್ತು ವ್ಯಸನಿಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದು, ಈಗಾಗಲೇ ಅನೇಕ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ. ಪೊಲೀಸರಿಗೆ ಈಗ ಮೈಸೂರಿಗರು ಸಾಥ್ ನೀಡುತ್ತಿದ್ದು, ಸಾರ್ವಜನಿಕ ಸ್ಥಳದಲ್ಲಿ ನಶೆಯಲ್ಲಿ ತೇಲಾಡುವವರನ್ನು ಗಮನಿಸಿ ಸ್ವಯಂಪ್ರೇರಣೆಯಿಂದ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡುತ್ತಿದ್ದಾರೆ.

ಮಾ.29ರಂದು ಸಂಜೆ 4.45ರಲ್ಲಿ ಕೆಆರ್. ಆಸ್ಪತ್ರೆ ಬಳಿ ಆಟೋ ನಿಲ್ಲಿಸಿಕೊಂಡು ಆಸಾಮಿಯು ಮಾದಕ ವಸ್ತು ಸೇವನೆ ಮಾಡುತ್ತಿರುವುದರ ಬಗ್ಗೆ ಸಾರ್ವಜನಿಕರು ದೇವರಾಜ ಠಾಣಾ ಪೊಲೀಸರಿಗೆ ಮಾಹಿತಿ ನೀಡಿದ ನಂತರ 5.10ಕ್ಕೆ ಸ್ಥಳಕ್ಕೆ ಬಂದ ಪೊಲೀಸರು ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದಂತೆ ಗಾಂಜಾವನ್ನು ಬೀಡಿಯಲ್ಲಿ ಹಾಕಿಕೊಂಡು ಸೇವನೆ ಮಾಡಿರುವುದಾಗಿ ತಿಳಿಸಿದಾಗ ತಕ್ಷಣ ಪೊಲೀಸರು ಕೆ.ಆರ್.ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಿ ವರದಿಯಲ್ಲಿ ಮಾದಕ ವಸ್ತು ಸೇವನೆ ಮಾಡಿರುವುದು ತಿಳಿದಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮರುದಿನ ಮಾ.30ರಂದು ಜೆ.ಕೆ. ಮೈದಾನದ ಬಳಿ ಒಬ್ಬ ಆಸಾಮಿಯು ಮಾದಕ ವಸ್ತು ಸೇವನೆ ಮಾಡಿಕೊಂಡು ನಿಂತಿದ್ದಾನೆ ಎಂದು ದೇವರಾಜ ಠಾಣಾ ಪೊಲೀಸರ ಗಮನಕ್ಕೆ ಸಾರ್ವಜನಿಕರು ಮಾಹಿತಿ ನೀಡಿದ್ದಾರೆ. ನಂತರ 11.30ಕ್ಕೆ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಬೇಟಿ ನೀಡಿದ್ದಾಗ ಆಸಾಮಿಯು ಮಾದಕ ವಸ್ತುವನ್ನು ಸೇವನೆ ಮಾಡಿ ನಶೆಯಲ್ಲಿ ತೇಲಾಡುತ್ತಾ ಸಾರ್ವಜನಿಕರಿಗೆ ಸಮಸ್ಯೆಯುಂಟು ಮಾಡುತ್ತಿದ್ದ. ನಂತರ ಪೊಲೀಸರು ಆತನನ್ನು ಹಿಡಿದು ಪೂರ್ವಪರ ವಿಚಾರಿಸಿದ್ದಾಗ ಆಸಾಮಿ 47 ವರ್ಷದ ಆಟೋ ಚಾಲಕ ಎಂದು ತಿಳಿದು ಬಂದಿದೆ.

ಈ ವೇಳೆ ವಿಚಾರಣೆ ಮಾಡಿದಾಗ ಆತ ಕಳೆದ 1 ಗಂಟೆಯಿಂದೆ ಗಾಂಜಾವನ್ನು ಬೀಡಿಯಲ್ಲಿ ಹಾಕಿಕೊಂಡು ಸೇವನೆ ಮಾಡಿದ್ದೇನೆ. ಮತ್ತಿನಲ್ಲಿ ಬಿಸಾಕಿದ್ದೇನೆ ಎಂದು ತಿಳಿಸಿದ ನಂತರ ಆತನನ್ನು ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿ ವೈದ್ಯರ ಬಳಿ ಪರೀಕ್ಷಿಸಿದ್ದಾಗ ಆತ ಮಾದಕ ವಸ್ತು ಸೇವನೆ ಮಾಡಿರುವುದು ವರದಿಯಲ್ಲಿ ಧೃಡವಾಗಿದ್ದು, ಈ ಸಂಬಂಧ ಪ್ರಕರಣ ದಾಖಲಿಸಲಾಗಿದೆ.

ಸನ್ಮಾನ...




ವಯೋ ನಿವೃತ್ತಿ ಹೊಂದಿದ ಚೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿ ಗೋಪಾಲ್‌ರಾಜು ಅವರನ್ನು ಮೈಸೂರಿನ ಶ್ರೀ ಪ್ರೇಮ ಗ್ರೂಪ್ ಆಫ್ ಇಂಡಸ್ಟ್ರೀಸ್ ಮುಖ್ಯಸ್ಥ ಬೂಕಹಳ್ಳಿ ಮಂಜು ಸನ್ಮಾನಿಸಿದರು. ಈ ವೇಳೆ ಪ್ರಥಮ ದರ್ಜೆ ವಿದ್ಯುತ್ ಗುತ್ತಿಗೆದಾರರಾದ ಬಿ.ಎಸ್.ರಾಮು, ಕೆಂಪರಾಜು ಇತರರಿದ್ದರು.

ಜೆಎಸ್‌ಎಸ್ ಪದವಿ ಕಾಲೇಜು ಫುಟ್‌ಬಾಲ್ ತಂಡಕ್ಕೆ ಪ್ರಥಮ ಬಹುಮಾನ



ಮೈಸೂರು ವಿಶ್ವ ವಿದ್ಯಾನಿಲಯ ಆಯೋಜಿಸಿದ್ದ 2025–26ನೇ ಸಾಲಿನ ಚಾಮುಂಡಿ ವಲಯದ ಅಂತರ ಕಾಲೇಜು ಪುರುಷರ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿ, ಅಂತರ ವಲಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿಜೇತ ಕ್ರೀಡಾಪಟುಗಳನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ.ಎಂ.ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ.ಕಾರ್ತಿಕ್, ಸಿ.ಎಸ್. ನಿರಂಜನ್ ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ನಾಳೆಯಿಂದ ಮೈಸೂರಲ್ಲಿ ಬಿಗ್ ಜುವೆಲ್ಲರಿ ಶೋ



ಮೈಸೂರು: ಮೈಸೂರಿನ ಎಂ.ಜಿ. ರಸ್ತೆಯ ರ್‍ಯಾಡಿಸನ್ ಪ್ಲಾಜಾ ಹೋಟೆಲ್‌ನಲ್ಲಿ ಏಪ್ರಿಲ್ 3, 4 ಹಾಗೂ 5ರಂದು ಪ್ರತಿನಿತ್ಯ ಬೆಳಿಗ್ಗೆ 10ರಿಂದ ರಾತ್ರಿ 9 ಗಂಟೆವರೆಗೆ ವಿವಿಧ ರಾಜ್ಯಗಳ ಪ್ರಮುಖ ಆಭರಣ ವಿನ್ಯಾಸಗಾರರ ವಿನೂತನ ಆಭರಣಗಳ ಕಲೆಕ್ಷನ್ಸ್ ಪ್ರದರ್ಶನ ಮತ್ತು ಮಾರಾಟ 'ದಿ ಜುವೆಲ್ಲರಿ ಶೋ' ಏರ್ಪಡಿಸಲಾಗಿದೆ.

ಈ 3 ದಿನ 20ಕ್ಕೂ ಅಧಿಕ ಆಭರಣ ಬ್ರಾಂಡ್‌ಗಳು, 50 ಸಾವಿರಕ್ಕೂ ಅಧಿಕ ಡಿಸೈನ್‌ಗಳಲ್ಲಿ ಪ್ರದರ್ಶಿತಗೊಳ್ಳುತ್ತಿವೆ. ಸಂಗ್ರಹಕ್ಕೆ ಯೋಗ್ಯವಾದ ಅಮೂಲ್ಯ ಆಭರಣಗಳನ್ನು ಖರೀದಿಸಲು ಇದು ಉತ್ತಮ ಅವಕಾಶವಾಗಿದೆ. ಪ್ರಶಸ್ತಿ ಗೆದ್ದಂತಹ ಜುವೆಲ್ಲರಿಗಳು, ವಿನ್ಯಾಸಗಾರರಿಂದ ಅದ್ಭುತವಾದ ಆಭರಣಗಳ ಖಜಾನೆಯೇ ಇಲ್ಲಿ ತೆರೆದುಕೊಳ್ಳಲಿದೆ. ಅದೃಷ್ಟವಂತರು, ಲಕ್ಕಿ ಡ್ರಾನಲ್ಲಿ ಪಾಲ್ಗೊಂಡು ಚಿನ್ನದ ನಾಣ್ಯ ಗೆಲ್ಲುವ ಸದವಕಾಶವಿದೆ. ಈ ಪ್ರದರ್ಶನ ಹಾಗೂ ಮಾರಾಟವನ್ನು ಬ್ರಾಂಡ್ ಅಂಬಾಸಿಡರ್, ಜನಪ್ರಿಯ ನಟಿ ಅಮೃತಾ ಉದ್ಘಾಟಿಸಲಿದ್ದಾರೆ.

ಜೈನ ಸಮಾಜದ ವತಿಯಿಂದ ಮಹಾವೀರ ಜಯಂತಿ ಆಚರಣೆ



ಜೈನ ಸಮಾಜ, ಎಸ್‌ಎಸ್ ಜೈನ ಸಂಘ, ಶ್ರೀ ಸ್ಥಾನಕವಾಸಿ ಜೈನ ಯುವ ಸಂಘಟನೆಯಿಂದ ಮಹಾವೀರ ಜಯಂತಿ ಆಚರಿಸಲಾಯಿತು.

ಮೈಸೂರು, ಏ.1– ಜೈನ ಸಮಾಜ ಮೈಸೂರು, ಎಸ್‌ಎಸ್ ಜೈನ ಸಂಘ, ಶ್ರೀ ಸ್ಥಾನಕವಾಸಿ ಜೈನ ಯುವ ಸಂಘಟನೆ ಮೈಸೂರು ವತಿಯಿಂದ ಮಹಾವೀರ ಜಯಂತಿ ಆಚರಿಸಲಾಯಿತು.

ಭಗವಾನ್ ಮಹಾವೀರ ಜಯಂತಿ ಅಂಗವಾಗಿ ಮೈಸೂರಿನ ಡಲ್ಲಾ ಕುಟುಂಬದಿಂದ ಆಹಾರ ವಿತರಣೆ ಹಾಗೂ ಮಂಗಲ್ ಚಂದ್ ಬಂಟಿಯಾ ಕುಟುಂಬದಿಂದ ಸಾರ್ವಜನಿಕರಿಗೆ ಹಣ್ಣುಗಳ ವಿತರಣೆ ಸೇರಿ ಹಲವು ಸಮಾಜಮುಖಿ ಕಾರ್ಯ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಕೀರ್ತಿ ಜಿ ಚೌಧರಿ, ಸುರೇಶ್ ಸಲೇಚಾ, ವಿಕ್ರಮ್ ಕವಾಡ್, ಕೀರ್ತಿ ಚೌಧರಿ, ಸುಭಾಷ್ ಜೀ ದರ್ದಾ, ಬುದ್ಮಲ್ಜಿ ಭಾಗ್ಮಾರ್, ನವರಥನ್ ಎಂ.ದಲ್ಲಾ, ಕಿರಣ್ ಸಲೇಚಾ, ರಾಜೇಂದ್ರ ದೇಸರ್ಲಾ, ರಿಷಬ್ ಸಂಕಲ, ಆಶಿಶ್ ಪಟ್ವಾ ಸೇರಿದಂತೆ ಜೈನ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಪಿಹೆಚ್.ಡಿ ಪದವಿ



ಮೈಸೂರು, ಏ.1–ಡಾ.ಎನ್.ಎಸ್.ಹರಿನಾರಾಯಣ ಅವರ ಮಾರ್ಗದರ್ಶನದಲ್ಲಿನ ಅರ್ಷಿಯಾ ಕೌಸರ್ ರವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಆಂಗ್ಲ ಭಾಷೆಯಲ್ಲಿ ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಡಿಡಿಪಿಯು ಕಚೇರಿಯ ರಾಜಕುಮಾರ್‌ಗೆ ಬೀಳ್ಕೊಡುಗೆ




ಮೈಸೂರು,ಏ.1–ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ರಾಜಕುಮಾರ್ ಅವರಿಗೆ ಬೀಳ್ಕೊಡಲಾಯಿತು.

ಈ ವೇಳೆ ಉಪನಿರ್ದೇಶಕರಾದ ಶ್ರೀಮತಿ ಎಂ.ಪಿ.ನಾಗಮ್ಮ, ಬೋಧಕೇತರ ಸಂಘದ ಅಧ್ಯಕ್ಷ ಕೃಪಾಕರ್, ಪ್ರಾಂಶುಪಾಲರ ಸಂಘದ ಅಧ್ಯಕ್ಷ ಹನುಮಂತ ರಾವ್, ಖಜಾಂಚಿ ರಾಮೇಗೌಡ, ನಿವೃತ್ತ ಉಪನಿರ್ದೇಶಕ ಮರಿಸ್ವಾಮಿ, ನಾಗಮಲ್ಲೇಶ್, ಸಿದ್ದರಾಜು, ಪ್ರಾಂಶುಪಾಲರಾದ ಲಯನ್ ಸಿ.ಆರ್.ದಿನೇಶ್, ವಿಜಯೇಂದ್ರಕುಮಾರ್, ಬಾಲಸುಬ್ರಮಣ್ಯ, ರವೀಶ್, ಉಪನ್ಯಾಸಕರಾದ ಶಿವಕುಮಾರ್, ಅನುದಾನಿತ ಕಾಲೇಜುಗಳ ಸಂಘದ ಅಧ್ಯಕ್ಷ ಮಹದೇವಸ್ವಾಮಿ ಬೋಧಕೇತರ ನೌಕರರ ಸಂಘ ಕಾರ್ಯದರ್ಶಿ ಸಮೃದ್ಧ, ಕಾರ್ಯದರ್ಶಿ, ಖಜಾಂಚಿ ಚಂದ್ರಮ್ಮ, ಮುಕುಂದ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹೂಟಗಳ್ಳಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ ಸೇರಿ ಹಲವು ಸಾಧಕರಿಗೆ ಸನ್ಮಾನ



ಮೈಸೂರಿನ ಹೂಟಗಳ್ಳಿಯಲ್ಲಿ ನಡೆದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಲಾಯಿತು.

ಮೈಸೂರು,ಏ.1(ಜಿಎ)–ಪಂಚಾಯತ್ ಗ್ರಾಮಾಭಿವೃದ್ಧಿ ಮತ್ತು ರೈತರ ಸೇವಾ ಸಮಿತಿ, ಗ್ರಾಮ ಸಮೃದ್ಧಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ವತಿಯಿಂದ ಹೂಟಗಳ್ಳಿಯಲ್ಲಿರುವ ಕೃಷ್ಣ ಬೇಕರಿ ಬಳಿ ಮಂಗಳವಾರ ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಆಡಳಿತ ಅಧಿಕಾರಿಗಳಾದ ಶ್ರೀನಿವಾಸ ಉದ್ಘಾಟಿಸಿ, ಆಶೀರ್ವಚನ ನೀಡಿದರು. ಈ ವೇಳೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಲಲಿತಾ ಜಿ.ಟಿ.ದೇವೇಗೌಡ, ಚಂದ್ರಿಕಾ ಸುರೇಶ್, ಭಾಗ್ಯ ಲೋಕೇಶ್, ನಾಗರತ್ನ, ಕೂರ್ಗಳ್ಳಿ ಮಹದೇವ್, ಗಿರಿಜಾ ಸೇರಿದಂತೆ 9 ಮಂದಿ ಸಾಧಕರನ್ನು ಸನ್ಮಾನಿಸಲಾಯಿತು.

ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಕ್ಯಾಂಪಿನ ಮಕ್ಕಳಿಗೆ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು. ಸಂಘಗಳಿಗೆ ಆಟೋಟ ಸ್ಪರ್ಧೆಗಳನ್ನು ನಡೆಸಿ, ಸ್ಪರ್ಧೆಯಲ್ಲಿ ಗೆದ್ದ ಮಹಿಳೆಯರಿಗೆ ಬಹುಮಾನ ವಿತರಿಸಲಾಯಿತು. ಪಂಚಾಯತ್ ಗ್ರಾಮಾಭಿವೃದ್ಧಿ, ರೈತರ ಸೇವಾ ಸಮಿತಿ ಹಾಗೂ ಗ್ರಾಮ ಸಮೃದ್ಧಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿರ್ದೇಶಕರನ್ನು ಸನ್ಮಾನಿಸಲಾಯಿತು.

ದೇಶ – ವಿದೇಶ

ಒರಾಕಲ್ ಕಂಪನಿಯಿಂದ ಶಾಕ್: ಭಾರತದಲ್ಲಿ 12,000 ಉದ್ಯೋಗ ಕಡಿತ



ನವದೆಹಲಿ: ಅಮೆರಿಕದ ದೈತ್ಯ ಐಟಿ ಕಂಪನಿಗಳಲ್ಲಿ ಒಂದಾದ ಒರಾಕಲ್ ಭಾರತದಲ್ಲಿ ಸುಮಾರು 12,000 ಉದ್ಯೋಗಿಗಳನ್ನು ವಜಾಗೊಳಿಸಿದೆ. ಅಲ್ಲದೇ ಮುಂದಿನ ಒಂದು ತಿಂಗಳ ಒಳಗೆ ಮತ್ತೊಂದು ಸುತ್ತಿನಲ್ಲಿ ಉದ್ಯೋಗ ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ವರದಿಯಾಗಿದೆ.

ವಜಾಗೊಂಡ ಉದ್ಯೋಗಿಗಳ ಪ್ರಕಾರ, ಒರಾಕಲ್ ಕಂಪನಿಯು ಭಾರತದಲ್ಲಿ ಒಟ್ಟು 30,000 ಉದ್ಯೋಗಿಗಳನ್ನು ನೇಮಕ ಮಾಡಿಕೊಂಡಿದೆ. ಈಗಾಗಲೇ 12,000 ಉದ್ಯೋಗಿಗಳನ್ನು ವಜಾಗೊಳಿಸಿದೆ. ಇನ್ನಷ್ಟು ಕಡಿತ ಸಾಧ್ಯತೆಯಿದ್ದು, ಉದ್ಯೋಗಿಗಳು ಅತಂತ್ರರಾಗಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ ಇದಕ್ಕೆ ಪ್ರತಿಕ್ರಿಯಿಸಲು ಒರಾಕಲ್ ಕಂಪನಿ ನಿರಾಕರಿಸಿದೆ.

ತನ್ನ ಇಮೇಲ್‌ನಲ್ಲಿ ಒರಾಕಲ್ ಸಾಂಸ್ಥಿಕ ಬದಲಾವಣೆಗಳ ಬಗ್ಗೆ ಉದ್ಯೋಗಿಗಳಿಗೆ ಮಾಹಿತಿ ನೀಡಿದ್ದು, ಕಾರ್ಯಾಚರಣೆಗಳನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಸಾಂಸ್ಥಿಕ ಬದಲಾವಣೆಯ ಭಾಗವಾಗಿ ನಿಮ್ಮ ಪಾತ್ರವನ್ನು ತೆಗೆದು ಹಾಕಲು ನಾವು ನಿರ್ಧಾರ ತೆಗೆದುಕೊಂಡಿದ್ದೇವೆ. ಇಂದು ನಿಮ್ಮ ಕೆಲಸದ ಕೊನೆಯ ದಿನವಾಗಿದೆ ಎಂದು ಇ–ಮೇಲ್‌ನಲ್ಲಿ ತಿಳಿಸಿದೆ.

ರಷ್ಯಾ ಮಿಲಿಟರಿ ವಿಮಾನ ಪತನ: 29 ಮಂದಿ ಸಾವು



ಮಾಸ್ಕೋ: ರಷ್ಯಾದ An–26 ಸೇನಾ ವಿಮಾನ ಪತನಗೊಂಡಿದ್ದು, 29 ಪ್ರಯಾಣಿಕರು ಸಾವನ್ನಪ್ಪಿದ್ದಾರೆ. ತಾಂತ್ರಿಕ ದೋಷದಿಂದಾಗಿ ಈ ಅವಘಡ ಸಂಭವಿಸಿದೆ ಎಂದು ಶಂಕಿಸಲಾಗಿದೆ ಎಂದು ಅಲ್ಲಿನ ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ.

ರಕ್ಷಣಾ ಸಚಿವಾಲಯದ ಪ್ರಕಾರ, ಮಂಗಳವಾರ (ಮಾ.31) ಸ್ಥಳೀಯ ಕಾಲಮಾನ ಸಂಜೆ 6 ಗಂಟೆಗೆ ಆಂಟೊನೊವ್ ಡಿಸೈನ್ ಬ್ಯೂರೋಂಟಿ–26 ವಿಮಾನವು ಕ್ರೈಮಿಯಾದ ಪರ್ಯಾಯ ದ್ವೀಪದ ಮೇಲೆ ಹಾರಾಟ ನಡೆಸಿತ್ತು. ಈ ವೇಳೆ ರೇಡಾರ್‌ನಿಂದ ಸಂಪರ್ಕ ಕಳೆದುಕೊಂಡು ತಾಂತ್ರಿಕ ದೋಷದಿಂದಾಗಿ ಬಂಡೆಗೆ ಅಪ್ಪಳಿಸಿದೆ. ಪರಿಣಾಮ ವಿಮಾನದಲ್ಲಿದ್ದ 29 ಜನರು ಸಾವನ್ನಪ್ಪಿದ್ದಾರೆ. ಸ್ಥಳದಲ್ಲಿ ಶೋಧ ಕಾರ್ಯ ನಡೆಯುತ್ತಿದ್ದು, ಮಾಹಿತಿ ಪ್ರಕಾರ ಆರು ಸಿಬ್ಬಂದಿ ಹಾಗೂ 23 ಪ್ರಯಾಣಿಕರು ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ. 1960ರ ದಶಕದ ಅಂತ್ಯದಿಂದ ಸೇವೆ ಸಲ್ಲಿಸುತ್ತಿರುವ, ದಶಕಗಳಷ್ಟು ಹಳೆಯದಾದ An–26 ವಿಮಾನ ಸರಕು ಸಾಗಿಸಲು ಹಾಗೂ ಹೆಚ್ಚೆಂದರೆ 40 ಪ್ರಯಾಣಿಕರನ್ನು ಸಾಗಿಸಬಲ್ಲದಾಗಿತ್ತು. ವಿಮಾನ ಪತನಗೊಂಡ ಕ್ರೈಮಿಯಾ ಪರ್ಯಾಯ ದ್ವೀಪವನ್ನು 2014ರಲ್ಲಿ ಉಕ್ರೇನ್‌ನಿಂದ ರಷ್ಯಾ ವಶಪಡಿಸಿಕೊಂಡಿತ್ತು. ಇದಕ್ಕೂ ಮುನ್ನ 2022ರಲ್ಲಿ ಉಕ್ರೇನ್‌ನ ಜಪೋರಿಝಿಯಾ ಪ್ರದೇಶದಲ್ಲಿ ಅಪಘಾತಕ್ಕೀಡಾಗಿ ಓರ್ವ ವ್ಯಕ್ತಿ ಸಾವನ್ನಪ್ಪಿದ್ದರು.

ಕಳ್ಳತನದ ಆರೋಪ: ಕೇರಳದಲ್ಲಿ ಅಸ್ಸಾಂ ಮೂಲದ ವ್ಯಕ್ತಿ ಹತ್ಯೆ



ತಿರುವನಂತಪುರಂ: ಕೇರಳದಲ್ಲಿ ಕಳ್ಳತನದ ಆರೋಪದ ಮೇಲೆ ಅಸ್ಸಾಂ ಮೂಲದ ವ್ಯಕ್ತಿಯೊಬ್ಬನನ್ನು ಪೆರುಂಬವೂರ್ ಬಳಿ 6 ಸಹೋದ್ಯೋಗಿಗಳು ಥಳಿಸಿ ಕೊಂದಿದ್ದಾರೆ. ಬುಧವಾರ ಬೆಳಿಗ್ಗೆ ಪೆರುಂಬವೂರ್ ಬಳಿ ಅದೇ ರಾಜ್ಯದವರಾದ 6 ಜನ ಸೇರಿ ಈ ಕೊಲೆ ಮಾಡಿದ್ದಾರೆ. ಅವರು ಆತ ತಮ್ಮ ಫೋನ್ ಕದಿಯಲು ಪ್ರಯತ್ನಿಸುತ್ತಿದ್ದಾನೆ ಎಂದು ಅನುಮಾನಗೊಂಡು ಈ ಕೃತ್ಯ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. 6 ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೆರುಂಬವೂರ್ ಪೊಲೀಸ್ ಠಾಣೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದರೆ, ಅವರನ್ನು ಔಪಚಾರಿಕವಾಗಿ ಬಂಧಿಸಲಾಗಿಲ್ಲ. ಅವರ ವಿರುದ್ಧ ಇನ್ನೂ ಪ್ರಕರಣ ದಾಖಲಿಸಿಲ್ಲ. ನಾವು ಇದಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಸಂಗ್ರಹಿಸುತ್ತಿದ್ದೇವೆ ಎಂದು ಪೊಲೀಸರು ಹೇಳಿದ್ದಾರೆ. ಮೃತ ವ್ಯಕ್ತಿಗೆ 25 ವರ್ಷ ವಯಸ್ಸಾಗಿತ್ತು. ಆತ ಮತ್ತು ಇತರ 6 ಆರೋಪಿಗಳು ಪೆರುಂಬವೂರ್‌ನ ಪ್ಲೈವುಡ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಆ ವ್ಯಕ್ತಿಯನ್ನು ಥಳಿಸಿದ ನಂತರ ಆರೋಪಿಗಳು ಆತನನ್ನು ಆಸ್ಪತ್ರೆಗೆ ಕರೆದೊಯ್ದರು. ಅಲ್ಲಿ ಚಿಕಿತ್ಸೆ ಆರಂಭಿಸುವ ಮೊದಲೇ ಆ ವ್ಯಕ್ತಿ ಸಾವನ್ನಪ್ಪಿದ್ದಾನೆ. ಈ ಬಗ್ಗೆ ತಕ್ಷಣ ಆಸ್ಪತ್ರೆ ಸಿಬ್ಬಂದಿ ನಮಗೆ ಮಾಹಿತಿ ನೀಡಿದರು ಎಂದು ಪೊಲೀಸರು ಹೇಳಿದ್ದಾರೆ.


ಪಶ್ಚಿಮ ಏಷ್ಯಾ ಯುದ್ಧ ನಿಲ್ಲಿಸಿ: ಚೀನಾ, ಪಾಕಿಸ್ತಾನ ಕರೆ



ಬೀಜಿಂಗ್: ಪಶ್ಚಿಮ ಏಷ್ಯಾ ಯುದ್ಧವನ್ನು ತಕ್ಷಣವೇ ಕೊನೆಗೊಳಿಸಲು ಚೀನಾ ಮತ್ತು ಪಾಕಿಸ್ತಾನ 5 ಅಂಶಗಳ ಶಾಂತಿ ಪ್ರಸ್ತಾಪವನ್ನು ಮುಂದಿಟ್ಟಿವೆ. ಅದರಲ್ಲಿ ಹೊರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಸುರಕ್ಷಿತ ಸಂಚಾರಕ್ಕೆ ನೀಡಿರುವ ಕರೆಯೂ ಒಳಗೊಂಡಿದೆ. ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ, ಪಾಕಿಸ್ತಾನದ ಉಪ ಪ್ರಧಾನಿ ಮತ್ತು ವಿದೇಶಾಂಗ ಸಚಿವ ಇಶಾಕ್ ದಾರ್ ಅವರೊಂದಿಗೆ ಇರಾನ್‌ನ ಸದ್ಯದ ಪರಿಸ್ಥಿತಿಯ ಕುರಿತು ಮಾತುಕತೆ ನಡೆಸಿ ನಂತರ ಶಾಂತಿ ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಸಂಘರ್ಷವನ್ನು ಕೊನೆಗೊಳಿಸಲು ಹಾಗೂ ಮಾತುಕತೆಗಳನ್ನು ಉತ್ತೇಜಿಸಲು ಟರ್ಕಿ, ಈಜಿಪ್ಟ್ ಮತ್ತು ಸೌದಿ ಅರೇಬಿಯಾದ ವಿದೇಶಾಂಗ ಸಚಿವರೊಂದಿಗೆ ತಾವು ಇತ್ತೀಚೆಗೆ ನಡೆಸಿದ ಮಾತುಕತೆಯ ಬಗ್ಗೆ ವಾಂಗ್ ಅವರಿಗೆ ವಿವರಿಸಲು ದಾರ್ ಚೀನಾಗೆ ಭೇಟಿ ನೀಡಿದ್ದಾರೆ. ಡಾರ್–ವಾಂಗ್ ಮಾತುಕತೆ ನಂತರ, ಎರಡೂ ದೇಶಗಳು ಗಲ್ಫ್ ಪ್ರದೇಶ ಮತ್ತು ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಪುನಃಸ್ಥಾಪಿಸುವ ಬಗ್ಗೆ 5 ಪ್ರಸ್ತಾಪಗಳನ್ನು ಮುಂದಿಟ್ಟಿವೆ. ಜೊತೆಗೆ ಹೊರ್ಮುಜ್ ಜಲಸಂಧಿಯ ಮೂಲಕ ಸುರಕ್ಷಿತ ಸಾಗಣೆ, ಯುದ್ಧ ನಿಲ್ಲಿಸುವುದು, ಶಾಂತಿ ಮಾತುಕತೆಗಳನ್ನು ಪ್ರಾರಂಭಿಸುವುದು, ಯುಎನ್ ಚಾರ್ಟರ್‌ನ ಪ್ರಾಮುಖ್ಯತೆಯನ್ನು ಕಾಪಾಡುವುದು ಪ್ರಸ್ತಾಪಗಳ ಅಂಶಗಳಲ್ಲಿ ಸೇರಿದೆ.

ನಟಿ ಮೇಲೆ ಲೈಂಗಿಕ ದೌರ್ಜನ್ಯ ಆರೋಪ: ಮಲಯಾಳಂ ನಿರ್ದೇಶಕ ರಂಜಿತ್ ಬಂಧನ



ತಿರುವನಂತಪುರ: ಸಿನಿಮಾ ಸೆಟ್‌ನಲ್ಲಿ ನಟಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ್ದಾರೆ ಎಂಬ ಆರೋಪದ ಮೇಲೆ ಮಲಯಾಳಂ ನಿರ್ದೇಶಕ, ನಟ ರಂಜಿತ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಸೋಮವಾರ ಕೊಚ್ಚಿ ನಗರ ಪೊಲೀಸ್ ಠಾಣೆಯಲ್ಲಿ ನಟಿಯೊಬ್ಬರು ದೂರು ದಾಖಲಿಸಿದ್ದಾರೆ. ಸಿನಿಮಾ ಸಮಯದಲ್ಲಿ ರಂಜಿತ್ ತಮ್ಮನ್ನು ಕ್ಯಾರವಾನ್‌ಗೆ ಕರೆದೊಯ್ದು ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ದೂರಿನನ್ವಯ ಪೊಲೀಸರು ರಂಜಿತ್ ಅವರನ್ನು ಮಂಗಳವಾರ (ಮಾ.31) ತಡರಾತ್ರಿ ಇಡುಕ್ಕಿ ಜಿಲ್ಲೆಯ ತೋಡುಪುಳದಲ್ಲಿ ಬಂಧಿಸಿದಿದ್ದಾರೆ. ಅದಾದ ಬಳಿಕ ಅವರನ್ನು ಕೇರಳದ ಜೆಎಫ್‌ಎಂಸಿ (ನ್ಯಾಯಾಂಗ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್) ಕೋರ್ಟ್‌ಗೆ ಹಾಜರುಪಡಿಸಿದ್ದು, 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಬಳಿಕ ಅವರನ್ನು ಎರ್ನಾಕುಲಂ ಜೈಲಿಗೆ ಸ್ಥಳಾಂತರಿಸಲಾಗಿದೆ.

ಮ್ಯಾಜಿಸ್ಟ್ರೇಟ್ ನಿವಾಸದ ಹೊರಗೆ ಮಾಧ್ಯಮಗಳೊಂದಿಗೆ ಮಾತನಾಡಿದ ನಿರ್ದೇಶಕ ರಂಜಿತ್, ಇದು ಸುಳ್ಳು. ಈ ಪ್ರಕರಣದಲ್ಲಿ ಮಾಡಿರುವ ಆರೋಪ ಸುಳ್ಳು ಎಂದಿದ್ದಾರೆ. ಸದ್ಯ ಕೊಚ್ಚಿ ನಗರ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ಈ ಪ್ರಕರಣದ ತನಿಖೆ ನಡೆಸುತ್ತಿದೆ.

ಪಡಿತರ ಚೀಟಿ ಒದಗಿಸುವಂತೆ ಆಗ್ರಹಿಸಿ ಸಿಪಿಐ(ಎಂ) ಪ್ರತಿಭಟನೆ



ಪಡಿತರ ಚೀಟಿ ಒದಗಿಸುವಂತೆ ಆಗ್ರಹಿಸಿ ಸಿಪಿಐ(ಎಂ) ಪ್ರತಿಭಟನೆ ನಡೆಸಿತು.

ವಿರಾಜಪೇಟೆ, ಏ.1–ಅರ್ಹ ಬಡಫಲಾನುಭವಿಗಳಿಗೆ ಪಡಿತರ ಚೀಟಿ ಒದಗಿಸುವಂತೆ ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ನಗರ ಸಮಿತಿ ವತಿಯಿಂದ ತಾಲೂಕು ಕಛೇರಿ ಎದುರು ಪ್ರತಿಭಟನೆ ನಡೆಸಿತು.

ಪಕ್ಷದ ಜಿಲ್ಲಾ ಸಮಿತಿಯ ಎ.ಸಿ.ಸಾಬು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿ, ರಾಜ್ಯದಲ್ಲಿ 7,76 ಲಕ್ಷ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಲು ಕೇಂದ್ರ ಸರಕಾರದ ಸೂಚನೆ ಮೇರೆಗೆ ಈಗಾಗಲೇ 3 ಲಕ್ಷದ 65 ಸಾವಿರ ಪಡಿತರ ಚೀಟಿ ರದ್ದು ಮಾಡಲಾಗಿದೆ. ಜಿಲ್ಲೆಯಲ್ಲಿ 4,500ಕ್ಕೂ ಹೆಚ್ಚು ಕಾರ್ಡ್‌ಗಳನ್ನು ರದ್ದು ಮಾಡಲಾಗಿದೆ. ರದ್ದು ಮಾಡಿರುವ ಪಡಿತರ ಚೀಟಿಯನ್ನು ಕೂಡಲೇ ವಿತರಿಸಬೇಕು ಇಲ್ಲವಾದಲ್ಲಿ ಕಾರ್ಮಿಕ ಸಂಘಟನೆಗಳಿಂದ ಉಗ್ರ ರೀತಿಯ ಹೋರಾಟದ ಹಮ್ಮಿಕೊಳ್ಳಲಾಗುವುದಾಗಿ ಎಂದು ಸಾಬು ಎಚ್ಚರಿಸಿದರು.

ಸಿ.ಪಿ.ಐ ಮುಖಂಡ ವಕೀಲ ಕೆ.ವಿ.ಸುಲೀಲ್ ಮಾತನಾಡಿ ರಾಜ್ಯದಲ್ಲಿ ಬಡ ಕೂಲಿ ಕಾರ್ಮಿಕ ಕುಟುಂಬಗಳಿಗೆ ಪಡಿತರ ವ್ಯವಸ್ಥೆಯ ಮೂಲಕ ಮತ್ತಷ್ಟು ಅಗತ್ಯ ವಸ್ತುಗಳನ್ನು ವಿತರಿಸುವಂತಾಗಬೇಕೆಂದು ಒತ್ತಾಯಿಸಿದರು. ಸಿಪಿಐಎಂ ಪಕ್ಷದ ನಗರ ಸಮಿತಿಯ ಕೆ.ಎಸ್.ರಮೇಶ್ ಶಾಜಿ, ಪದ್ಮಿನಿ ಶ್ರೀಧರ್, ದಲಿತ ಸಮಿತಿಯ ಸತೀಶ್ ಕುಮಾರ್ ಮಾತ ನಾಡಿದರು.

ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದ ತಹಶೀಲ್ದಾರ್ ಪ್ರವೀಣ್ ಕುಮಾರ್ ಮಾತನಾಡಿ, ಪಡಿತರ ಚೀಟಿಯನ್ನು ರದ್ದು ಮಾಡಲು ಕರಣ ಏನೆಂಬುದು ತಿಳಿದು ಬಂದಿಲ್ಲ ಯಾರ ಪಡಿತರ ಚೀಟಿ ರದ್ದು ಮಾಡಲಾಗಿದೆ ಎಂಬುದನ್ನು ಲಿಖಿತ ರೂಪದಲ್ಲಿ ಅರ್ಜಿ ಸಲ್ಲಿಸಿದರೆ, ಕಂಪ್ಯೂಟರ್‌ನಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು ಪ್ರತಿಭಟನೆಯಲ್ಲಿ ಎ.ಹಮೀದ್, ಕೆಎಸ್.ರತೀಶ್, ಹರಿದಾಸ್, ಖಾಸಿಂ, ಬಾಪಟ್ಟಿ, ಡಿವೈಎಫ್ಐ ಎ.ಹೆಚ್. ಸಾಧೀಕ್, ದಲಿತ ಸಮಿತಿ ಕುಮಾರ, ಮಹಿಳಾ ಸದಸ್ಯರು ಮತ್ತಿತರರು ಭಾಗವಹಿಸಿದ್ದರು.

ಓಂಕಾರೇಶ್ವರ ದೇವಾಲಯಗಳ ಅಭಿವೃದ್ಧಿಗೆ 1 ಕೋಟಿ



ಮಡಿಕೇರಿ ಏ.1–ಓಂಕಾರೇಶ್ವರ ವ್ಯವಸ್ಥಾಪನಾ ಸಮಿತಿಯ ಉಸ್ತುವಾರಿಯಲ್ಲಿರುವ ಶ್ರೀ ಓಂಕಾರೇಶ್ವರ, ಶ್ರೀ ಆಂಜನೇಯ ಹಾಗೂ ಶ್ರೀ ಕೋಟೆ ಮಹಾಗಣಪತಿ ದೇವಾಲಯಗಳ ಅಭಿವೃದ್ಧಿಗೆ ಹಾಗೂ ಇತರ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಕೋಟಿ ರೂ. ಅನುದಾನವನ್ನು ಸರಕಾರದಿಂದ ಒದಗಿಸುವುದಾಗಿ ಶಾಸಕ ಡಾ.ಮಂತರ್ ಗೌಡ ಭರವಸೆ ನೀಡಿದ್ದಾರೆ.

ಶ್ರೀ ಓಂಕಾರೇಶ್ವರ ದೇವಾಲಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚುಮ್ಮಿ ದೇವಯ್ಯ ಹಾಗೂ ಸದಸ್ಯರಾದ ಅಂಬೆಕಲ್ ಕುಶಾಲಪ್ಪ, ಪ್ರಕಾಶ್ ಆಚಾರ್ಯ ಮತ್ತು ಜಿ.ರಾಜೇಂದ್ರ ಮಾಡಿದ ಮನವಿಗೆ ಸ್ಪಂದಿಸಿ, ಶಾಸಕರ ಅನುದಾನದಿಂದ 50 ಲಕ್ಷ ಹಾಗೂ ಮುಜರಾಯಿ ಇಲಾಖೆಯಿಂದ ಸಚಿವ ರಾಮಲಿಂಗಾರೆಡ್ಡಿ ಮೂಲಕ ರೂ. 50 ಲಕ್ಷ, ಹೀಗೆ ಒಟ್ಟು 1 ಕೋಟಿ ಒದಗಿಸುವುದಾಗಿ ಹೇಳಿದರು.

ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಸುಮಾರು ರೂ. 36 ಲಕ್ಷದ ಅಭಿವೃದ್ಧಿ ಯೋಜನೆಯನ್ನು ಕೈಗೊಂಡಿದ್ದು, ಮುಕ್ತಾಯ ಹಂತದಲ್ಲಿದೆ. ದೇವಾಲಯ ಸುತ್ತಲೂ ನೆಲಹಾಸು ಹಾಗೂ ಛಾವಣಿಯನ್ನು ನಿರ್ಮಿಸಲಾಗಿದೆ. ಹೊರ ಆವರಣವನ್ನು ವಿಸ್ತರಿಸಲಾಗಿದೆ. ಅಲ್ಲದೆ ದೇವಾಲಯ ಆವರಣದಲ್ಲಿ ನೂತನವಾಗಿ ನವಗ್ರಹಗಳನ್ನು ಪ್ರತಿಷ್ಠಾಪಿಸಲು ಕಾರ್ಯೋನ್ಮುಖವಾಗಿರುವುದಾಗಿ ಸಮಿತಿ ಅಧ್ಯಕ್ಷ ಚುಮ್ಮಿ ದೇವಯ್ಯ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೊಡಗು ವಿದ್ಯಾಲಯದಲ್ಲಿ ಕ್ರೀಡಾಂಗಣ ಉದ್ಘಾಟನೆ



ಮಡಿಕೇರಿ, ಏ.1–ನಗರದ ಕೊಡಗು ವಿದ್ಯಾಲಯದಲ್ಲಿ ಸಮಾಗಮ 2026 ವಾರ್ಷಿಕ ಬೇಸಿಗೆ ಶಿಬಿರ ಮತ್ತು ಪಿಕಲ್ ಬಾಲ್ ಕ್ರೀಡಾಂಗಣ ಉದ್ಘಾಟನೆಗೊಂಡಿತು. ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಆದಿತ್ಯ ಕೋಟೆ, ಡಾ.ಜಾಹ್ನವಿ ಕೋಟೆ, ಕಾರ್ಯದರ್ಶಿ ಪೂಣಚ್ಚ ಬಿ.ಎಸ್ ಶಾಲಾ ಆಡಳಿತ ಮಂಡಳಿಯ ಸದಸ್ಯ ಗುರುದತ್, ಸಿ.ಎಸ್, ಪ್ರಾಂಶುಪಾಲೆ ಸುಮಿತ್ರಾ ಕೆ.ಎಸ್. ಆಡಳಿತ ವ್ಯವಸ್ಥಾಪಕ ಪಿ.ರವಿ, ಕಲಾ ತರಬೇತುದಾರ ಪವನ್ ಶಿಬಿರಕ್ಕೆ ಚಾಲನೆ ನೀಡಿದರು.

ಡಾ. ಜಾಹ್ನವಿ ಕೋಟೆ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪಠ್ಯಕ್ರಮಕ್ಕೆ ಜೋತುಬೀಳದೆ ಹೊಸ ಹೊಸ ವಿಷಯಗಳನ್ನು ಕಲಿಯುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಆದಿತ್ಯ ಕೋಟೆ ಮಾತನಾಡಿ, ಶಾಲಾ ವಿದ್ಯಾಭ್ಯಾಸ ಮತ್ತು ಕ್ರೀಡೆ ಎರಡನ್ನೂ ಸಮತೋಲನದಲ್ಲಿ ಇಟ್ಟುಕೊಳ್ಳುವಂತೆ ಕಿವಿ ಮಾತು ಹೇಳಿದರು. ಶಾಲಾ ಆಡಳಿತ ಮಂಡಳಿ ಸದಸ್ಯ ಸಿ.ಎಸ್. ಗುರುದತ್ ಮಾತನಾಡಿ, ಪಿಕಲ್ ಬಾಲ್ ಕ್ರೀಡಾಂಗಣದ ಸೌಲಭ್ಯವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಸಮಾಗಮ ಬೇಸಿಗೆ ಶಿಬಿರ ಏ.22ರವರೆಗೆ ನಡೆಯಲಿದ್ದು, ಪ್ರತಿದಿನ ಬೆಳಗ್ಗೆ 6.30 ರಿಂದ ಸಂಜೆ 6 ಗಂಟೆಯವರೆಗೆ ವಿವಿಧ ಕೌಶಲ್ಯಾಭಿವೃದ್ಧಿ ಹಾಗೂ ಸೃಜನಾತ್ಮಕ ಚಟುವಟಿಕೆಗಳನ್ನು ಒಳಗೊಂಡಿದೆ. ಈ ಶಿಬಿರದಲ್ಲಿ 180 ಶಿಬಿರಾರ್ಥಿಗಳು ಭಾಗವಹಿಸಿದ್ದಾರೆ.

ನಂಜರಾಯಪಟ್ಟಣದಲ್ಲಿ ಶ್ರದ್ಧಾಭಕ್ತಿಯಿಂದ ನಡೆದ ವಾರ್ಷಿಕ ಪೂಜಾ ಮಹೋತ್ಸವ



ನಂಜರಾಯಪಟ್ಟಣದಲ್ಲಿ ವಾರ್ಷಿಕ ಪೂಜಾಮಹೋತ್ಸವ ಶ್ರದ್ಧಾಭಕ್ತಿಯೊಂದಿಗೆ ನಡೆಯಿತು.

ಕುಶಾಲನಗರ, ಏ.1– ಸಮೀಪದ ನಂಜರಾಯಪಟ್ಟಣ ಗ್ರಾಮದ ಶ್ರೀ ನಂಜುಂಡೇಶ್ವರ ದೇವಾಲಯದಲ್ಲಿ ಮಂಗಳವಾರ ಶ್ರೀ ನಂಜುಂಡೇಶ್ವರ ಹಾಗೂ ಬಸವೇಶ್ವರ ದೇವರ ವಾರ್ಷಿಕ ಪೂಜಾಮಹೋತ್ಸವ ಶ್ರದ್ಧಾಭಕ್ತಿ ಯೊಂದಿಗೆ ನಡೆಯಿತು.

ಗ್ರಾಮದ ಪಟೇಲ್ ಮೋಹನ ಕುಮಾರ್ ಮನೆಯಿಂದ ಕನ್ನಂಬಾಡಿಯಮ್ಮ ದೇವರ ಆಭರಣಗಳನ್ನು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಮಂಗಳವಾದ್ಯ ಹಾಗೂ ಪೂರ್ಣಕುಂಭದೊಂದಿಗೆ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಲಾಯಿತು. ಬಳಿಕ ಮಂಗಳವಾರ ಬೆಳಗ್ಗೆ ಬಸವೇಶ್ವರ ಹಾಗೂ ಕನ್ನಂಬಾಡಿಯಮ್ಮ ದೇವತಾ ಮೂರ್ತಿಗಳನ್ನು ಕಾವೇರಿ ನದಿಗೆ ಕೊಂಡೊಯ್ದು ಗಂಗಾ ಪೂಜೆ ನೆರವೇರಿಸಿ, ವೀರಗಾಸೆ ಮಂಗಳ ವಾದ್ಯದೊಂದಿಗೆ ಮೆರವಣಿಗೆಯಲ್ಲಿ ದೇವಾಲಯದ ಆವರಣಕ್ಕೆ ತರಲಾಯಿತು. ಮೆರವಣಿಗೆಯಲ್ಲಿ ಪಾಂಡವಪುರದ ವಿಶ್ವರುದ್ರ, ರವಿಕುಮಾರ್, ಪ್ರಜ್ವಲ್ ತಂಡದ ವೀರಗಾಸೆ ವೀರಭದ್ರೇಶ್ವರ ಕುಣಿತ ಎಲ್ಲರ ಗಮನ ಸೆಳೆಯಿತು.

ವಿರಾಜಪೇಟೆ ಅರಮೇರಿ ಕಳಂಚೇರಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಹಾಗೂ ದಿಂಡಗಾಡು ಬಸವಜ್ಯೋತಿ ಮಠದ ಅಪ್ಪಾಜಿ ಸ್ವಾಮೀಜಿ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ಜರುಗಿದವು. ಸೋಮವಾರಪೇಟೆ ಕೆ.ಪಿ.ಯೋಗೇಶ್, ಎಸ್.ಎ. ಹರೀಶ್ ಪೂಜಾ ಕಾರ್ಯ ನಡೆಸಿದರು. ದೇವಾಲಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ಮೋಹನ್ ಕುಮಾರ, ಕಾರ್ಯದರ್ಶಿ ಕೆ.ವಿ.ಪ್ರೇಮಾನಂದ, ಖಜಾಂಚಿ ಮುರುಳಿ ಮಾದಯ್ಯ ಪದಾಧಿಕಾರಿಗಳಾದ ಕೆ.ಎಸ್. ರತೀಶ್, ಬಾಲಕೃಷ್ಣ, ವಿಜುಚೆಂಗಪ್ಪ, ಲೀಲಾವತಿ, ಕಾಳಯ್ಯ, ಕೆಮ್ಮಾರನ ಲೋಕನಾಥ್ ಮತ್ತಿತರರು ಪಾಲ್ಗೊಂಡಿದ್ದರು. ಮಹಾಮಂಗಳಾರತಿ ನಂತರ ನೆರೆದ ಭಕ್ತರಿಗೆ ಅನ್ನಸಂತರ್ಪಣೆ ನೆರವೇರಿಸಲಾಯಿತು.

ಅಂತರ ಕೊಡವ ಪೊಮ್ಮಕ್ಕಡ ಕೂಟಗಳ ನಡುವೆ ಬಾಂಧವ್ಯ ವೃದ್ಧಿ



ಕೊಡವ ಪೊಮ್ಮಕ್ಕಡ ಕೂಟ ಅಂತರ ಕೊಡವ ಪೊಮ್ಮಕ್ಕಡ ಥ್ರೋಬಾಲ್ ಪಂದ್ಯಾವಳಿ ಚೆಟ್ಟಳ್ಳಿ ಪ್ರೌಢಶಾಲಾ ಮೈದಾನದಲ್ಲಿ ನಡೆಯಿತು

ಮಡಿಕೇರಿ, ಏ.1– ಕೊಡಗೂ ಸೇರಿದಂತೆ ವಿವಿದೆಡೆ ಪೊಮ್ಮಕ್ಕಡ ಕೂಟಗಳ ನಡುವೆ ಭಾಂದವ್ಯ ವೃದ್ಧಿ ಹಾಗೂ ಕ್ರೀಡಾ ಮನೋಭಾವ ಮೂಡಿಸುವ ಉದ್ದೇಶದೊಂದಿಗೆ ಜೋಮಾಲೆ ಕೊಡವ ಪೊಮ್ಮಕ್ಕಡ ಕೂಟ ಅಂತರ ಕೊಡವ ಪೊಮ್ಮಕ್ಕಡ ಥ್ರೋಬಾಲ್ ಪಂದ್ಯಾವಳಿಯನ್ನು ಏರ್ಪಡಿಸಿರುವುದು ಶ್ಲಾಘನೀಯ ಎಂದು ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಹೇಳಿದ್ದಾರೆ.

ಚೆಟ್ಟಳ್ಳಿ ಪ್ರೌಢಶಾಲಾ ಮೈದಾನದಲ್ಲಿ ಚೆಟ್ಟಳ್ಳಿ ಕೊಡವ ಸಮಾಜದ ಅಧೀನದಲ್ಲಿರುವ ಜೋಮಾಲೆ ಕೊಡವ ಪೊಮ್ಮಕ್ಕಡ ಕೂಟದ ವತಿಯಿಂದ ಆಯೋಜಿಸಲಾಗಿದ್ದ ಪ್ರಥಮ ವರ್ಷದ ಅಂತರ ಕೊಡವ ಪೊಮ್ಮಕ್ಕಡ ಥ್ರೋಬಾಲ್ ಪಂದ್ಯಾವಳಿಯನ್ನು ಉದ್ಘಾಟಿಸಿ, ಜೋಮಾಲೆ ಪೊಮ್ಮಕ್ಕಡ ಕೂಟದ ವತಿಯಿಂದ ಥ್ರೋಬಾಲ್ ಪಂದ್ಯಾವಳಿ ಮೂಲಕ ಗ್ರಾಮೀಣ ಕ್ರೀಡಾ ಪ್ರತಿಭೆಗಳು ಬೆಳಕಿಗೆ ಬರಲು ಅವಕಾಶವಾಗುತ್ತದೆ ಎಂದರು.

ಚೆಟ್ಟಳ್ಳಿಯ ಜೋಮಾಲೆ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಮುಳ್ಳಂಡ ಶೋಭಾ ಚಂಗಪ್ಪ ಮಾತನಾಡಿ, ಜೋಮಾಲೆ ಪೊಮ್ಮಕ್ಕಡ ಕೂಟದಿಂದ ಇದೇ ಪ್ರಥಮ ಭಾರಿಗೆ ಚೆಟ್ಟಳ್ಳಿಯಲ್ಲಿ ಥ್ರೋಬಾಲ್ ಪಂದ್ಯಾವಳಿಯಲ್ಲಿ ಬೆಂಗಳೂರು ಕೊಡವ ಸಮಾಜ, ಪೊಮ್ಮಕ್ಕಡ ಕೂಟ ಸೇರಿದಂತೆ ವಿವಿಧ ಕೊಡವ ಸಮಾಜಗಳ ಪೊಮ್ಮಕ್ಕಡ ಕೂಟದ 16 ತಂಡಗಳು ಪಾಲ್ಗೊಂಡಿವೆ. ಪಂದ್ಯಾವಳಿಯಲ್ಲಿ ಪ್ರಥಮ, ದ್ವಿತೀಯ, ತೃತೀಯ ಹಾಗೂ 4ನೇಸ್ಥಾನ ಪಡೆಯುವ ತಂಡಗಳಿಗೆ ನಗದು ಸೇರಿದಂತೆ ಆಕರ್ಷಕ ಟ್ರೋಫಿಯನ್ನು ಬಹುಮಾನವಾಗಿ ನೀಡಲಾಗುವುದು. ಆಟಗಾರ್ತಿಯರಿಗೆ ವೈಯಕ್ತಿಕ ಬಹುಮಾನವನ್ನು ನೀಡಲಾಗುವುದು ಎಂದರು.

ಪೊಮ್ಮಕ್ಕಡ ಕೂಟದಲ್ಲಿ 60 ಸದಸ್ಯೆಯರಿದ್ದು, ಇದೇ ಪ್ರಥಮ ಬಾರಿಗೆ ಈ ಪಂದ್ಯಾವಳಿ ಆಯೋಜಿಸುವಲ್ಲಿ ಸಫಲರಾಗಿದ್ದೇವೆ. ಜೋಮಾಲೆ ಪೊಮ್ಮಕ್ಕಡ ಕೂಟದ ವತಿಯಿಂದ ಮುಂದಿನ ದಿನಗಳಲ್ಲಿ ರಕ್ತದಾನ ಶಿಬಿರ ಹಾಗೂ ವೃದ್ಧಾಶ್ರಮ ವಾಸಿಗಳಿಗೆ ಅಗತ್ಯ ನೆರವು ನೀಡುವ ಉದ್ದೇಶವಿದ್ದು, ವೈವಿಧ್ಯಮಯ ಕಾರ್ಯಕ್ರಮ ಆಯೋಜಿಸಲಾಗುತ್ತದೆ ಎಂದು ಶೋಭಾ ಚಂಗಪ್ಪ ತಿಳಿಸಿದರು.

ಜೋಮಾಲೆ ಪೊಮ್ಮಕ್ಕಡ ಕೂಟದ ಉಪಾಧ್ಯಕ್ಷೆ ಚೋಳಂಡ ಜ್ಯೋತಿ ನಾಣಯ್ಯ, ಕಾರ್ಯದರ್ಶಿ ಅಡಿಕೆರ ಶಾಂತಿ ಮುತ್ತಪ್ಪ, ಖಜಾಂಚಿ ಪುತ್ತರಿರ ಗಂಗು ಅಚ್ಚಯ್ಯ, ಸಹ ಕಾರ್ಯದರ್ಶಿ ಕೆಚ್ಚೆಟ್ಟಿರ ರತಿ ಕಾರ್ಯಪ್ಪ, ಚೆಟ್ಟಳ್ಳಿ ಕೊಡವ ಸಮಾಜದ ಅಧ್ಯಕ್ಷ ಮುಳ್ಳಂಡ ರತ್ತು ಚಂಗಪ್ಪ, ಉಪಾಧ್ಯಕ್ಷ ಬಿದ್ದಂಡ ಮಾದಯ್ಯ ಹಾಜರಿದ್ದರು.

ದುಷ್ಕರ್ಮಿಗಳನ್ನು ಶಿಕ್ಷಿಸದಿದ್ದಲ್ಲಿ ಆಯುಧ ಹಿಡಿಯಬೇಕಾದೀತು



ನಾಪೋಕ್ಲುನಲ್ಲಿ ಬುಧವಾರ ಹಿಂದೂ ಜನಜಾಗೃತಿ ಜಾಥಾ ನಡೆಯಿತು.

ನಾಪೋಕ್ಲು, ಏ.1–ಹಿಂದು ಸಮಾಜಕ್ಕೆ ತೊಂದರೆ ನೀಡುವವರಿಗೆ ಪೊಲೀಸರು ಶಿಕ್ಷಿಸುವ ಕೆಲಸವನ್ನು ಮಾಡದಿದ್ದಲ್ಲಿ ಇಂದು ಧ್ವಜ ಹಿಡಿದು ಬಂದವರು ನಾಳೆ ಆಯುಧ ಹಿಡಿದು ಬರಬೇಕಾದೀತು ಎಂದು ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಪ್ರಾಂತ್ಯ ಕಾರ್ಯಕಾರಿ ಸಮಿತಿಯ ಶ್ರೀಕಾಂತ್ ಶೆಟ್ಟಿ ಕಾರ್ಕಳ ಎಚ್ಚರಿಸಿದ್ದಾರೆ.

ಇಲ್ಲಿನ ಮಾರುಕಟ್ಟೆ ಆವರಣದಲ್ಲಿ ಹಿಂದೂ ಸುರಕ್ಷಾ ಸಮಿತಿ ಬುಧವಾರ ಆಯೋಜಿಸಿದ್ದ ಹಿಂದು ಜನಜಾಗೃತಿ ಸಮಾವೇಶದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಇತ್ತೀಚೆಗೆ ಇಲ್ಲಿ ಹಿಂದು ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿದ ಆರೋಪಿಗಳನ್ನು ಶಿಕ್ಷಿಸದೆ ಪೊಲೀಸರು ನಿರ್ಲಕ್ಷ್ಯ ತಾಳಿದ್ದಾರೆ. ಆರೋಪಿಗಳನ್ನು ಕೂಡಲೇ ಬಂಧಿಸಿ ಶಿಕ್ಷಿಸದಿದ್ದಲ್ಲಿ ಆಯುಧ ಹಿಡಿದು ನಾವೇ ಅವರನ್ನು ಶಿಕ್ಷಿಸಬೇಕಾಗುತ್ತದೆ ಎಂದು ಆಕ್ರೋಶದಿಂದ ಹೇಳಿದರು.

ಕೊಡಗಿನ 35 ನಾಡುಗಳಲ್ಲಿ ನಾಪೋಕ್ಲು ಅತ್ಯಂತ ಶ್ರೇಷ್ಠ ನಾಡು ಇಗ್ಗುತಪ್ಪ ದೇವರ ನೆಲೆಯಾದ ನಾಲ್ಕು ನಾಡಿನಲ್ಲಿ ಹಿಂದುಗಳು ಸಂಘಟಿತರಾಗಬೇಕಾದ ಅವಶ್ಯಕತೆ ಇದೆ. ಹಿಂದೂ ಸಮಾಜದಲ್ಲಿ ಅನೇಕ ಜಾತಿ ಮತ, ಪಂಥಗಳಿದ್ದು ಸಮಾಜದೊಳಗಡೆ ಜಾತಿ ಹೆಸರಿನಲ್ಲಿ ವಿಷ ಬೀಜ ಬಿತ್ತುವ ಕೆಲಸ ಆಗುತ್ತಿದೆ, ಸಮಾಜದಲ್ಲಿ ಬೆಂಕಿ ಹುಟ್ಟದ ಹಾಗೆ ಜಾಗೃತಿ ಮೂಡಿಸಬೇಕಾಗಿದೆ ಎಂದರು

ನಾಪೋಕ್ಲು ಸುರಕ್ಷಾ ಸಮಿತಿ ಸಂಚಾಲಕ ಕರಮಂಡ ಲವ ನಾಣಯ್ಯ ಮಾತನಾಡಿ, ನಾಲ್ಕುನಾಡಿನಲ್ಲಿ ಹಿಂದೂ ಸಮಾಜಕ್ಕೆ ಯಾರಿಂದಲೂ ಬೆದರಿಕೆ ಬರಬಾರದು. ಸಮಾಜದ ಮಂದಿ ಬದುಕಲು ಭಯ ಮುಕ್ತ ವಾತಾವರಣ ನಿರ್ಮಾಣವಾಗಬೇಕು. ಇಲ್ಲಿನ ಪೊಲೀಸ್ ಠಾಣೆಗೆ ಹೆಚ್ಚಿನ ಸಿಬ್ಬಂದಿಗಳನ್ನು ನೇಮಕ ಮಾಡಿ ಜನರು ಭಯಮುಕ್ತ ವಾತಾವರಣದಿಂದ ಬದುಕುವಂತಾಗಬೇಕು ಎಂದರು.

ವೇದಿಕೆಯಲ್ಲಿ ಕೊಕ್ಕೇರ ಅಜಿತ್, ರಾಧಾಕೃಷ್ಣ ರೈ, ಪ್ರತಿಪ ಬಿ.ಎಂ, ವೇದಿಕೆಯಲ್ಲಿ ಉಪಸ್ಥಿತರಿದ್ದು. ಮಾಜಿ ಶಾಸಕ ಕೆ.ಜಿ ಬೋಪಯ್ಯ, ರವಿ ಕುಶಾಲಪ್ಪ, ರಾಬಿನ್ ದೇವಯ್ಯ, ಚಲನ್ ಮತ್ತಿತರರಿದ್ದರು.

ಶಾರ್ಟ್ ಸರ್ಕ್ಯೂಟ್‌ನಿಂದ ಕೋಳಿ ಫಾರಂಗೆ ಬೆಂಕಿ



ಚಾಮರಾಜನಗರ: ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಕೋಳಿ ಫಾರಂಗೆ ಬೆಂಕಿ ಬಿದ್ದ ಪರಿಣಾಮ 4 ಸಾವಿರಕ್ಕೂ ಹೆಚ್ಚು ಕೋಳಿ, ಒಂದು ಶೆಡ್ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿರುವ ಘಟನೆ ತಾಲೂಕಿನ ದೇವರಾಜಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಪ್ರದೀಪ್‌ಕುಮಾರ್ ಎಂಬುವರು ತಮ್ಮ ಜಮೀನಿನಲ್ಲಿ ಎರಡು ಶೆಡ್‌ಗಳನ್ನು ನಿರ್ಮಿಸಿ ಕೋಳಿಫಾರಂ ಮಾಡಿ 7,500ಕ್ಕೂ ಹೆಚ್ಚು ಕೋಳಿಗಳನ್ನು ಸಾಕಾಣಿಕೆ ಮಾಡುತ್ತಿದ್ದರು. ಮಂಗಳವಾರ ರಾತ್ರಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಒಂದು ಶೆಡ್‌ಗೆ ಬೆಂಕಿ ತಗುಲಿದೆ. ಕೂಡಲೇ ಅಗ್ನಿಶಾಮಕ ದಳಕ್ಕೆ ಕರೆ ಮಾಡಿ ವಿಷಯ ತಿಳಿಸಿದ್ದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ನಂದಿಸಿ ಉಂಟಾಗುತ್ತಿದ್ದ ಹೆಚ್ಚಿನ ಅನಾಹುತವನ್ನು ತಪ್ಪಿಸಿದ್ದಾರೆ. ಬೆಂಕಿಯಿಂದಾಗಿ ಶೆಡ್‌ನಲ್ಲಿದ್ದ ಸುಮಾರು 4 ಸಾವಿರ ಕೋಳಿಗಳು ಸುಟ್ಟು ಕರಕಲಾಗಿದ್ದು, ಶೆಡ್ ಕೂಡ ಸಂಪೂರ್ಣವಾಗಿ ಸುಟ್ಟುಹೋಗಿದೆ. ಘಟನೆಯಿಂದ ಸುಮಾರು 25 ರಿಂದ 27 ಲಕ್ಷ ರೂ. ನಷ್ಟವಾಗಿದೆ ಎಂದು ಕೋಳಿ ಸಾಕಾಣಿಕೆದಾರ ಪ್ರದೀಪ್ ಕುಮಾರ್ ಅಳಲು ತೋಡಿಕೊಂಡಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಪೂರ್ವ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಪ್ರಕರಣ ದಾಖಲಿಕೊಂಡಿದ್ದಾರೆ.

ಹೊಂಡರಬಾಳುವಿನಲ್ಲಿ ವೈಭವದ ರಥೋತ್ಸವ



ಹೊಂಡರಬಾಳು ಗ್ರಾಮದಲ್ಲಿ ಶ್ರೀ ಗುರು ಸಿದ್ದೇಶ್ವರ ಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ನಡೆಯಿತು.

ಕೊಳ್ಳೇಗಾಲ: ತಾಲೂಕಿನ ಹೊಂಡರಬಾಳು ಗ್ರಾಮದಲ್ಲಿ ಬುಧವಾರ ಶ್ರೀ ಗುರು ಸಿದ್ದೇಶ್ವರ ಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಗ್ರಾಮದ ಶಂಕಿನ ಮಠದ ಶ್ರೀ ನೀಲಕಮಠಶಿವಚಾರ್ಯರ ನೇತೃತ್ವದಲ್ಲಿ ಶ್ರೀ ಸಿದ್ದೇಶ್ವರಸ್ವಾಮಿ ಹಾಗೂ ಅಡವಿ ತಾಯಿ ಸತ್ತಿಗೆ ರಥೋತ್ಸವ ಮಧ್ಯಾಹ್ನ 2.45ರಲ್ಲಿ ನಡೆಯಿತು.

ಬುಧವಾರ ಉತ್ಸವಮೂರ್ತಿ, ಅಡವಿ ತಾಯಿ ಸತ್ತಿಗೆ ಹಾಗೂ ಹೊಂಡರಬಾಳು ಗ್ರಾಮದ ಬಸವನನ್ನು ಹೂ ಹೊಂಬಾಳೆ ಮೂಲಕ ಕರೆತಂದು ಸಿದ್ಧವಾಗಿದ್ದ ರಥದ ಸುತ್ತಲೂ ಮೂರು ಪ್ರದಕ್ಷಿಣೆ ಹಾಕಿ ನಂತರ ರಥದ ಮೇಲೆ ಕೂರಿಸಿ ಬಳಿಕ ರಥವನ್ನು ಭಕ್ತರು ಹರ್ಷೋದ್ಗಾರ ಹಾಗೂ ಮಂಗಳ ವಾದ್ಯದ ಸದ್ದಿನೊಂದಿಗೆ ಎಳೆದರು. ರಥೋತ್ಸವದ ವೇಳೆ ನೆರೆದಿದ್ದ ಭಕ್ತರು ಹಣ್ಣು ಜವನ ಎಸೆದು ಭಕ್ತಿ ಸಮರ್ಪಣೆ ಮಾಡಿದರು.

ಪ್ಲಾಸ್ಟಿಕ್ ಮುಕ್ತ ಚಾಮರಾಜನಗರ



ಚಾಮರಾಜನಗರ: ಚಾಮರಾಜನಗರ ಪಟ್ಟಣವನ್ನು ಪ್ಲಾಸ್ಟಿಕ್ ಮುಕ್ತ ಮಾಡಲು ಕ್ರಮವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಶ್ರೀರೂಪ ತಿಳಿಸಿದರು.

ಜಿಲ್ಲಾಡಳಿತ, ನಗರಸಭೆ, ರೋಟರಿ ಸಿಲ್ಕ್ ಸಿಟಿ, ರೋಟರಿ ಸಂಸ್ಥೆ, ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಶ್ರೀಚಾಮರಾಜೇಶ್ವರ ಉದ್ಯಾನವನದ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡು ಬಳಿಕ ಮಾತನಾಡಿದರು.

ನಗರಸಭೆಯ ಪೌರಾಯುಕ್ತರ ಅಧ್ಯಕ್ಷತೆಯಲ್ಲಿ ವರ್ತಕರ ಸಭೆ ಕರೆದು ಪ್ಲಾಸ್ಟಿಕ್ ಬಳಸದಂತೆ ಮಾರಾಟ ಮಾಡದಂತೆ ಸೂಚಿಸಲಾಗುವುದು. ಒಂದು ವೇಳೆ ಸೂಚನೆ ಉಲ್ಲಂಘಿಸಿದರೆ ದಂಡ ವಿಧಿಸುವ ಮೂಲಕ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದರು.

ನಗರ ವ್ಯಾಪ್ತಿಯಲ್ಲಿರುವ ಪಾರ್ಕ್‌ಗಳ ಅಭಿವೃದ್ಧಿಗೆ ಕ್ರಮವಹಿಸಲಾಗುವುದು. ಈಗಾಗಲೇ ಪಟ್ಟಮ್ಮಣಿ ಪಾರ್ಕ್ ಸ್ವಚ್ಛಗೊಳಿಸಿ ಅಭಿವೃದ್ಧಿಪಡಿಸಲಾಗುತ್ತಿದ್ದು ಇದೇ ಮಾದರಿಯಲ್ಲಿ ಶ್ರೀಚಾಮರಾಜೇಶ್ವರ ಪಾರ್ಕ್ ಹಾಗೂ ಅಂಬೇಡ್ಕರ್ ಪಾರ್ಕ್ ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದರು.

ಸಾರ್ವಜನಿಕರು ಕಸವನ್ನು ಎಲ್ಲೆಂದರಲ್ಲಿ ಬಿಸಾಡದೇ ಡಸ್ಟ್‌ಬಿನ್‌ಗಳಲ್ಲಿ ಹಾಕಬೇಕು. ಅಲ್ಲದೇ ಪ್ಲಾಸ್ಟಿಕ್ ಬಳಕೆ ಮಾಡದೇ ಬಟ್ಟೆ ಬ್ಯಾಗ್‌ಗಳನ್ನು ಉಪಯೋಗಿಸಬೇಕು. ಪಾರ್ಕ್‌ಗಳ ಅಭಿವೃದ್ಧಿಯಲ್ಲಿ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ಪರಶುರಾಮ ಛಲವಾದಿ, ರೂಪಾ, ಗಿರೀಶ್, ಚಂದ್ರು ಇತರರಿದ್ದರು.

ಮತ್ತಿಗೋಡು ಶಿಬಿರಕ್ಕೆ 'ಗಜೇಂದ್ರ' ಆನೆ ಸ್ಥಳಾಂತರ



ಗಜೇಂದ್ರ ಆನೆಯನ್ನು ಬೂದಿಪಡಗ ಆನೆ ಶಿಬಿರದಿಂದ ಮತ್ತಿಗೋಡು ಆನೆ ಶಿಬಿರಕ್ಕೆ ಸ್ಥಳಾಂತರಿಸಲಾಯಿತು

ಚಾಮರಾಜನಗರ, ಏ.1– ವಿಶ್ವ ವಿಖ್ಯಾತ ಮೈಸೂರು ದಸರಾದಲ್ಲಿ ಹಲವಾರು ಬಾರಿ ಭಾಗವಹಿಸಿದ್ದ ಗಜೇಂದ್ರ ಆನೆಯನ್ನು ತಾಲೂಕಿನ ಬೂದಿಪಡಗ ಆನೆ ಶಿಬಿರದಿಂದ ಕೊಡಗು ಜಿಲ್ಲೆಯ ನಾಗರಹೊಳೆಯ ಮತ್ತಿಗೋಡು ಆನೆ ಶಿಬಿರಕ್ಕೆ ಸ್ಥಳಾಂತರಿಸಲಾಯಿತು.

ಸುಮಾರು 75 ವರ್ಷ ವಯೋಮಾನದ ಗಜೇಂದ್ರ ಆನೆ ಕೆ.ಗುಡಿ ಹಾಗೂ ಬೂದಿಪಡಗ ಶಿಬಿರದಲ್ಲಿ ಹಲವಾರು ವರ್ಷಗಳಿಂದ ಒಂಟಿಯಾಗಿದ್ದ. ವಯಸ್ಸಾಗಿದ್ದರಿಂದ ದೈಹಿಕ ಸಾಮರ್ಥ್ಯ ಕೂಡ ಕ್ಷೀಣಿಸಿತ್ತು. ಕಾಡಿಗೆ ನಿತ್ಯವೂ ಮೇಯಲು ಬಿಟ್ಟ ಸಂದರ್ಭದಲ್ಲಿ ಬಲಿಷ್ಠ ಕಾಡಾನೆ ಗಳಿಂದ ಗಜೇಂದ್ರನಿಗೆ ಅಪಾಯ ಎದುರಾಗುವ ಹಿನ್ನೆಲೆ ಮತ್ತಿಗೋಡು ಇಲ್ಲವೇ ಬೇರೆ ಶಿಬಿರಕ್ಕೆ ರವಾನಿಸಬೇಕು ಎಂದು ಸಾಮಾಜಿಕ ಜಾಲತಾಣದಲ್ಲಿ 'ಗಜೇಂದ್ರ ಆನೆ ಸೇವ್ ಮಿ' ಎಂಬ ಅಭಿಯಾನ ಶುರುವಾಗಿತ್ತು.

ಈ ಹಿನ್ನೆಲೆಯಲ್ಲಿ ಆನೆಯನ್ನು ಮತ್ತಿಗೋಡು ಶಿಬಿರಕ್ಕೆ ಕಳುಹಿಸಲು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ್ ಖಂಡ್ರೆ ಸೂಚಿಸಿದರು. ಸಚಿವರ ಸೂಚನೆ ಮೇರೆಗೆ ಗಜೇಂದ್ರನಿಗೆ ಅರಣ್ಯ ಇಲಾಖೆ ಸಿಬ್ಬಂದಿ ಪೂಜೆ ಸಲ್ಲಿಸಿ, ಇಲಾಖೆ ವಾಹನದಲ್ಲಿ ಮತ್ತಿಗೋಡು ಶಿಬಿರಕ್ಕೆ ಕಳುಹಿಸಿಕೊಟ್ಟರು. ಈ ವೇಳೆ ಸಿಬ್ಬಂದಿ ಹಾಗೂ ಗಜೇಂದ್ರನ ಅಭಿಮಾನಿಗಳು ಭಾವುಕರಾದರು.1987ರಲ್ಲಿ ಕೊಡಗಿನ ಕಟ್ಟೆಪುರ ಅರಣ್ಯ ಪ್ರದೇಶದಲ್ಲಿ ಗಜೇಂದ್ರನನ್ನು ಸೆರೆಹಿಡಿದು ಬಳಿಕ ಕೆ.ಗುಡಿ ಆನೆ ಶಿಬಿರದಲ್ಲಿ ಇರಿಸಲಾಗಿತ್ತು. ಹಲವು ಬಾರಿ ದಸರಾದಲ್ಲಿ ಈ ಆನೆ ಭಾಗಿಯಾಗಿದ್ದು, ತುಂಬಾ ಸೌಮ್ಯ ಎಂದೇ ಹೆಸರುವಾಸಿಯಾಗಿತ್ತು. ದಸರಾ ವೇಳೆ 'ಪಟ್ಟದ ಆನೆ' ಎಂದು ಕರೆಯಲಾಗಿತ್ತು.

2015ರ ಜೂನ್ 16ರ ರಾತ್ರಿ ಮಸ್ತಿಯಲ್ಲಿದ್ದ ಗಜೇಂದ್ರ ತನ್ನ ಸಹ ಆನೆ ಶ್ರೀರಾಮನನ್ನು ತಿವಿದು ಕೊಂದಿದ್ದಲ್ಲದೇ, ತನ್ನ ಮಾವುತ ಗಣಪತಿ(50)ಯನ್ನೂ ತುಳಿದು ಸಾಯಿಸಿತ್ತು. ಸದ್ಯ ಆನೆಯ ಆರೋಗ್ಯದ ದೃಷ್ಟಿಯಿಂದ ಮತ್ತಿಗೋಡು ಶಿಬಿರಕ್ಕೆ ಸ್ಥಳಾಂತರಿಸಲಾಗಿದೆ.

6ನೇ ತರಗತಿ ಪ್ರವೇಶಕ್ಕೆ ರಾಜ್ಯ ಮಟ್ಟದ ಸಾಮಾನ್ಯ ಪ್ರವೇಶ ಪರೀಕ್ಷೆ

ಚಾಮರಾಜನಗರ, ಏ.1 – ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2026–27ನೇ ಸಾಲಿನಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ರಾಜ್ಯಮಟ್ಟದ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಏಪ್ರಿಲ್ 12ರಂದು ನಡೆಸಲಾಗುವುದು.

ಗುಂಡ್ಲುಪೇಟೆ ಪಟ್ಟಣದ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಕೊಳ್ಳೇಗಾಲದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಿದ ಅರ್ಹ ವಿದ್ಯಾರ್ಥಿಗಳು ಏಪ್ರಿಲ್ 12ರಂದು ಪರೀಕ್ಷೆಗೆ ಹಾಜರಾಗಬೇಕೆಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಸ್ಕಾರ ಕಲಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವ



ಗುಂಡ್ಲುಪೇಟೆ: ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸಂಸ್ಕಾರವನ್ನು ಕಲಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ತರವಾದದ್ದು ಎಂದು ಮಾಜಿ ಸಂಸದ ಎ. ಸಿದ್ದರಾಜು ತಿಳಿಸಿದರು.

ತಾಲೂಕಿನ ಬೊಮ್ಮಲಾಪುರ ಗ್ರಾಮದಲ್ಲಿರುವ ಗೌತಮ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿದ್ದ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಳೆದ 33 ವರ್ಷಗಳಿಂದ ಸಮಾಜ ವಿಜ್ಞಾನ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕೆ.ರಾಜು ಅವರು ವಯೋನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಅವರನ್ನು ಸಂಸ್ಥೆ ವತಿಯಿಂದ ಆತ್ಮೀಯವಾಗಿ ಬಿಳ್ಕೊಡುಗೆ ನೀಡಿ ಸನ್ಮಾನಿಸಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣವೇ ದೊಡ್ಡ ಶಕ್ತಿಯಾಗಿದೆ ಎಂದರು.

ಸಂಸ್ಥೆಯ ಕಾರ್ಯದರ್ಶಿಯವರಾದ ಕೆ.ಸಿ.ಸಿದ್ದರಾಜು ಮತ್ತು ಸಂಸ್ಥೆಯ ಜಂಟಿ ನಿರ್ದೇಶಕರಾದ ಬಿ.ಕೆ. ಬೊಮ್ಮಯ್ಯ, ಪ್ರೌಢಶಾಲಾ ಮುಖ್ಯ ಶಿಕ್ಷಕ ಎಸ್. ವೀರಭದ್ರಯ್ಯ, ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಹಾಜರಿದ್ದರು.

ಡಾ.ಶಿವಕುಮಾರ ಸ್ವಾಮೀಜಿ ಜನ್ಮ ದಿನದ ಅಂಗವಾಗಿ ದಾಸೋಹ



ಚಾಮರಾಜನಗರ: ತುಮಕೂರಿನ ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರ 119ನೇ ವರ್ಷದ ಜನ್ಮದಿನದ ಅಂಗವಾಗಿ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಇಂಚರ ಹೋಟೆಲ್‌ನಲ್ಲಿ ಸಾರ್ವಜನಿಕರಿಗೆ ಉಚಿತ ದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಹೋಟೆಲ್‌ನಲ್ಲಿ ಸಿದ್ದಗಂಗಾ ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ನಂತರ ದಾಸೋಹಕ್ಕೆ ಚಾಲನೆ ನೀಡಲಾಯಿತು. ಬೆಳಗ್ಗೆಯಿಂದ ಸಂಜೆವರೆಗೆ ತಿಂಡಿ, ಊಟ, ಪಾನಕ, ಮಜ್ಜಿಗೆ ವಿತರಿಸಲಾಯಿತು.

ಈ ವೇಳೆ ಹೋಟೆಲ್ ಮಾಲೀಕ ಕೆ.ಜಿ. ಮಂಜುನಾಥ ಮಾತನಾಡಿ, ಸಿದ್ದಗಂಗಾ ಶ್ರೀಗಳ ಹುಟ್ಟುಹಬ್ಬದ ಅಂಗವಾಗಿ ಪ್ರತಿ ವರ್ಷವೂ ಉಚಿತವಾಗಿ ಊಟ, ತಿಂಡಿ ವ್ಯವಸ್ಥೆ ಮಾಡುತ್ತಿದ್ದು, ಅದರಂತೆ ಈ ಬಾರಿಯು 1500 ಮಂದಿಗೆ ಬೆಳಗ್ಗೆ ತಿಂಡಿ, 3500 ಮಂದಿಗೆ ಮಧ್ಯಾಹ್ನ ಊಟ ವ್ಯವಸ್ಥೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಟಿ.ಜವರೇಗೌಡ, ಉಪತಹಸೀಲ್ದಾರ್ ರಂಗರಾಜು, ಮುಖಂಡರಾದ ಬೇಡಗುಳಿ ವೀರಭದ್ರಸ್ವಾಮಿ, ಹೊನ್ನವೋಟಿ ಸುಂದ್ರಣ್ಣ, ಲಿಂಗರಾಜುಮೂರ್ತಿ, ಯೋಗಪ್ರಕಾಶ್, ವಿಶ್ವ, ಶಿವಮಲ್ಲಪ್ಪ, ಇಂಚರ ಗ್ರೂಪ್‌ನ ಈಶ್ವರ್, ರಕ್ಷಿತ್, ನಾಗರತ್ನಮ್ಮ, ಉಮಾ ಮಂಜುನಾಥ್, ರಾಧಾಕೃಷ್ಣ, ಕಾರ್ ಸಿದ್ದರಾಜು ಇತರರಿದ್ದರು.

ಸಾಧು ಪರಂಪರೆಯ ಆಧ್ಯಾತ್ಮಿಕತೆಯಲ್ಲಿ ಶಿವಕುಮಾರ ಶ್ರೀಗಳು ಮೇಲ್ಪಂಕ್ತಿಯಲ್ಲಿರುತ್ತಾರೆ

ರಾಷ್ಟ್ರಪತಿ ದ್ರೌಪದಿ ಮುರ್ಮು ಸ್ಮರಣೆ



ಶಿವಕುಮಾರ ಶ್ರೀಗಳ 119ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಇತರ ಗಣ್ಯರು ಭಾಗವಹಿಸಿದ್ದರು.


ತುಮಕೂರು: ದೇಶದ ಸಾಧು ಪರಂಪರೆಯ ಆಧ್ಯಾತ್ಮಿಕತೆಯಲ್ಲಿ ಶಿವಕುಮಾರ ಶ್ರೀಗಳು ಮೇಲ್ಪಂಕ್ತಿಯಲ್ಲಿದ್ದಾರೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ತಿಳಿಸಿದರು.

ಭಕ್ತರಪಾಲಿನ ನಡೆದಾಡುವ ದೇವರು, ಕಾಯಕಯೋಗಿ ಶಿವೈಕ್ಯ ಶಿವಕುಮಾರ ಶ್ರೀಗಳ 119ನೇ ಜನ್ಮದಿನೋತ್ಸವ ಬುಧವಾರ ಅರ್ಥಪೂರ್ಣವಾಗಿ ನಡೆಯಿತು. ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಶಿವಕುಮಾರ ಶ್ರೀಗಳ ಗದ್ದಿಗೆಗೆ ವಿಶೇಷ ಪೂಜೆ ಸಲ್ಲಿಸಿದರು. ಸಿದ್ದಗಂಗಾ ಮಠಾಧ್ಯಕ್ಷ ಸಿದ್ದಲಿಂಗ ಮಹಾಸ್ವಾಮಿಗಳ ನೇತೃತ್ವದಲ್ಲಿ ಮಂತ್ರ ಘೋಷಗಳೊಂದಿಗೆ ಗದ್ದಿಗೆಗೆ ಪೂಜಾ ಕೈಂಕರ್ಯ ನೆರವೇರಿಸಲಾಯಿತು.

ಬೆಳಿಗ್ಗೆ 10.30ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶ್ರೀಮಠಕ್ಕೆ ಆಗಮಿಸಿದರು. ಆರಂಭದಲ್ಲಿ ಶಿವಕುಮಾರ ಶ್ರೀಗಳ ಗದ್ದಿಗೆಗೆ ಪೂಜೆ ಸಲ್ಲಿಸಿದರು. ಬಳಿಕ ಶ್ರೀಮಠದ ಮಕ್ಕಳ ಜೊತೆ ಕೊಂಚ ಸಮಯ ಕಳೆದರು. ತದನಂತರ ಉದ್ದಾನ ಶಿವಯೋಗಿಗಳ ವೇದಿಕೆಯಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಭಾಗಿಯಾದರು. ಈ ವೇಳೆ ರಾಷ್ಟ್ರಪತಿ ಮುರ್ಮು ಅವರು ಮಾತನಾಡಿ, ಓಂ ನಮಃ ಶಿವಾಯ ಎಂದು ಮೂರು ಬಾರಿ ಉದ್ಘೋಷಿಸಿದರು. ಸಹೋದರ-ಸಹೋದರಿಯರೇ ನಿಮಗೆ ಸಪ್ರೇಮ ವಂದನೆಗಳು ಎಂದು ಕನ್ನಡದಲ್ಲಿ ತಮ್ಮ ಮಾತುಗಳನ್ನು ಆರಂಭಿಸಿದರು. ಸಿದ್ದಗಂಗಾ ಮಠಕ್ಕೆ ಬಂದು ಶಿವಕುಮಾರ ಶ್ರೀಗಳ ಗದ್ದಿಗೆ ದರ್ಶನ ಪಡೆದಿದ್ದು ನನಗೆ ಖುಷಿಯಾಗಿದೆ. ಶ್ರೀಮಠದ ಮಕ್ಕಳನ್ನು ಮಾತನಾಡಿಸಿದ್ದೂ ತುಂಬಾ ಸಂತೋಷ ವಾಗಿದೆ. ಶ್ರೀಗಳು ದೈಹಿಕವಾಗಿ ಇಲ್ಲದೇ ಇದ್ದರೂ ಅವರ ಸೇವೆ ನಮ್ಮ ನಡುವೆ ಇದೆ. ಈ ದೇಶದ ಸಾಧು ಪರಂಪರೆಯ ಆಧ್ಯಾತ್ಮಿಕತೆಯಲ್ಲಿ ಶಿವಕುಮಾರ ಶ್ರೀಗಳು ಮೇಲ್ಪಂಕ್ತಿಯಲ್ಲಿ ಇರುತ್ತಾರೆ ಎಂದರು.

ಇದೇ ವೇಳೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅಮು ಮಾತಾನಾಡಿದರು. ಸಿದ್ದಗಂಗಾ ಮಠಾಧ್ಯಕ್ಷ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು, ಕೇಂದ್ರ ಸಚಿವ ವಿ.ಸೋಮಣ್ಣ, ರಾಜ್ಯಪಾಲ ಗೆಲ್ಹೋಟ್, ಗೃಹ ಸಚಿವ ಜಿ.ಪರಮೇಶ್ವರ್, ಸಚಿವರಾದ ಎಂ.ಬಿ ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್ ವೇದಿಕೆ ಮೇಲೆ ಇದ್ದರು.

ಶ್ರೀ ಶಿವಕುಮಾರ ಸ್ವಾಮೀಜಿ ಜಯಂತಿ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇಲವಾಲ ಗ್ರಾಮದಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶಾಸಕರಾದ ಜಿ.ಟಿ.ದೇವೇಗೌಡರು ಮೆರವಣಿಗೆಗೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಕುದೇರು ಮಠದ ಶ್ರೀ ಹಿಮ್ಮಡಿ ಗುರುಲಿಂಗ ಸ್ವಾಮೀಜಿ, ಚಿಲುಕವಾಡಿ ಶ್ರೀ ಗುರುರಾಯ ಯೋಗೇಶ್ವರ ಮಠದ ಶ್ರೀ ಹಿಮ್ಮಡಿ ಗುರುಲಿಂಗಸ್ವಾಮಿ, ಗ್ರಾಮಸ್ಥರು, ಮುಖಂಡರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು..

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಡೆವಲಪರ್ಸ್ & ಪ್ರಮೋಟರ್ಸ್ ಆಫೀಸ್‌ನಲ್ಲಿ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ ಕಂಪ್ಯೂಟರ್ ತಿಳಿದಿರಬೇಕು
9343361548

ಬೇಕಾಗಿದ್ದಾರೆ
ಫುಟ್‌ವೇರ್ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಸೇಲ್ಸ್‌ಮೆನ್ಸ್ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.
TIME : 11 AM - 9 PM
8762333676

ಛತ್ರ ಖಾಲಿ ಇದೆ
ಮೇ: 24, 28. ಜುಲೈ: 01, 02, 03, 05, 06, 08, 09, 10. ಜೂನ್: 18, 19, 21, 22, 24, 25, 26. ಬಸಂತ್ ಕನ್ವೆನ್ಷನ್ ಸೆಂಟರ್ ಜೆ.ಪಿ. ನಗರ, ಮೈಸೂರು
Contact
7483577721
9481160172

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

WANTED
ಹೆಲ್ಪರ್ಸ್ ಹುಡುಗರು ಬೇಕಾಗಿದ್ದಾರೆ
ದ್ವಿಚಕ್ರ ವಾಹನ ಹೊಂದಿರುವವರಿಗೆ ಆದ್ಯತೆ
99011 63200
97435 65907

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಮನೆ ಬಾಡಿಗೆಗೆ ಇದೆ
ಮಹಡಿಯಲ್ಲಿ 1 ಬೆಡ್ ರೂಂ ಮನೆ ಮತ್ತು 2 ಬೆಡ್ ರೂಂನ ಮನೆ, ಶ್ರೀರಾಂಪುರ ಮುಖ್ಯ ರಸ್ತೆ, ವಿವೇಕಾನಂದ ಸರ್ಕಲ್ ಬಳಿ, ವಾಣಿಜ್ಯೋದ್ದೇಶಕ್ಕೂ ಸೂಕ್ತವಾಗಿದೆ.
9448047419

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, Kuvempunagar, Mysuru
MYSURU 9591311161 BANGALORE 9901910161

MYSURU RETINA CARE STAFF REQUIRED
[FRESHER OR EXPERIENCE]
1. OPTOMETRIST,
2. RECEPTIONIST,
3. OT STAFF,
CONTACT NUMBER
7338369364/ 0821-2543244
#22A, SRI GURU KRUPAM, 1ST FLOOR, NIVEDITHA NAGAR, MYSORE-570022

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು ಸಂಬಳ : 18,000/-(8 hours, 26 ದಿನಗಳು) ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9880727819

SITE FOR SALE
30x40 W/F
Railway Layout, Near RT Nagar
Mob: 9740088990

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ-ನೀಮ್
#203, ಬನ್ನಿಮಂಟಪ, ಮೈಸೂರು-570015
80888-87802

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064

WANTED TEACHERS
Nursery -3 nos
High school English -2
High school math -2
Science -2, Date: 4th April
Venue: Wisdom school, Nanjangud, K.R. Nagar
8150857937

FOR SALE
1. 2 BHK Apartment @ KRS Rd, Metagalli
2.2x30 G+2 House@ Arvind Ngr
3. 30x40 House, 20x40, 30x50 40x60 Sites Near JP Nagar
4. 23x35 G+1 House, Srirampura 20x30 Site @ VRL Lyt, HD Kote Rd
5. 3 BHK, New House @40 feet Road, Near Harividyalaya, Bogadi
PRAKRUTHI PROPERTIES
95386 90359, 90359 90359

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಕೆಲಸ ಡೇಟಾ ಎಂಟ್ರಿ, ಪ್ಯಾಕಿಂಗ್ ಕೆಲಸಗಳಿಗೆ ನೇರ ಆಯ್ಕೆ 20,000 ದಿಂದ ಕೊರಿಯರ್ ಲಭ್ಯವಿದೆ.
9964322833, 7996021216

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷರು) ಇನ್ಫೋಸಿಸ್ ಹತ್ತಿರ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ದಟ್ಟಗಳ್ಳಿ, ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಕೂರ್ಗಳ್ಳಿ, hootgalli, ವಿಜಯನಗರ 3rd stage, ಗೋಕುಲಂ ಹಾಗೂ ಮೈಸೂರು ಸುತ್ತ ಮುತ್ತ ಬೇಕಾಗಿದ್ದಾರೆ
83174 75912

ನಿವೇಶನ ಮಾರಾಟಕ್ಕಿದೆ
30X40, ಪಶ್ಚಿಮ ದಿಕ್ಕು, ಸೈಟ್ ಸಂಖ್ಯೆ 50, ಪ್ರಕೃತಿ ಲೇಔಟ್, ಎಚ್.ಡಿ. ಕೋಟೆ ರಸ್ತೆ, ಕಾಮಾಕ್ಷಿ ಆಸ್ಪತ್ರೆ ಹತ್ತಿರ, ಮೈಸೂರು. ರಾಗಿ ಡಿ-ಸ್ಟೋನ್ ಯಂತ್ರ ಮಾರಾಟಕ್ಕಿದೆ.
9880808458

SITE FOR SALE
50 Cents Near Ponnampet, Kodagu (Broker Excuse)
Contact:
9448540959

ಬೇಕಾಗಿದ್ದಾರೆ
ಹೋಟೆಲ್‌ವೊಂದಕ್ಕೆ ಬಿಲ್ಲಿಂಗ್ ಮತ್ತು ಅಕೌಂಟ್ ನಿರ್ವಹಣೆಗೆ ಸಿಬ್ಬಂದಿ ಬೇಕಾಗಿದ್ದಾರೆ.
ಸಂಪರ್ಕಿಸಿ
9986669892
6362610799

ಆದಿ ಕರ್ನಾಟಕ ವಧು-ವರರು
8th, SSLC, PUC, BA, B.Sc, B.Com MA, Msc. MBA ಇಂಜಿನಿಯರ್, ವಧು-ವರರನೊಂದಣಿಗೆ ಕರೆಮಾಡಿ
91647 43059
90355 65773

ಕೆಲಸಕ್ಕೆ ಹುಡುಗ ಹಾಗೂ ಹುಡುಗಿಯರು ಬೇಕಾಗಿದ್ದಾರೆ
Walk-in-interview ವಿದ್ಯಾರ್ಹತೆ SSLC, PUC Pass/Fail ಈ ಕೆಳಕಂಡ ವಿಳಾಸದಲ್ಲಿ ಇಂಟರವ್ಯೂಗೆ. ಹಾಜರಾಗಬೇಕು ವಿಳಾಸ : ವಿನಾಯಕ ಅಸೋಸಿಯೇಟ್ಸ್, 1261,1261/1, New No. D 26 ದೇಸಾಯಿ ಎಂಪೈರ್ 2ನೇ ಮಹಡಿ, ನಾರಾಯಣ ಶಾಸ್ತ್ರೀ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು-570001 ಸಮಯ:- ಬೆಳಗ್ಗೆ 10 ರಿಂದ ರಾತ್ರಿ 8 ರವರೆಗೆ.
9902356631
9845156619

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಸುತ್ತ ಕೆಲಸ ನಿರ್ವಹಿಸಲು
* ಫೀಲ್ಡ್ ಆಫೀಸರ್ಸ್ (ಸೆಕ್ಯೂರಿಟಿ & ಹೌಸ್‌ಕೀಪಿಂಗ್)
* ಹೌಸ್‌ಕೀಪರ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ
9606970941
7795525899

ಗ್ರಾವಲ್, ಕೆಮ್ಮಣ್ಣು ದೊರೆಯುತ್ತದೆ
ಜಮೀನು 10 ಗುಂಟೆ, 5 ಗುಂಟೆ, 20 ಗುಂಟೆ, ಬೇಕಾದವರು, ಸಂಪರ್ಕಿಸಿ
7259407518
8310220458

WANTED
Showroom Sales staff Male/Female
7090900099

DOCUMENT LOST
I Chikkanna K, R/at No. 378, Vishwapatha Road, A & B Block, Kuvempunagar, Mysore, have lost the Original Allotment copy, Issued by MUDA, lost Near Somani College, Kuvempunagar, Mysore. Finders please contact: 9449408684

Wanted Teaching Staff
for reputed institution (Experience Preferred) for all subjects.Transport facilities available. Drop your resume through WhatsApp
Contact
8971577685
9980631121

ಸೈಟುಗಳು ಮಾರಾಟಕ್ಕಿದೆ
ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಸೈಟುಗಳು, ಮನೆಗಳು, ಅಪಾರ್ಟ್ಮೆಂಟ್‌ಗಳು, ಮಾರಾಟಕ್ಕಿದೆ. ಸಂಪರ್ಕಿಸಿ
9986948594
7259351111

ಸಣ್ಣ ಕುಟುಂಬಕ್ಕೆ ಲಿಂಗಾಯಿತ ಅಥವಾ ಬ್ರಾಹ್ಮಣ ಮಹಿಳೆಯೊಬ್ಬರು ಅಡುಗೆ ಮತ್ತು ಮನೆ ಕೆಲಸಗಳಿಗೆ ಬೇಕಾಗಿದ್ದಾರೆ
ಬೆಳಿಗ್ಗೆ 8 ರಿಂದ 12 ಘಂಟೆ ಮತ್ತು ಸಂಜೆ 5 ರಿಂದ 7, ಸಂಬಳ ತಿಂಗಳಿಗೆ 12000/-, ಆಸಕ್ತರು ಕೂಡಲೇ ಸಂಪರ್ಕಿಸಿ, ಜ್ಞಾನ ಗಂಗೋತ್ರಿ ಕಾನ್ವೆಂಟ್ ರಾಜೇಂದ್ರ ನಗರ, ಮೈಸೂರು-570007
8762205021

ಮೈಸೂರಿನಲ್ಲಿ ಉದ್ಯೋಗ
ಕುವೆಂಪುನಗರದಲ್ಲಿರುವ Pvt. Limited AWG ಕಂಪನಿಗೆ SSLC, PUC, ITI, Dip any degree etc. ಆದಂತಹ 178 ಅಭ್ಯರ್ಥಿಗಳು ನೇರ ಸಂದರ್ಶನದೊಂದಿಗೆ ನೇರ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ವಯೋಮಿತಿ : 18-30 years, ತಿಂಗಳಿಗೆ: 19,000 - 25,000 (ಉಚಿತ ಊಟ + ವಸತಿಯಿದೆ)
ರುಚಿತಾ:
9886479489
7349699460

ಅನುಭವಿ ಟೈಲರ್ ಬೇಕಾಗಿದ್ದಾರೆ
ವಿಳಾಸ : ಖುಷಿ ಬೋಟಿಕ್, ಚಿಕ್ಕಣ್ಣ ಸಂಕೀರ್ಣ, ಎಸ್‌ಬಿಐ ಮುಖ್ಯ ರಸ್ತೆ, ಹೆಬ್ಬಾಳ ಮಾರುಕಟ್ಟೆಯ ಎದುರು, ಮೈಸೂರು 570016
ಸಂಪರ್ಕಿಸಿ
6364682216
6362816853

ದಾಖಲಾತಿ ಪ್ರಾರಂಭ
ಟ್ಯಾವೊ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಕೊಡಗಹಳ್ಳಿ Admissions Open For 2026-27. ಪ್ರಿಕೆಜಿಯಿಂದ 10ನೇ ತರಗತಿವರೆಗೆ Transport facility available
Contact
9535613589

ಟ್ಯಾವೊ ಬೇಸಿಗೆ ಶಿಬಿರ
ಟ್ಯಾವೊ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಕೊಡಗಹಳ್ಳಿ, Registration Open Summer Camp 2026. Swimming Classes ಏಪ್ರಿಲ್ 15 ರಿಂದ ಮೇ 15ರ ವರೆಗೆ
Contact
9535613589

ವೆಲ್ಡರ್ ಬೇಕಾಗಿದ್ದಾರೆ
ಕೃಷಿ ಯಂತ್ರೋಪಕರಣ ತಯಾರಕ ಕಂಪನಿಯಲ್ಲಿ ವೆಲ್ಡರ್ ಬೇಕಾಗಿದ್ದಾರೆ. Fabricator required for farm machine manufacturing company.
Contact
9538994312
7899818241

ಶ್ರೀ ಅನ್ನಪೂರ್ಣೇಶ್ವರಿ ಕ್ಯಾಟರಿಂಗ್ ಸರ್ವಿಸಸ್
ಕೆಆರ್‌ಎಸ್ ರೋಡ್, ಮೇಟಗಳ್ಳಿ, ಮೈಸೂರು-570016
ಇಂಡಸ್ಟ್ರಿಯಲ್ ಕ್ಯಾಟರಿಂಗ್ ಅಡುಗೆ ಮಾಡಲು ಅಡುಗೆ ಭಟ್ಟರು & ಸಹಾಯಕರು ಬೇಕಾಗಿದ್ದಾರೆ. (ಹಗಲು ಪಾಳಿ ಕೆಲಸಕ್ಕೆ) 1) ಅಡುಗೆ ಭಟ್ಟರಿಗೆ ದಿನಕ್ಕೆ 800/- ರೂ 2) ಸಹಾಯಕರು ದಿನಕ್ಕೆ 500/- ರೂ
ಮಾಲೀಕರು - ಮಾನಸ
9964592396
9538774926

ಸತ್ಯಜ್ಯೋತಿ ಶಿಕ್ಷಣ ಸಂಸ್ಥೆ
ಮಾರ್ಬಳ್ಳಿ
ಶಾಲಾ ವಾಹನ ನಿರ್ವಹಿಸಲು ಪಾಲುದಾರರು ಬೇಕಾಗಿದ್ದಾರೆ
8147472526

ಕೆಲಸಕ್ಕೆ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ ಸಮಯ ಬೆಳಿಗ್ಗೆ 09:30 ರಿಂದ ರಾತ್ರಿ 08:30 / 09:00 ರ ವರೆಗೆ. ಸಂಪರ್ಕಿಸಿ:
Contact
9986311444
9986322444

ಸೈಟ್ ಮಾರಾಟಕ್ಕೆ
ನಂಜನಗೂಡು 30x40 ಅಳತೆಯ ಉತ್ತರ ದಿಕ್ಕಿನ ಸೈಟ್ ಮಾರಾಟಕ್ಕೆ ಗೋವಿಂದರಾಜು ಲೇಔಟ್
Contact
8105253624
9945766641

ಬೇಕಾಗಿದ್ದಾರೆ
ಮೈಸೂರಿನಲ್ಲಿ ಇರುವ ತೋಟಕ್ಕೆ ಮತ್ತು ಮನೆ ಕೆಲಸಕ್ಕೆ ಕೆಲಸಗಾರರು ಬೇಕಾಗಿದ್ದಾರೆ. ಉತ್ತಮ ವೇತನ ಮತ್ತು ವಸತಿ ಸೌಲಭ್ಯವಿದೆ. ದಂಪತಿಗಳಿಗೆ ಆದ್ಯತೆ ಕೊಡಲಾಗುವುದು. ಆಸಕ್ತರು ಸಂಪರ್ಕಿಸಿ.
Mob: 9845118555

WANTED
for Channapatna Crafts Park in Channapatna. Accountant- B.Com / BBM qualified with 2-3 years experience in overall maintenance of accounts in Tally, Billing, GST compliance and other allied work. Interested candidates may send their bio-data to
e-mail: channapatnacraftspark@gmail.com within 7 days.

ಬೇಕಾಗಿದ್ದಾರೆ
ಬ್ರಾಹ್ಮಣ ಅಡುಗೆಯವರು ಬೇಕಾಗಿದ್ದಾರೆ. ಉಚಿತ ವಸತಿ, ಒಳ್ಳೆ ಸಂಬಳ. ಮಕ್ಕಳಿದ್ದರೆ ವಿದ್ಯಾಭ್ಯಾಸ ಕೊಡಿಸಲಾಗುವುದು.
ಸಂಪರ್ಕಿಸಿ:
Mob: 98896 98826

ADMISSION OPEN
Govt. of Karnataka - Dept. of Tourism
FOOD CRAFT INSTITUTE - MYSURU
EXHIBITION GROUND, ITTIGEGUDU
HOTEL MANAGEMENT
100% Job Placements | Govt. College | 80% Practical classes
www.fcimysuru.com
Mob: 6362018821

ಸೈಟು ಬೇಕಾಗಿದೆ
ಬನ್ನೂರು ರಿಂಗ್ ರಸ್ತೆ ಮತ್ತು ಆಲನಹಳ್ಳಿ ರಿಂಗ್ ರಸ್ತೆ ಸುತ್ತಮುತ್ತ 30x40 ಅಳತೆಯ ನಿವೇಶನ ಬೇಕಾಗಿದೆ. ಮಾಲೀಕರು ನೇರವಾಗಿ ಸಂಪರ್ಕಿಸಿ, ಮಧ್ಯವರ್ತಿಗಳಿಗೆ ಅವಕಾಶವಿಲ್ಲ
7353393935

ಕಾರು ಮಾರಾಟಕ್ಕಿದೆ
ನಿಶಾನ್ ಮ್ಯಾಗ್‌ನೈಟ್ ಕಾರು 2024 ಮಾಡೆಲ್ ವರ್ಷನ್, 9200 ಕಿ.ಮೀ. ಓಡಿದೆ. ಸಿಂಗಲ್ ಓನರ್ 5 ಲಕ್ಷ 60 ಸಾವಿರಕ್ಕೆ ಮಾರಾಟಕ್ಕಿದೆ. No Bargain. Contact:
Mob: 9481317555

A leading MNC company is HIRING
Profile: Housewives, Present job holder, Insurance agent, Retired persons/NRIs/ Teachers, Self employed, Automobile distributor. Those who wants to earn extra income. Be your own boss. Benefits: Flexible working hours. Earn minimum 50k pm. Promotion. Reward and recognition. Foreign trips. Contact
Suryakala-9845543874

REQUIRED
Back Office Executives (Female)
Graphic Designer Experienced in CorelDRAW & Photoshop
IMPACT SIGNS
99011 63200
97435 65907

ಸೈಟು ಮಾರಾಟಕ್ಕಿದೆ
30x40 E/F 38 ಲಕ್ಷ ಸುವರ್ಣನಗರ, ಬೋಗಾದಿ
20x42 East North Corner,. 55 ಲಕ್ಷ ವಿಜಯನಗರ 4ನೇ ಹಂತ ಪಕ್ಕ, ಮೈಸೂರು
9845765573
9986856999

SRC MYSORE
D. Salundi village, H.D Kote road, Mysore-57008 (12kms From Mysore City)
Wanted Teachers for Montessori, Primary, Higher Primary and High school. Contact:
9741219572

ತಕ್ಷಣ ಬೇಕಾಗಿದ್ದಾರೆ
ಮೈಸೂರು ಸಿಟಿ ಏರಿಯಾದಲ್ಲಿ ಕೆಲಸ ನಿರ್ವಹಿಸಲು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯಸ್ಸು 35-55 ವರ್ಷ ಹಾಗೂ ಗನ್ ಮ್ಯಾನ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ
8884204612

ಬೇಕಾಗಿದ್ದಾರೆ
ಫ್ಲೆಕ್ಸ್ ಪ್ರಿಂಟಿಂಗ್ ಮೆಷಿನ್ ಆಪ್‌ರೇಟರ್ ಬೇಕಾಗಿದ್ದಾರೆ
ಆಕರ್ಷಕ ಸಂಬಳ - ಅನುಭವ ಬೇಕಿಲ್ಲ
Call: 8867131704

FOR SALE
40'x60' SITE in Vijayanagar 4th Stage
8884133677

COMMERCIAL SITE FOR SALE
(50x80) KUVEMPUNAGAR, CHADURANGA ROAD, (NEAR ANDOLANA CIRCLE) RS. 11,500/- SQFT.
95388-39926

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು. ಸಂಬಳ : 21,000/- ವಯೋಮಿತಿ : 50 ವರ್ಷದೊಳಗೆ ESI, PF ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819
9880727819

ಮೈಸೂರಿನ ಪೆಟ್ರೋಲ್ ಬಂಕ್‌ಗೆ ಕೆಲಸಗಾರರು ಬೇಕಾಗಿದ್ದಾರೆ
ಅರೆಕಾಲಿಕ ಅಥವಾ ಪೂರ್ಣ ಸಮಯದಲ್ಲಿ ಪೆಟ್ರೋಲ್/ಡೀಸೆಲ್/ಗ್ಯಾಸ್ ತುಂಬಿಸುವ ಕೆಲಸ ಮಾಡಲು ಹುಡುಗರು ಅಥವಾ ಹುಡುಗಿಯರು, ಕ್ಯಾಷಿಯರ್ ಜೊತೆಗೆ ಸಹಾಯಕ. ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಮತ್ತು ಮೇಲ್ಪಟ್ಟವರು
9901120389
9844002226

ಉದ್ಯೋಗಾವಕಾಶ
ವಾರ್ಡ್ ಬಾಯ್, ರೂಮ್ ಬಾಯ್ ಹೌಸ್ ಕೀಪಿಂಗ್ (ಪುರುಷ / ಮಹಿಳೆ), ಹೌಸ್ ಕೀಪಿಂಗ್ ಸೂಪರ್‌ವೈಸರ್, ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್‌ವೈಸರ್ ಕೆಲಸದ ಸ್ಥಳ: ಮೈಸೂರು & ಶ್ರೀರಂಗಪಟ್ಟಣ, ಸಂಪರ್ಕಿಸಿ
8088538037
8073553033

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

DOCUMENT LOST
JANARDHAN RAO KADAM, R/at no. 2278, 2nd A Main Road, Dattagalli 3rd Stage, Mysore have lost the Original Allotment Letter, Issued by MUDA, lost at Dattagalli to Sharadadevi Nagar, Mysore. Finders please contact: 9902731232

Arokah Designs Studio Architects & Constructions
Unique & High Quality Architectural Designs Services, Indipendent Flats, Villas, Resorts, Luxury Duplex Houses / Bungalows, Hotel & Restaurants, Schools & Colleges, Landscaping Designs. Kuvempunagar, Mysore
9187046167

Arokah Designs Studio Architects & Constructions
Unique & High Quality Architectural Designs Services, Architectural Fool Plans, Elevations, Interior Designs, Structural Drawings, Electrical & Plumbing Layouts, Kuvempunagar, Mysore
9187046167

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ಸುಂದರ ಶ್ರೀಮಂತ ವಿದ್ಯಾವಂತ ವಧುವರರು, ವಿಧುರರು ವಿಧವೆಯರು ವಿಚ್ಛೇದಿತರು, ನೇರ ಸಂಪರ್ಕಿಸಿ,
9448229184
7899625268

ಕೇರ್ ಟೇಕರ್ ತಕ್ಷಣ ಬೇಕಾಗಿದ್ದಾರೆ
(ವಯಸ್ಸಾದವರನ್ನು ನೋಡಿಕೊಳ್ಳಲು) ಅನುಭವ ಇರುವ ಇಲ್ಲದೆ ಇರುವ ಮಹಿಳೆಯರು ಹಾಗೂ ಪುರುಷರು ಬೇಕಾಗಿದ್ದಾರೆ. Day/Night/24 ಗಂಟೆ ಸೇವೆ ಮಾಡುವವರು ಸಂಪರ್ಕಿಸಿ ಸ್ಥಳ: ಮೈಸೂರು ಕೆ.ಆರ್.ನಗರ, ಮಂಡ್ಯ
8951717070

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ವಿಜೃಂಭಣೆಯ ಶ್ರೀಕಂಠೇಶ್ವರಸ್ವಾಮಿ ತೆಪ್ಪೋತ್ಸವ

ಶ್ರದ್ಧಾಭಕ್ತಿಯಿಂದ ತೆಪ್ಪೋತ್ಸವ ವೀಕ್ಷಿಸಿ ಪುನೀತರಾದ ಸಾವಿರಾರು ಭಕ್ತರು

ನಂಜನಗೂಡು, ಏ.1– ಶ್ರೀಕಂಠೇಶ್ವರಸ್ವಾಮಿಯವರ ದೊಡ್ಡ ಜಾತ್ರಾ ಮಹೋತ್ಸವದ ಅಂಗವಾಗಿ ಬುಧವಾರ ರಾತ್ರಿ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ಶ್ರೀಕಂಠೇಶ್ವರಸ್ವಾಮಿಯವರ ತೆಪ್ಪೋತ್ಸವ ಸಾವಿರಾರು ಭಕ್ತರ ಹರ್ಷೋದ್ಗಾರದ ನಡುವೆ ವಿಜೃಂಭಣೆಯಿಂದ ನೆರವೇರಿತು. ಕಪಿಲಾ ನದಿ ಸ್ನಾನಘಟ್ಟದ ಎರಡೂ ತೀರದಲ್ಲಿ ನೆರೆದಿದ್ದ ಸಾವಿರಾರು ಭಕ್ತರು ಶ್ರದ್ಧಾಭಕ್ತಿಯಿಂದ ತೆಪ್ಪೋತ್ಸವ ವೀಕ್ಷಿಸಿ ಪುನೀತರಾದರು.

ಬುಧವಾರ ಚೂರ್ಣೋತ್ಸವ ಪೂರ್ವಕ ಅವಭೃತ ತೀರ್ಥ ಸ್ನಾನದ ಪ್ರಯುಕ್ತ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಭಕ್ತರು ಮುಂಜಾನೆ 4 ಗಂಟೆಯಿಂದಲೇ ಕಪಿಲಾ ನದಿಯಲ್ಲಿ ತೀರ್ಥಸ್ನಾನ ಮಾಡಿ, ಉರುಳು ಸೇವೆ, ಧೂಪ, ದೀಪ ಸೇವೆ, ತುಪ್ಪದ ದೀಪ ಸೇವೆ ಸಲ್ಲಿಸಿ, ಬೆಳ್ಳಿ ಹರಕೆ ಪದಾರ್ಥಗಳನ್ನು ಹುಂಡಿಯಲ್ಲಿ ಹಾಕಿ ಸರತಿ ಸಾಲಿನಲ್ಲಿ ನಿಂತು ಶ್ರೀಕಂಠೇಶ್ವರನ ದರ್ಶನ ಪಡೆದು ಹರಕೆ ತೀರಿಸಿದರು.

ತೆಪ್ಪೋತ್ಸವದ ಅಂಗವಾಗಿ ದೇವಾಲಯದಲ್ಲಿ ಮುಂಜಾನೆಯಿಂದಲೇ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಮಹಾ ಮಂಗಳಾರತಿ ಬಳಿಕ ದೇವರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ರಾತ್ರಿ 7 ಗಂಟೆಗೆ ದೇವಾಲಯದಿಂದ ಉತ್ಸವ ಮೂರ್ತಿಯನ್ನು ಮಂಗಳ ವಾದ್ಯದೊಡನೆ ಮುತ್ತಿನ ಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ಕಪಿಲಾ ನದಿ ದಡದಲ್ಲಿನ ಶಾಸ್ತ್ರ ಮಂಟಪಕ್ಕೆ ಕರೆ ತರಲಾಯಿತು. ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ಹಾಗೂ ಅರ್ಚಕ ವೃಂದ ಶ್ರೀಕಂಠೇಶ್ವರಸ್ವಾಮಿಯವರ ಉತ್ಸವ ಮೂರ್ತಿಯನ್ನು ಶಾಸ್ತ್ರ ಮಂಟಪದಲ್ಲಿ ಇರಿಸಿ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿದ ನಂತರ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಪಾರ್ವತಿ ಸಮೇತ ಶ್ರೀಕಂಠೇಶ್ವರಸ್ವಾಮಿಯವರ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು.


ಶ್ರೀಕಂಠೇಶ್ವರಸ್ವಾಮಿಯವರ ತೆಪ್ಪೋತ್ಸವ ವಿಜೃಂಭಣೆಯಿಂದ ನಡೆಯಿತು.

ಶ್ರೀಕಂಠೇಶ್ವರಸ್ವಾಮಿಯವರ ಉತ್ಸವಮೂರ್ತಿಯನ್ನು ವಿಶೇಷವಾಗಿ ವಜ್ರದ ಕಂಠಿಹಾರ, ವಜ್ರದ ಕಿರೀಟ ಮತ್ತು ವಜ್ರ ವೈಢೂರ್ಯ, ಮುತ್ತು ಹವಳ, ನವರತ್ನಗಳಿಂದ ಸಿಂಗರಿಸಲಾಗಿತ್ತು. ಅಲ್ಲದೆ ವಿವಿಧ ಹೂಗಳಿಂದ ತೇಲುವ ದೇವಾಲಯವನ್ನು ಅಲಂಕೃತಗೊಳಿಸಲಾಗಿತ್ತು.

ಉತ್ಸವ ಮೂರ್ತಿ ಹೊತ್ತ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಶ್ರೀಕಂಠೇಶ್ವರಸ್ವಾಮಿ ಅವರನ್ನು 3 ಸುತ್ತು ಪ್ರದಕ್ಷಿಣೆ ಹಾಕಿಸಲಾಯಿತು. ಒಂದೊಂದು ಪ್ರದಕ್ಷಿಣೆ ಹಾಕುತ್ತಿದ್ದಂತೆ ನದಿಯ ಎರಡೂ ದಡದಲ್ಲಿ ನೆರೆದಿದ್ದ ಭಕ್ತರು ಈ ಮನೋಹರ ಮನಮೋಹಕ ದೃಶ್ಯ ಕಣ್ತುಂಬಿಕೊಂಡು ಕರತಾಡನದೊಂದಿಗೆ ಜೈ ಶ್ರೀಕಂಠೇಶ್ವರ ಎಂದು ಉದ್ಘೋಷಗಳನ್ನು ಕೂಗಿ ಜೈಕಾರಗಳನ್ನು ಹಾಕಿ ಉತ್ಸವ ಮೂರ್ತಿಗೆ ಶ್ರದ್ಧಾಭಕ್ತಿಯಿಂದ ನಮಿಸಿ ಕಣ್ತುಂಬಿಕೊಂಡು ಭಾವ ಪರವಶರಾಗಿ ಪುಳಕಿತರಾದರು. ಅಲ್ಲದೇ ಇಷ್ಟಾರ್ಥ ನೆರವೇರಿಸುವಂತೆ ಕೋರಿ ಹರಕೆ ಕಟ್ಟಿಕೊಂಡರು.

ತೆಪ್ಪೋತ್ಸವ ಒಂದು ಬಾರಿ ಪ್ರದಕ್ಷಿಣೆ ಬರುತ್ತಿದ್ದಂತೆ ಕಪಿಲಾ ನದಿಯ ಹೆಜ್ಜಿಗೆ ಗ್ರಾಮದ ಭಾಗದಲ್ಲಿ ನೆರೆದಿದ್ದ ಭಕ್ತರು ಮತ್ತು ಗ್ರಾಮಸ್ಥರು ಬಾಣಬಿರುಸು ಸೇವೆ ನೆರವೇರಿಸಿದರು. ಈ ವೇಳೆ ಪಟಾಕಿ ಸದ್ದಿಗೆ ಪುಳಕಿತರಾದ ಭಕ್ತರು ಬಾನಲ್ಲಿ ಮೂಡಿದ ಬಣ್ಣ ಬಣ್ಣದ ಚಿತ್ತಾರವನ್ನು ಕಂಡು ಸಂತೋಷ ಪಟ್ಟರು.

ತೆಪ್ಪೋತ್ಸವ ಅಂಗವಾಗಿ ವಿವಿಧ ಸಂಘ ಸಂಸ್ಥೆಗಳು, ಭಕ್ತರು ಪ್ರಸಾದ ವಿನಿಯೋಗ ಮಾಡಿದರು. ಈ ವೇಳೆ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿ, ಸಂಚಾರ ವ್ಯವಸ್ಥೆ ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್, ಆಯಕಟ್ಟಿನ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ನಿಗಾ ವಹಿಸಲಾಗಿತ್ತು.

ಈ ವೇಳೆ ದೇವಾಲಯದ ಇಓ ಸಿ.ಜೆ.ಕೃಷ್ಣ, ಎಇಓ ಸತೀಶ್, ದೇವಾಲಯದ ಅರ್ಚಕರು ಇದ್ದರು.

ಶ್ರೀಶಿವಕುಮಾರ ಸ್ವಾಮೀಜಿ ಜಯಂತಿ


ತಿ.ನರಸೀಪುರದ ಮಹದೇಶ್ವರ ಕಾಂಪ್ಲೆಕ್ಸ್‌ನಲ್ಲಿ ಶ್ರೀಶಿವಕುಮಾರ ಸ್ವಾಮೀಜಿಗಳ 119ನೇ ಜಯಂತಿ ಆಚರಿಸಲಾಯಿತು. ಈ ವೇಳೆ ಖಾಸಗಿ ಬಸ್ ಏಜೆಂಟರ ಸಂಘದ ಗೌರವಾಧ್ಯಕ್ಷ ಹೋಟೆಲ್ ರಾಜಣ್ಣ, ಎಂ.ಎಲ್.ನಮಿತ್ ರಾಜ್, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ವೆಂಕಟೇಶ್, ಸೋಮನಾಥಪುರ ಪಿಎಸಿಎಸ್ ಮಾಜಿ ಅಧ್ಯಕ್ಷ ಶಿವಣ್ಣ, ಉಮೇಶ್, ಮಹಾದೇವಸ್ವಾಮಿ, ಶಿವಕುಮಾರ್, ಜಗದೀಶ್, ಸಂತೋಷ್ ಮತ್ತಿತರರಿದ್ದರು.

ಮೀನುಗಾರರಿಗೆ ಪರಿಕರ ವಿತರಣೆ


ಕೆ.ಆರ್.ನಗರದ ತಾಪಂ ಆವರಣದಲ್ಲಿ ಮೀನುಗಾರರಿಗೆ ಹರಗೋಲು, ಬಲೆ ಸೇರಿದಂತೆ ಇತರೆ ಸವಲತ್ತುಗಳನ್ನು ಶಾಸಕ ಡಿ.ರವಿಶಂಕರ್ ವಿತರಿಸಿದರು. ಮೀನುಗಾರರ ಸಹಕಾರ ಸಂಘದ ಅಧ್ಯಕ್ಷ ಬೋರನಾಯಕ, ಇಲಾಖೆ ಸಹಾಯ ನಿರ್ದೇಶಕ ಶಿವರಂಜನ್, ತಹಸೀಲ್ದಾರ್‌ಗಳಾದ ರುಕೀಯು ಬೇಗಂ, ಸುರೇಂದ್ರಮೂರ್ತಿ, ತಾಪಂ ಇಓಗಳಾದ ರವಿ.ಎಸ್. ಕುಲದೀಪ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ವಕ್ತಾರ ಸೈಯದ್ ಜಾಬೀರ್, ರೈತ ರಾಜ್ಯ ಮುಖಂಡ ಎಂ.ಜೆ.ರಮೇಶ್ ಮತ್ತಿತರರಿದ್ದರು.

ಸರಗೂರು ಪಪಂಗೆ 23.05 ಲಕ್ಷ ರೂ. ಉಳಿತಾಯ

ಸರಗೂರು, ಏ.1– ಇಲ್ಲಿನ ಪಟ್ಟಣ ಪಂಚಾಯಿತಿಯ 2026–27ನೇ ಸಾಲಿಗೆ ಅಧ್ಯಕ್ಷೆ ಚೈತ್ರಾ ಅವರು 23.05 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.

ಪಪಂ ಆವರಣದಲ್ಲಿ ನಡೆದ ಬಜೆಟ್ ಮಂಡನೆ ಸಭೆಯಲ್ಲಿ ಬಜೆಟ್ ಬಗ್ಗೆ ವಿವರಣೆ ನೀಡಿದ ಪಪಂ ಅಧ್ಯಕ್ಷೆ ಚೈತ್ರಾ ಅವರು, 2026–27ನೇ ಸಾಲಿನ ಪ್ರಾರಂಭಿಕ ಶುಲ್ಕ 3.94 ಕೋಟಿ ರೂ.ಗಳಾಗಿದ್ದು, 10.51 ಕೋಟಿ ರೂ. ಜಮಾ ಆಗಲಿದೆ. ಈ ಪೈಕಿ 14.45 ಕೋಟಿ ರೂ. ಜುಮ್ಲಾ ಆಗಲಿದ್ದು, ಇದರಲ್ಲಿ 14.25 ಕೋಟಿ ರೂ. ಖರ್ಚಾಗಿ 23.05 ಲಕ್ಷ ರೂ. ಉಳಿತಾಯವಾಗಲಿದೆ ಎಂದರು.

ಪಪಂ ಆದಾಯ ಹೆಚ್ಚಿಸುವುದರೊಂದಿಗೆ ಅಭಿವೃದ್ಧಿಗೆ ಆದ್ಯತೆ ನೀಡಿರುವ ಬಜೆಟ್‌ನಲ್ಲಿ ಪ್ರಸಕ್ತ ಸಾಲಿನಲ್ಲಿ ವಿವಿಧ ಮೂಲಗಳಿಂದ ಹಣ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಆಸ್ತಿ ತೆರಿಗೆಯಿಂದ 80 ಲಕ್ಷ ರೂ., ನೀರು ತೆರಿಗೆ ಶುಲ್ಕ 21 ಲಕ್ಷ ರೂ., ಮಳಿಗೆಗಳ ಬಾಡಿಗೆ 8.50 ಲಕ್ಷ ರೂ., ಉದ್ದಿಮೆ ಪರವಾನಗಿ 5.75 ಲಕ್ಷ ರೂ., ನೆಲ ಬಾಡಿಗೆಯಿಂದ 15 ಲಕ್ಷ ರೂ. ಸೇರಿದಂತೆ ಇನ್ನಿತರ ಮೂಲಗಳಿಂದ 10.40 ಲಕ್ಷ ರೂ.ಗಳನ್ನು ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದರು.


ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಚೈತ್ರ ಬಜೆಟ್ ಮಂಡಿಸಿದರು.

ಅಲ್ಲದೇ ಸರ್ಕಾರದಿಂದಲೂ ಅನುದಾನ ಹಂಚಿಕೆಯಾಗಿದ್ದು, ಎಸ್‌ಎಫ್‌ಸಿ ಅನುದಾನ 4 ಲಕ್ಷ ರೂ., 15ನೇ ಹಣಕಾಸು ಯೋಜನೆ ಅನುದಾನ 2.88 ಕೋಟಿ ರೂ., ಎಸ್‌ಎಫ್‌ಸಿ ವಿದ್ಯುತ್ ಶಕ್ತಿ ಅನುದಾನ 1.6 ಕೋಟಿ ರೂ., ಎಸ್‌ಎಫ್‌ಸಿ ವೇತನ ಅನುದಾನ 2 ಕೋಟಿ ರೂ., ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ 1.50 ಲಕ್ಷ ರೂ. ಹಂಚಿಕೆಯಾಗಿದೆ ಎಂದರು.

ಘನ ತ್ಯಾಜ್ಯ ವಸ್ತು ನಿರ್ವಹಣೆಗೆ 38 ಲಕ್ಷ ರೂ. ಅನುದಾನ ಮೀಸಲಿಡಲಾಗಿದ್ದು, ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ 1 ಕೋಟಿ ರೂ., ಹೊರಗುತ್ತಿಗೆ ನೌಕರರ ವೇತನಕ್ಕೆ 60 ಲಕ್ಷ ರೂ., ಬೀದಿ ದೀಪ ನಿರ್ವಹಣೆಗೆ 33 ಲಕ್ಷ ರೂ., ನೀರು ಸರಬರಾಜು ವಿಭಾಗಕ್ಕೆ 55 ಲಕ್ಷ ರೂ., ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ 20 ಲಕ್ಷ ರೂ., ಚರಂಡಿ ನಿರ್ಮಾಣಕ್ಕೆ 1 ಕೋಟಿ ರೂ., ಪಪಂ ಕಚೇರಿ ನಿರ್ವಹಣೆಗೆ 62 ಲಕ್ಷ ರೂ., ಪೌರ ಕಾರ್ಮಿಕರ ಬೆಳಗಿನ ಉಪಹಾರಕ್ಕೆ 5 ಲಕ್ಷ ರೂ. ಸೇರಿದಂತೆ ಇನ್ನಿ ತರ ಕಾಮಗಾರಿಗಳಿಗೆ ಅನುದಾನ ಪಾವತಿಸಲಾಗಿದೆ ಎಂದರು.

ಸಭೆಯಲ್ಲಿ ಪಪಂ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಹೇಮಾವತಿ, ಸಣ್ಣತಾಯಮ್ಮ, ರಾಧಿಕಾ, ದಿವ್ಯಾ, ಚಂದ್ರಕಲಾ, ವಿನಾಯಕ ಪ್ರಸಾದ್, ನೂರಾಳಸ್ವಾಮಿ, ಉಮಾ, ಮುಖ್ಯಾಧಿಕಾರಿ ಎಸ್.ಕೆ. ಸಂತೋಷ್ ಕುಮಾರ್, ರಾಮು, ಪಳನಿಸ್ವಾಮಿ, ಶಿವಪ್ರಸಾದ್, ಅರ್ಜುನ್, ಅರುಣ್ ಆರಾಧ್ಯ, ಅನಿತಾ ಕುಮಾರಿ, ರಂಜಿನಿ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.

ಏ.5 ಬಾಬೂಜಿ, ಏ.14 ಡಾ.ಅಂಬೇಡ್ಕರ್ ಜಯಂತಿ

ಪೂರ್ವಭಾವಿ ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಮಾಹಿತಿ

ಹುಣಸೂರು, ಏ.1– ಏ.5ರಂದು ಡಾ.ಬಾಬು ಜಗಜೀವನ್ ರಾಂ ಹಾಗೂ ಏ.14ರಂದು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಡಾ.ಅಂಬೇಡ್ಕರ್ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಯಾವುದೇ ಗೊಂದಲಗಳಿಗೆ ಅವಕಾಶ ನೀಡದಂತೆ ಬಾಬೂಜಿ ಹಾಗೂ ಅಂಬೇಡ್ಕರ್ ಅವರ ಜಯಂತಿಗಳನ್ನು ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಚರಿಸಲಾಗುವುದು ಎಂದರು.

ಡಾ.ಬಾಬು ಜಗಜೀವನ್ ರಾಂ ಭವನ ನಿರ್ಮಾಣಕ್ಕೆ ಶಾಸಕರ ಅನುದಾನದಿಂದ 20 ಲಕ್ಷ, ಸರ್ಕಾರದಿಂದ 25 ಲಕ್ಷ ಸೇರಿದಂತೆ 45 ಲಕ್ಷ ವೆಚ್ಚದಲ್ಲಿ ಭವನವನ್ನು ನಿರ್ಮಿಸೋಣ. ಇದಕ್ಕೆ ಎಲ್ಲರೂ ಸಹಕರಿಸಬೇಕು ಎಂದರು.


ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿದರು.

ಇದೇ ವೇಳೆ ಆದಿಜಾಂಬವ ಸಂಘದ ಅಧ್ಯಕ್ಷ ಬಿ.ಶಿವಣ್ಣ ಮತ್ತು ಇತರರು ಪ.ಜಾತಿ ಸಮುದಾಯದ ಸಭೆ ಕರೆಯುವಂತೆ ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು ಡಾ.ಬಾಬು ಜಗಜೀವನ್ ರಾಂ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಮುಗಿದ ಮೇಲೆ ಸಭೆ ಕರೆಯಲು ಅಧಿಕಾರಿಗಳಿಗೆ ತಿಳಿಸುತ್ತೇನೆ ಎಂದು ಭರವಸೆ ನೀಡಿದರು.

ತಹಸೀಲ್ದಾರ್ ಮಂಜುನಾಥ್ ಮಾತನಾಡಿ, ಸರ್ಕಾರದ ಸುತ್ತೋಲೆ ಪ್ರಕಾರ ಮಹನೀಯರ ಜಯಂತಿಯನ್ನು ಆಚರಿಸಲಾಗುವುದು ಎಂದರು. ಈ ವೇಳೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಭರತ್ ಕುಮಾರ್, ತಾಪಂ ಇಓ ಹೊಂಗಯ್ಯ, ಬಿಇಓ ಮಹದೇವಸ್ವಾಮಿ, ನಗರಸಭೆ ಆಯುಕ್ತೆ ಮಾನಸ, ನಗರಸಭೆ ಮಾಜಿ ಸದಸ್ಯ ಸತೀಶ್ ಕುಮಾರ್, ಸಿಡಿಪಿಓ ಹರೀಶ್, ತಾಲೂಕು ಮಟ್ಟದ ಅಧಿಕಾರಿಗಳು, ಮುಖಂಡರಾದ ನಿಂಗರಾಜ್ ಮಲ್ಲಾಡಿ, ಬಸವಲಿಂಗಯ್ಯ ಸ್ವಾಮಿ, ಪರಶುರಾಮು, ವೆಂಕಟೇಶ್, ಶಿವರಾಂ ಶೇಖರ್, ಬಿ.ಶಿವಣ್ಣ, ಡಿ.ಕುಮಾರ್, ಮೋಹನ್, ಸುರೇಂದ್ರ ಇನ್ನಿತರಿದ್ದರು.


ಕೋಟೆಯಲ್ಲಿ ನಂಜುಂಡಾರಾಧ್ಯ ದತ್ತಿ ಉಪನ್ಯಾಸ ಕಾರ್ಯಕ್ರಮ

ಹೆಚ್.ಡಿ.ಕೋಟೆ, ಏ.1– ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಸಾಪ ಮತ್ತು ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಸಹಯೋಗದಲ್ಲಿ ನಂಜುಂಡಾರಾಧ್ಯ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಸಾಹಿತಿ ಕಿರಣ್ ಸಿಡ್ಲೇಹಳ್ಳಿ ಮಾತನಾಡಿ, ಜಾನಪದ ಸಾಹಿತ್ಯವು ವಿಶ್ವ ಸಾಹಿತ್ಯದಲ್ಲಿ ಮೊದಲನೇ ಸ್ಥಾನದಲ್ಲಿ ನಿಲ್ಲುತ್ತದೆ. ಪಾಶ್ಚಿಮಾತ್ಯ ಸಾಹಿತ್ಯಕ್ಕೂ ಭಾರತದ ಜಾನಪದ ಸಾಹಿತ್ಯಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಜಾನಪದ ಸಾಹಿತ್ಯವು ನಾವು ಬದುಕಿದಂತೆಯೇ ದಾಖಲಿಸಲಾಗಿದೆ. ದಾಖಲಿಸಿದಂತೆಯೇ ಬದುಕಲಾಗಿದೆ. ಆದರೆ ಪಾಶ್ಚಿಮಾತ್ಯ ಸಾಹಿತ್ಯವು ಬದುಕುವ ರೀತಿಯೇ ಬೇರೆ. ದಾಖಲಿಸುವ ರೀತಿಯೇ ಬೇರೆ ಎಂದು ಜಾನಪದ ಸಾಹಿತ್ಯದ ಪ್ರೌಢಿಮೆಯನ್ನು ವಿವರಿಸಿದರು.

ಹಿಂದೆ ಧರ್ಮ ಎದ್ದು ನಿಂತಾಗ ರಾಕ್ಷಸರು ಇದ್ದೇ ಇರುತ್ತಿದ್ದರು. ಎಷ್ಟೇ ರಾಕ್ಷಸರು ಇದ್ದರೂ ಧರ್ಮಕ್ಕೆ ಜಯ ಸಿಗುತ್ತಿತ್ತು. ಆ ಪ್ರವೃತ್ತಿ ಹಿಂದೆಯೂ ನಡೆದಿದೆ. ಇಂದು ನಡೆಯುತ್ತಿದೆ. ಮುಂದೆಯೂ ನಡೆಯುತ್ತದೆ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಯೋಜನಾಧಿಕಾರಿ ಭಾಸ್ಕರ್ ಮಾತನಾಡಿ, ಶಾಲಾ ಕಾಲೇಜಿನಲ್ಲಿ ವ್ಯಾಸಾಂಗ ಮಾಡಿ ಉತ್ತೀರ್ಣರಾಗುವುದು ಎಷ್ಟು ಮುಖ್ಯವೋ ಅದೇ ರೀತಿ ಜೀವನದಲ್ಲೂ ಉತ್ತಮರೆನಿಸಿಕೊಳ್ಳುವುದು ಕಬ್ಬಿಣದ ಕಡಲೆ ಇದ್ದಂತೆ. ಹೀಗಾಗಿ ಜೀವನದಲ್ಲಿ ಉತ್ತೀರ್ಣರಾದವರು ಸುಖೀ ಜೀವನ ನಡೆಸುತ್ತಿದ್ದಾರೆ ಎಂದರು.


ಶಿಕ್ಷಕಿ ಕೆ.ಸಿ.ಶ್ವೇತಾ ಅವರನ್ನು ಅಭಿನಂದಿಸಲಾಯಿತು.

ಇಂದಿನ ವಿದ್ಯಾರ್ಥಿ ಸಮೂಹ ಮೊಬೈಲ್ ಗೀಳಿಗೆ ದಾಸರಾಗಿ ಸತ್ಯ ಯಾವುದು ಸುಳ್ಳು ಯಾವುದು ಎಂದು ಅರಿಯುವ ಗೋಜಿಗೆ ಹೋಗದಿರುವುದು ಬೇಸರದ ಸಂಗತಿ ಎಂದರು.

ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್ ಮಾತನಾಡಿದರು. ಹೊಸತೊರವಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇಬ್ಬರು ವಿದ್ಯಾರ್ಥಿಗಳು ನವೋದಯಕ್ಕೆ ಆಯ್ಕೆಯಾಗಲು ತರಬೇತಿ ನೀಡಿದ ಶಿಕ್ಷಕಿ ಕೆ.ಸಿ.ಶ್ವೇತಾ ಅವರನ್ನು ಅಭಿನಂದಿಸಲಾಯಿತು.

ಪ್ರಾಂಶುಪಾಲ ಜೆ.ಎನ್.ವೆಂಕಟೇಶ್, ಬಿಆರ್‌ಟಿ ಗಿರೀಶ್‌ಮೂರ್ತಿ, ಸ್ವಾಮಿ ಮಾಸ್ಟರ್, ಗಾಯಕ ಸಿದ್ದರಾಜು, ಉಪನ್ಯಾಸಕರಾದ ಚನ್ನಕೇಶವ, ಸಿದ್ದೇಗೌಡ, ಚಂದನ ಇದ್ದರು.

ನವಿಲೂರು ಗ್ರಾಪಂಗೆ ಗಾಂಧಿ ಗ್ರಾಮ ಪುರಸ್ಕಾರ

ನಂಜನಗೂಡು, ಏ.1– ಗ್ರಾಮೀಣ ಆಡಳಿತ ಸಂಸ್ಥೆಯಾಗಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುವ ಗ್ರಾಮ ಪಂಚಾಯಿತಿಯನ್ನು ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೊಡ ಮಾಡುವ 2024–25ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ತಾಲೂಕಿನ ನವಿಲೂರು ಗ್ರಾಮ ಪಂಚಾಯಿತಿ ಭಾಜನವಾಗಿದೆ.



> ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಆರೋಗ್ಯ ತಪಾಸಣೆ ಮಾಡಲಾಗಿದೆ. ಜೊತೆಗೆ ಆಗಿಂದಾಗ್ಗೆ ಕುಡಿಯುವ ನೀರಿನ ಟ್ಯಾಂಕರ್‌ಗಳ ಸ್ವಚ್ಛತೆ, ಕುಡಿಯುವ ನೀರಿನ ಪೈಪ್‌ಲೈನ್ ರಿಪೇರಿ ಮತ್ತು ಗ್ರಾಮಗಳ ಮಟ್ಟದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಆದ್ದರಿಂದ ನಮ್ಮ ಗ್ರಾಪಂ 2024–25ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾಗಿದೆ. ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಸಿಬ್ಬಂದಿಗಳು, ಗ್ರಾಪಂ ವ್ಯಾಪ್ತಿಯ ಎಲ್ಲಾ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಪರಿಶ್ರಮದಿಂದ ಈ ಪುರಸ್ಕಾರ ದೊರೆತಿದೆ.
> – ಹೆಚ್.ಎಸ್.ಮಂಜುನಾಥ, ಪಿಡಿಓ.

ಸ್ಥಳೀಯ ಮಟ್ಟದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳಾಗಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ಜೊತೆಗೆ ಸರ್ಕಾರದ ಯೋಜನೆಗಳನ್ನು ಉತ್ತಮವಾಗಿ ಅನುಷ್ಠಾನಗೊಳಿಸುವ ಗ್ರಾಪಂಗಳನ್ನು ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಜಿಲ್ಲಾ ಮಟ್ಟದ ವಿಭಾಗದಲ್ಲಿ ಪ್ರತಿ ತಾಲೂಕಿಗೆ ಒಂದರಂತೆ ಗ್ರಾಪಂ ಅನ್ನು ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಿ 5 ಲಕ್ಷ ರೂ.ಗಳ ಪ್ರೋತ್ಸಾಹಧನ ನೀಡಿ ಗೌರವಿಸಲಾಗುತ್ತದೆ. 2024–25ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ರಾಜ್ಯದ ಒಟ್ಟು 239 ತಾಲೂಕಿಗಳ ಪೈಕಿ ಮೈಸೂರು ಜಿಲ್ಲೆಯ ವಿಭಾಗ ಮಟ್ಟದಲ್ಲಿ ನಂಜನಗೂಡು ತಾಲೂಕಿನ ನವಿಲೂರು ಗ್ರಾಪಂ ಅನ್ನು ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

ಗ್ರಾಮೀಣ ಭಾಗದ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದ ಯೋಜನೆಗಳಾದ ಸ್ವಚ್ಛ ಭಾರತ್ ಮಿಷನ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಮೂಲಭೂತ ಸೌಕರ್ಯಗಳಾದ ಬೀದಿ ದೀಪ, ಶಾಲೆ ಮತ್ತು ಅಂಗನವಾಡಿಗಳ ಅಭಿವೃದ್ಧಿ, ಶೇ.90ರಷ್ಟು ಶೌಚಾಲಯಗಳ ನಿರ್ಮಾಣ, ಬಾಲ್ಯ ವಿವಾಹ ಮತ್ತು ಬಾಲ ಕಾರ್ಮಿಕ ನಿಷೇಧ ಪದ್ಧತಿ, ಸ್ವಚ್ಛತೆಯ ಬಗ್ಗೆ ಜಾಗೃತಿ, ಮಾನವ ಅಭಿವೃದ್ಧಿ ಸೂಚ್ಯಾಂಕ ಸೇರಿದಂತೆ ಅಭಿವೃದ್ಧಿಯಲ್ಲಿ ನವಿಲೂರು ಗ್ರಾಪಂ ಮುಂಚೂಣಿಯಲ್ಲಿದ್ದು, ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ಸ್ಮರಣಿಕೆ ಮತ್ತು 5 ಲಕ್ಷ ರೂ.ಗಳ ಸಹಾಯಧನ ಒಳಗೊಂಡಿದೆ. ಈ ಪ್ರೋತ್ಸಾಹದ ಹಣವನ್ನು ಗ್ರಾಪಂ ಗ್ರಾಮಗಳ ಮೂಲ ಸೌಲಭ್ಯಗಳ ಅಭಿವೃದ್ಧಿಗಾಗಿ ಬಳಕೆ ಮಾಡಲಾಗುತ್ತದೆ.

> ನಮ್ಮ ನವಿಲೂರು ಗ್ರಾಪಂಗೆ 1994 ರಿಂದಲೂ ಯಾವುದೇ ಪ್ರಶಸ್ತಿಗಳು ದೊರೆತಿರಲಿಲ್ಲ. ಆದರೆ ಪಿಡಿಓ ಹೆಚ್.ಎಸ್. ಮಂಜುನಾಥ ಅವರ ಪರಿಶ್ರಮ ಮತ್ತು ಸೇವೆ ಬದ್ಧತೆಯಿಂದಾಗಿ, ಗ್ರಾಪಂನ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗ್ರಾಮಸ್ಥರಿಗೆ ಸ್ಪಂದಿಸಿ ಉತ್ತಮ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಿದ ಪರಿಣಾಮ ಅವರು ಬಂದ ಕೇವಲ ಎರಡೂವರೆ ವರ್ಷಗಳಲ್ಲಿ ಗ್ರಾಪಂ ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿಗೆ ಆಯ್ಕೆಯಾಗಿದೆ.
> 
> –ಎಸ್.ಮಹದೇವು, ಗ್ರಾಪಂ ಅಧ್ಯಕ್ಷ.

ತ್ರಿವಿಧ ದಾಸೋಹಿ ಶ್ರೀಶಿವಕುಮಾರ ಸ್ವಾಮೀಜಿ ಸೇವೆ ಅನನ್ಯ


ಶಂಭುದೇವನಪುರದಲ್ಲಿ ಶ್ರೀಶಿವಕುಮಾರ ಸ್ವಾಮೀಜಿಯವರ ಜಯಂತಿ ನಡೆಯಿತು.

ತಿ.ನರಸೀಪುರ, ಏ.1– ತ್ರಿವಿಧ ದಾಸೋಹಿ ಶ್ರೀಶಿವಕುಮಾರ ಸ್ವಾಮೀಜಿ ಅವರು ರಾಜ್ಯದಲ್ಲಿ ಬಹುದೊಡ್ಡ ಶಿಕ್ಷಣ ಕ್ರಾಂತಿ ಮಾಡುವ ಮೂಲಕ ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದ್ದರು ಎಂದು ಗ್ರಾಪಂ ಮಾಜಿ ಅಧ್ಯಕ್ಷ ಮರಿಸ್ವಾಮಿ (ಕುಮಾರ್) ಬಣ್ಣಿಸಿದರು.

ತಾಲೂಕಿನ ಶಂಭುದೇವನಪುರದಲ್ಲಿ ನಡೆದ ಶ್ರೀಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತಿಯಲ್ಲಿ ಶಿವಕುಮಾರ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಶಿವಕುಮಾರ ಸ್ವಾಮೀಜಿಗಳು ನಾಡು ಕಂಡ ಮಹಾನ್ ಶಿವಯೋಗಿಗಳು. ಅವರ ಬದುಕು ಸೇವೆ ಮತ್ತು ತ್ಯಾಗದ ಸಂಗಮವಾಗಿತ್ತು. ನಾಡಿನಲ್ಲಿ ಶೈಕ್ಷಣಿಕ ಕ್ರಾಂತಿ ಮಾಡುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿಶೇಷವಾಗಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿಕೊಟ್ಟರು. ಇದರಿಂದ ಅನೇಕ ಮಹಿಳೆಯರ ಸ್ವಾವಲಂಬಿ ಬದುಕಿಗೆ ಸಹಕಾರಿಯಾಯಿತು ಎಂದರು.

ಈ ಭಾಗದಿಂದಲೂ ಸಾಕಷ್ಟು ಮಕ್ಕಳು ಸಿದ್ಧಗಂಗಾ ಮಠಕ್ಕೆ ತೆರಳಿ ತಮ್ಮ ಬದುಕು ರೂಪಿಸಿಕೊಳ್ಳುವ ಶಿಕ್ಷಣ ಪಡೆದಿದ್ದಾರೆ. ಪರಮ ಪೂಜ್ಯರಿಗೆ ಹಳ್ಳಿ ಮಕ್ಕಳಿಗೆ ಶಿಕ್ಷಣ ನೀಡಬೇಕೆಂಬ ಬಹುದೊಡ್ಡ ಕನಸಿತ್ತು. ಅದಕ್ಕಾಗಿ ಅವರು ಗ್ರಾಮೀಣ ಪ್ರದೇಶದಲ್ಲಿ ಶಾಲೆಗಳನ್ನು ಸ್ಥಾಪಿಸಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಮೂಲಕ ಶೈಕ್ಷಣಿಕ ಕ್ರಾಂತಿ ಮಾಡಿದರು. ಮಠಕ್ಕೆ ಎಷ್ಟೇ ಮಕ್ಕಳು ಬಂದರೂ ಆಶ್ರಯ ನೀಡುವ ಜಾತ್ಯಾತೀತ, ವಿಶಾಲ ಮನೋಭಾವ ಇಟ್ಟುಕೊಂಡು ಯಾವುದೇ ಭೇದ ಭಾವ ಮಾಡದೇ ಎಲ್ಲರಿಗೂ ಅವಕಾಶ ನೀಡಿದ ಶಿವಕುಮಾರ ಸ್ವಾಮೀಜಿಗಳ ಸೇವೆ ಅನನ್ಯ. ಮೈಸೂರು ಮತ್ತು ಚಾಮರಾಜನಗರ ಭಾಗಗಳಲ್ಲಿ ಹೆಚ್ಚಾಗಿ ಅವರನ್ನು ಆರಾಧಿಸುವ ಭಕ್ತ ಸಮೂಹ ಇದ್ದು, ಹಳ್ಳಿಗಳಲ್ಲಿ ಅವರ ಮೂರ್ತಿ ಸ್ಥಾಪಿಸುವ ಮೂಲಕ ಅವರಿಗೆ ಬಹುದೊಡ್ಡ ಗೌರವ, ಭಕ್ತಿ, ಶ್ರದ್ಧೆ ಅರ್ಪಿಸಲಾಗುತ್ತಿದೆ ಎಂದರು.

ಗ್ರಾಪಂ ಮಾಜಿ ಸದಸ್ಯ ಎಸ್.ಮಹೇಶ್ ಮಾತನಾಡಿ, ಶಿವಕುಮಾರ ಸ್ವಾಮೀಜಿ ಅವರು ತ್ರಿವಿಧ ದಾಸೋಹದ ಮೂಲಕ ಮನೆ ಮಾತಾಗಿದ್ದಾರೆ. ಅಲ್ಲದೆ ನಡೆದಾಡುವ ದೇವರೆಂದೇ ಹೆಸರುವಾಸಿಯಾಗಿದ್ದಾರೆ. ಅವರ ಆದರ್ಶಗಳನ್ನು ನಾವೆಲ್ಲರೂ ಪಾಲಿಸಬೇಕು. ಹಾಗಾದರೆ ಮಾತ್ರ ಅವರ ಜಯಂತಿಗೆ ಅರ್ಥ ಬರುತ್ತದೆ. ಶ್ರೀಗಳು ಅನ್ನ, ಅಕ್ಷರದ ಮೂಲಕ ಸಾವಿರಾರು ಮಕ್ಕಳ ಬದುಕಿಗೆ ನೆರವಾಗಿದ್ದಾರೆ. ಅವರ ಮೂಲಕ ಅನೇಕರು ಪ್ರೇರಣೆ ಪಡೆದಿದ್ದಾರೆ. ತ್ರಿವಿಧ ದಾಸೋಹ (ಅನ್ನ, ಅಕ್ಷರ ಮತ್ತು ಜ್ಞಾನ ದಾಸೋಹ)ಕ್ಕಾಗಿ ಶತಾಯುಷಿಗಳ ಜೀವನ ಅಧ್ಯಯನ ಮಾಡುವುದರಿಂದ ನಮಗೆ ಸಕಾರಾತ್ಮಕ ಮತ್ತು ದೈವಿಕ ಚಿಂತನೆ ಬೆಳೆಸಿಕೊಳ್ಳಲು ಸಹಾಯವಾಗುತ್ತದೆ ಎಂದರು.

ಗ್ರಾಮದ ಮುಖಂಡರಾದ ಗೌಡ್ರು ಮಹದೇವಸ್ವಾಮಿ, ವಿ.ಪ್ರಭುಸ್ವಾಮಿ, ಕುಮಾರಸ್ವಾಮಿ, ರೇಚಣ್ಣ, ಮಲ್ಲಣ್ಣ, ವೀರಭದ್ರಪ್ಪ, ಲಿಂಗರಾಜು, ನಾಗರಾಜು, ಕಿರಣ್, ರಾಜ, ಪ್ರಭು, ಬಸವಲಿಂಗಪ್ಪ, ಮಹದೇವಪ್ಪ, ಮಹದೇವಸ್ವಾಮಿ, ನಟೇಶ್, ಮಾಸ್ಟರ್ ಗುರುಸ್ವಾಮಿ, ಗ್ರಾಮದ ಮುಖಂಡರು ಇದ್ದರು.

ವಿವಿಧೆಡೆ ಶಿವಕುಮಾರ ಸ್ವಾಮೀಜಿಯವರ ಜಯಂತಿ

ಬೆಟ್ಟದಪುರ, ಏ.1– ಪಿರಿಯಾಪಟ್ಟಣ ತಾಲೂಕಿನ ಹಲವು ಗ್ರಾಮಗಳಲ್ಲಿ ತ್ರಿವಿಧ ದಾಸೋಹಿ ಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತಿಯನ್ನು ಬುಧವಾರ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ತಾಲೂಕಿನ ಬಿಲ್ಲಹಳ್ಳಿ, ಹರದೂರು, ಆವರ್ತಿ, ಸುಬ್ಬಯ್ಯನಕೊಪ್ಪಲು, ಆಯಿತನಹಳ್ಳಿ, ಅತ್ತಿಗೋಡು, ಮರದೂರು, ಮೇಲೂರು, ಕೂರ್ಗಲ್ ಗ್ರಾಮಗಳ ಗ್ರಾಮಸ್ಥರು ಹಾಗೂ ವೀರಶೈವ ಯುವಕರ ಬಳಗದಿಂದ ಸಿದ್ಧಗಂಗಾ ಮಠದ ಶ್ರೀಶಿವಕುಮಾರ ಸ್ವಾಮೀಜಿ ಅವರ ಜನ್ಮ ದಿನಾಚರಣೆ ಆಚರಿಸಲಾಯಿತು.

ಈ ವೇಳೆ ಬಿಲ್ಲಹಳ್ಳಿಯಲ್ಲಿ ವೀರಶೈವ ಲಿಂಗಾಯತ ಸಮಾಜದಿಂದ ಆಯೋಜಿಸಿದ್ದ ಜಯಂತಿಯಲ್ಲಿ ದಿಂಡುಗಾಡು ಶ್ರೀಬಸವಜ್ಯೋತಿ ಮಠದ ಶ್ರೀಅಪ್ಪಾಜಿ ಸ್ವಾಮೀಜಿ ಮಾತನಾಡಿದರು.


ಬಿಲ್ಲಹಳ್ಳಿಯಲ್ಲಿ ಶ್ರೀಶಿವಕುಮಾರ ಸ್ವಾಮೀಜಿಗಳ ಜಯಂತಿ ನಡೆಯಿತು.

ಈ ವೇಳೆ ತಾಲೂಕು ವೀರಶೈವ ಲಿಂಗಾಯತ ಸಂಘದ ಅಧ್ಯಕ್ಷ ಪರಮೇಶ್, ಗ್ರಾಮದ ಮುಖಂಡರಾದ ಮಹದೇವಪ್ಪ, ಬಿ.ಆರ್. ರಮೇಶ್, ಬಿ.ಆರ್.ಲಿಂಗರಾಜಪ್ಪ, ದೇವರಹಟ್ಟಿ ಶಿವಣ್ಣ, ಗುರುಪಾದಸ್ವಾಮಿ, ಮೂಲೆಹಟ್ಟಿ ಚೆನ್ನಪ್ಪ, ಶಿವಪ್ಪ ಸೋಮಿ, ದೊಡ್ಡಹಟ್ಟಿ ಚಂದ್ರಪ್ಪ, ಹೊಸಟ್ಟಿ ಬಸಪ್ಪ, ಚನ್ನಬಸಪ್ಪ, ದೊಡ್ಡಹಟ್ಟಿ ಕುಮಾರಸ್ವಾಮಿ, ಹೊಸಹಟ್ಟಿ ಸೋಮಶೇಖರಪ್ಪ, ಹೊಸಹಟ್ಟಿ ರೇವಣ್ಣ, ಕೊಪ್ಪನಪ್ಪ, ಶಿವಪ್ಪಸ್ವಾಮಿ, ಉದಯ್ ಕುಮಾರ್, ಸಿದ್ದಪ್ಪ, ಬಸವರಾಜಪ್ಪ, ಮೂಲೆಹಟ್ಟಿ ಸೋಮಶೇಖರಪ್ಪ, ಬಿ.ಪಿ. ಪುಟ್ಟಣ್ಣಯ್ಯ, ಬಿ.ವಿ.ವೀರಭದ್ರಪ್ಪ, ಪಶುಪತಿ, ಸೋಮಶೇಖರಪ್ಪ ಹಾಜರಿದ್ದರು.

ಅಪರಿಚಿತ ವಾಹನ ಡಿಕ್ಕಿ: ಜಿಂಕೆ ಸಾವು

ನಂಜನಗೂಡು, ಏ.1– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಜಿಂಕೆ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಚಾಮರಾಜನಗರ ಮುಖ್ಯ ರಸ್ತೆಯ ತಾಲೂಕಿನ ನೇರಳೆ ಗೇಟ್ ಬಳಿ ನಡೆದಿದೆ.



ಸುಮಾರು ಎರಡೂವರೆ ವರ್ಷದ ಹೆಣ್ಣು ಜಿಂಕೆ ರಸ್ತೆ ದಾಟುತ್ತಿದ್ದ ವೇಳೆ ಅಪ ರಿಚಿತ ವಾಹನ ಡಿಕ್ಕಿ ಹೊಡೆದು ಸ್ಥಳದಲ್ಲೇ ಸಾವನ್ನಪ್ಪಿದೆ. ವಿಷಯ ತಿಳಿದು ಸ್ಥಳಕ್ಕೆ ಸಾಮಾಜಿಕ ವಲಯ ಅರಣ್ಯ ಸಂರಕ್ಷಣಾಧಿಕಾರಿ ನಿತಿನ್ ಕುಮಾರ್ ಭೇಟಿ ನೀಡಿ ಜಿಂಕೆ ಕಳೇಬರವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿದರು.

ನಾಗರಾಜು ನಿಧನ



ಹುಣಸೂರು, ಏ.1– ನಗರದ ನ್ಯೂ ಮಾರುತಿ ಬಡಾವಣೆ ನಿವಾಸಿ, ನಿವೃತ್ತ ಅರಣ್ಯ ರಕ್ಷಕ ನಾಗರಾಜು (82) ಬುಧವಾರ ಸಂಜೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ನಗರದ ಪಂಪ್ ಹೌಸ್ ಬಳಿಯ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಮಹದೇವಯ್ಯ




ಕೆ.ಆರ್.ನಗರ, ಏ.1– ತಾಲೂಕಿನ ಚೌಕಹಳ್ಳಿ ಗ್ರಾಮದ ರೈತ ಮುಖಂಡ ಮಹದೇವಯ್ಯ(72) ಮಂಗಳವಾರ ಸಂಜೆ ನಿಧನರಾದರು. ಮೃತರು ಪತ್ನಿ ಕಮಲಮ್ಮ, ಪುತ್ರ ಪಟ್ಟಣದ ಶಿವಸಾಗರ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ವ್ಯವಸ್ಥಾಪಕ ರವಿ, ಪುತ್ರಿ ರೂಪ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ಬುಧವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಮೈಸೂರು ಮಿತ್ರ

ಸಿದ್ಧಗಂಗಾ ಶ್ರೀಗಳ ಸೇವೆ ಸಮಾಜಕ್ಕೆ ದಾರಿದೀಪ

ಹಿರಿಯ ಶಾಸಕ ಜಿ.ಟಿ.ದೇವೇಗೌಡ ಅಭಿಮತ



ಮೈಸೂರಿನ ರಾಮಕೃಷ್ಣನಗರದಲ್ಲಿ ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿ ವತಿಯಿಂದ ಆಯೋಜಿಸಿದ್ದ ಚಿಂತನ–ಮಂಥನ ಕಾರ್ಯಕ್ರಮದಲ್ಲಿ ಶ್ರೀಗಳ ಕುರಿತ ಕೃತಿಯನ್ನು ಶಾಸಕ ಜಿ.ಟಿ.ದೇವೇಗೌಡರು ಬಿಡುಗಡೆ ಮಾಡಿದರು

ಮೈಸೂರು, ಏ.1– ನಡೆದಾಡುವ ದೇವರು ಎಂದೇ ಜನಮಾನಸದಲ್ಲಿ ಅಚ್ಚಳಿಯದಂತೆ ಉಳಿದಿರುವ ಸಿದ್ದಗಂಗಾ ಮಠದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ ಬದುಕು, ನಡೆದು ಬಂದ ದಾರಿಯು ಇಂದಿನ ಸಮಾಜಕ್ಕೆ ದಾರಿದೀಪವಾಗಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿ ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿ ವತಿಯಿಂದ ಆಯೋಜಿಸಿದ್ದ ಚಿಂತನ–ಮಂಥನ ಕಾರ್ಯಕ್ರಮ, ಡಾ.ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸ್ವಾಮೀಜಿ ಜಯಂತಿ ಪ್ರಯುಕ್ತ ನಗರವನ್ನು ಸ್ವಚ್ಛವಾಗಿಡುವ ಪೌರಕಾರ್ಮಿಕರಿಗೆ ಕ್ಯಾಪ್, ಗಿಡಗಳು ಹಾಗೂ ಮೆಡಿಕಲ್ ಕಿಟ್ ವಿತರಣೆ ಮತ್ತು ಸಮಾಜ ಸೇವಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದರು.

ನಾಡಿಗೆ ಬೆಳಕಾದ ಶಿವಕುಮಾರ ಸ್ವಾಮೀಜಿ ಅವರು ತಮ್ಮ ಜೀವನವನ್ನು ಸಮಾಜ ಸೇವೆಗೆ ಮುಡಿಪಾಗಿಟ್ಟು, ಜ್ಞಾನ, ಅನ್ನ ಮತ್ತು ವಿದ್ಯೆಯನ್ನು ಹಂಚಿದ ತ್ರಿವಿಧ ದಾಸೋಹಿ ಆಗಿದ್ದರು. ಜ್ಞಾನ ಮತ್ತು ದಾಸೋಹದಿಂದಲೇ ಶ್ರೀಗಳು ದೇಶದಲ್ಲಿ ಗಮನ ಸೆಳೆದಿದ್ದರು ಎಂದು ನುಡಿದರು. ಬಸವಣ್ಣನವರ ಆಶಯ ಹಾಗೂ ಶರಣರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಕಾಯಕ ಮತ್ತು ಆತ್ಮ ವಿಶ್ವಾಸದಿಂದ ಜೀವನ ರೂಪಿಸಿಕೊಳ್ಳಬೇಕು ಎಂದರು. ಬಸವಣ್ಣನವರದ್ದು ಮಹಾನ್ ವ್ಯಕ್ತಿತ್ವ ಎಂದು ಹೇಳಿದರು.

ಸ್ವಾತಂತ್ರ್ಯ ಪೂರ್ವದಲ್ಲೇ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಶಿಕ್ಷಣದ ಅವಕಾಶ ಕಲ್ಪಿಸಿದ ಶಿವಕುಮಾರ ಸ್ವಾಮೀಜಿಯವರು ಸಿದ್ದಗಂಗಾ ಕ್ಷೇತ್ರದಲ್ಲಿ ಯಾವುದೇ ಮಗು ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಉಚಿತ ಅನ್ನ ಮತ್ತು ಶಿಕ್ಷಣ ವ್ಯವಸ್ಥೆ ಮಾಡಿದರು. 125ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಲಕ್ಷಾಂತರ ವಿದ್ಯಾರ್ಥಿಗಳ ಬದುಕಿಗೆ ದಾರಿದೀಪವಾದರು. ಸಿದ್ಧಗಂಗಾ ಮಠದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಇಂದು ಉತ್ತಮವಾದ ಉದ್ಯೋಗ ಕಂಡುಕೊಂಡಿದ್ದಾರೆ ಎಂದು ತಿಳಿಸಿದರು. ಜಾತಿ, ಧರ್ಮ, ಪಂಥ ಭೇದವಿಲ್ಲದೆ ಎಲ್ಲರನ್ನು ಸಮಾನವಾಗಿ ಕಾಣುತ್ತಿದ್ದ ಅವರು ಬಸವಣ್ಣನವರ ಸಮಾನತೆಯ ಸಂದೇಶ ಸಾರಿದರು. 112 ವರ್ಷಕ್ಕೂ ಹೆಚ್ಚು ಕಾಲ ಸಮಾಜ ಸೇವೆ ಮಾಡಿದ ಅವರು ನಿಜವಾದ ಬದುಕಿನ ಸಂತ ಎಂದರು. ಪಾಲಿಕೆ ಮಾಜಿ ಸದಸ್ಯ ಜೆ.ಎಸ್.ಜಗದೀಶ್, ಬಿಜೆಪಿ ಮುಖಂಡ ಕವೀಶ್ ಗೌಡ ಇತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	3 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ)	2+2 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಆಯುಧ (ಕ)	4 ಪ್ರದರ್ಶನಗಳು

ವರದಕ್ಷಿಣೆ ಕಿರುಕುಳ; ಗೃಹಿಣಿ ಆತ್ಮಹತ್ಯೆಗೆ ಕಾರಣರಾದ ಪತಿ, ಅತ್ತೆ, ಮಾವನಿಗೆ ಕಠಿಣ ಶಿಕ್ಷೆ

ಮೈಸೂರು, ಏ.1(ಬಿಎಲ್‌ಯು)– ವರದಕ್ಷಿಣೆ ಕಿರುಕುಳ ನೀಡಿ ಪತ್ನಿ ಆತ್ಮಹತ್ಯೆಗೆ ಕಾರಣನಾದ ಪತಿ ಹಾಗೂ ಆತನ ತಂದೆ–ತಾಯಿಗೆ ಮೈಸೂರು ನ್ಯಾಯಾಲಯ ಕಾರಾಗೃಹ ಶಿಕ್ಷೆ ಹಾಗೂ ದಂಡ ವಿಧಿಸಿದೆ.

ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೂಕು ಬೆಣಗನಹಳ್ಳಿ ಗ್ರಾಮದ ರಂಗನಾಥ್ ಹಾಗೂ ಆತನ ತಾಯಿ ಗೌರಮ್ಮ, ತಂದೆ ಪುಟ್ಟಣ್ಣ ಶಿಕ್ಷೆಗೊಳಗಾದವರು.

ಪಿರಿಯಾಪಟ್ಟಣ ತಾಲೂಕು ಚಪ್ಪರದಹಳ್ಳಿ ಗ್ರಾಮದ ಸಿ.ಎನ್.ರೂಪಾ ಅವರನ್ನು ರಂಗನಾಥ್ 2000ನೇ ಇಸವಿಯಲ್ಲಿ ಮದುವೆಯಾಗಿದ್ದನು. ವಿವಾಹದ ವೇಳೆ ರೂಪ ಪೋಷಕರು 70 ಸಾವಿರ ನಗದು, 100 ಗ್ರಾಂ ಚಿನ್ನವನ್ನು ವರದಕ್ಷಿಣೆಯಾಗಿ ನೀಡಿದ್ದರು.

ಆದರೆ, ದುಶ್ಚಟಗಳಿಗೆ ದಾಸನಾಗಿದ್ದ ರಂಗನಾಥ್ ವರದಕ್ಷಿಣೆ ಹಣ ಹಾಗೂ ವ್ಯವಸಾಯದಿಂದ ಬಂದ ಆದಾಯವನ್ನೆಲ್ಲಾ ಪೋಲು ಮಾಡಿದ್ದನು. ಅಲ್ಲದೆ, ತವರಿಂದ ಮತ್ತಷ್ಟು ವರದಕ್ಷಿಣೆ ತರುವಂತೆ ಪತ್ನಿಗೆ ಕಿರುಕುಳ ನೀಡುತ್ತಿದ್ದನು. ಇದಕ್ಕೆ ರಂಗನಾಥ್ ತಾಯಿ ಗೌರಮ್ಮ ಹಾಗೂ ಪುಟ್ಟಣ್ಣ ಕೂಡ ಸಾಥ್ ನೀಡುತ್ತಿದ್ದರು.

ವರದಕ್ಷಿಣೆ ತರದಿದ್ದರೆ ಆತ್ಮಹತ್ಯೆ ಮಾಡಿಕೊ ಎಂದು ನಿಂದಿಸುತ್ತಿದ್ದರು. ಪತಿ, ಅತ್ತೆ, ಮಾವ ನೀಡುತ್ತಿದ್ದ ಕಿರುಕುಳ ತಾಳಲಾರದೆ ರೂಪಾ ಮಾರ್ಚ್ 16, 2015 ರಂದು ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.


ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ಕೆ.ಆರ್.ನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಹೆಚ್.ಎನ್.ಸಿದ್ದಯ್ಯ, ಈ ಮೂವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಬಳಿಕ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದರು.

ಈ ಪ್ರಕರಣದ ಬಗ್ಗೆ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರೂಪಾ ಕೆ.ಎನ್. ಅವರು, ವಾದ–ಪ್ರತಿವಾದ ಆಲಿಸಿ ಆರೋಪಿಗಳಿಗೆ ಶಿಕ್ಷೆ ವಿಧಿಸಿದ್ದಾರೆ. ಮೊದಲ ಆರೋಪಿ ರಂಗನಾಥ್‌ಗೆ 5 ವರ್ಷ ಕಾರಾಗೃಹ ಶಿಕ್ಷೆ ಹಾಗೂ 25 ಸಾವಿರ ದಂಡ, ಎರಡು ಹಾಗೂ ಮೂರನೇ ಆರೋಪಿಗಳಾದ ಗೌರಮ್ಮ ಮತ್ತು ಪುಟ್ಟಣ್ಣ ಅವರಿಗೆ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 10 ಸಾವಿರ ದಂಡ ವಿಧಿಸಿದ್ದಾರೆ. ದಂಡ ಪಾವತಿಸಲು ತಪ್ಪಿದ್ದಲ್ಲಿ ಮತ್ತೆ 6 ತಿಂಗಳ ಶಿಕ್ಷೆ ಅನುಭವಿಸಬೇಕು ಎಂದು ತೀರ್ಪು ನೀಡಿದ್ದಾರೆ. ಸರ್ಕಾರಿ ಅಭಿಯೋಜಕರಾದ ಎ.ಎನ್.ಮಧು ಅವರು ಸರ್ಕಾರದ ಪರ ವಾದ ಮಂಡಿಸಿದ್ದರು.

ಸುತ್ತೂರಿನಲ್ಲಿ ಕಂಪ್ಯೂಟರ್ ತರಬೇತಿ

ಸುತ್ತೂರು: ಜೆಎಸ್‌ಎಸ್ ಸಂಸ್ಥೆಯಲ್ಲಿನ ಗಣಕಯಂತ್ರ ವಿಭಾಗದಲ್ಲಿ ಬೇಸಿಕ್ಸ್ ಆಫ್ ಕಂಪ್ಯೂಟರ್ ಕುರಿತು ಗ್ರಾಮೀಣ ವಿದ್ಯಾವಂತ ಯುವಕ, ಯುವತಿಯರಿಗೆ 30 ದಿನಗಳ ತರಬೇತಿಯನ್ನು ಏರ್ಪಡಿಸಲಾಗಿದೆ. ತರಬೇತಿ ಏ.6ರಿಂದ ಆರಂಭವಾಗಲಿದೆ. ಕನಿಷ್ಠ 8ನೇ ತರಗತಿ ಆಗಿರುವ ಆಸಕ್ತ ಅಭ್ಯರ್ಥಿಗಳು ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ.ಸಂ.: 9886389574, 9740125720, 8971639766 ಸಂಪರ್ಕಿಸಿ.

ಅರುಣಾಚಲ ಪ್ರದೇಶದಲ್ಲಿ ಪುಂಡಾನೆ ಹೆಡೆಮುರಿ ಕಟ್ಟಿದ ನಾಗರಹೊಳೆ ಮಾವುತರ ತಂಡ



ಸಾಕಾನೆಗಳು ಹಾಗೂ ಕಾಡಾನೆ ಸೆರೆ ಹಿಡಿದ ತಂಡವನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.1(ಎಂಟಿವೈ)– ಅರುಣಾಚಲ ಪ್ರದೇಶದಲ್ಲಿ ಪದೇ ಪದೆ ದಾಳಿ ನಡೆಸಿ ಜನರ ಬಲಿ ಪಡೆಯುತ್ತಿದ್ದ ಕಾಡಾನೆಯನ್ನು ನಾಗರಹೊಳೆಯ ಪಶುವೈದ್ಯರು ಹಾಗೂ ಮತ್ತಿಗೋಡು, ದುಬಾರೆ ಶಿಬಿರದ ಮಾವುತರ ತಂಡ ಯಶಸ್ವಿಯಾಗಿ ಸೆರೆ ಹಿಡಿದು ತಮ್ಮ ಚಾಕಚಕ್ಯತೆಯನ್ನು ರಾಷ್ಟ್ರಮಟ್ಟದಲ್ಲಿ ಸಾಬೀತುಪಡಿಸಿದ್ದಾರೆ.

ಕಾಡಾನೆ ಸೆರೆ ಹಾಗೂ ಪಳಗಿಸುವಿಕೆ, ಆನೆಗಳ ಆರೈಕೆಯಲ್ಲಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿರುವ ಕರ್ನಾಟಕದ ಮಾವುತರು ಅದರಲ್ಲೂ ನಾಗರಹೊಳೆ, ಬಂಡೀಪುರ ಅಭಯಾರಣ್ಯದ ಆನೆ ಶಿಬಿರದ ಮಾವುತರ ತಂಡ ಇದೀಗ ಮತ್ತೊಮ್ಮೆ ರಾಷ್ಟ್ರದ ಗಮನ ಸೆಳೆದಿದ್ದಾರೆ. ಅರುಣಾಚಲ ಪ್ರದೇಶದಲ್ಲಿ ಕಳೆದ 5–6 ತಿಂಗಳಿಂದ ಮಾನವ ಮತ್ತು ವನ್ಯಜೀವಿ ಸಂಘರ್ಷ ತಾರಕಕ್ಕೇರಿದ್ದು, ಅದರಲ್ಲೂ ಕಾಡಾನೆ, ಹುಲಿ ದಾಳಿಗೆ ಭಾರೀ ಪ್ರಮಾಣದಲ್ಲಿ ಮಾನವ ಜೀವ ಹಾನಿ ಸಂಭವಿಸಿದೆ. ಸಾವಿನ ಸಂಖ್ಯೆ ಹೆಚ್ಚಾಗುತ್ತಲೇ ಇದ್ದ ಕಾರಣ ಅರುಣಾಚಲ ಪ್ರದೇಶದ ಸರ್ಕಾರ ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆದು, ಉಪಟಳ ನೀಡುತ್ತಿರುವ ಕಾಡಾನೆ ಸೆರೆಗೆ ಪಶುವೈದ್ಯರು ಹಾಗೂ ನುರಿತ ಮಾವುತರ ತಂಡವನ್ನು ಕಳುಹಿಸಿಕೊಡುವಂತೆ ಕೋರಿತ್ತು. ಈ ಹಿನ್ನೆಲೆಯಲ್ಲಿ ಕರ್ನಾಟಕ ಅರಣ್ಯ ಇಲಾಖೆಯ ಪಿಸಿಸಿಎಫ್ ಕುಮಾರ ಪುಷ್ಕರ್ ಅವರು ಕರ್ನಾಟಕದಿಂದ ನುರಿತ ತಂಡವೊಂದನ್ನು ಕಳುಹಿಸಿಕೊಟ್ಟಿದ್ದರು.

12 ಜನರ ತಂಡ: ಅರುಣಾಚಲ ಪ್ರದೇಶದ ಮೆಹಾವೋ ವನ್ಯಧಾಮಕ್ಕೆ ಕಾಡಾನೆ ಸೆರೆ, ಹುಲಿ ಸೆರೆ ಕಾರ್ಯಾಚರಣೆಗೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಪಶುವೈದ್ಯ ಡಾ.ಹೆಚ್.ರಮೇಶ್, ಗುರಿಕಾರ ಡಿಆರ್ ಎಫ್ ಓ ಕೆ.ಪಿ.ರಂಜನ್, ಪಶುವೈದ್ಯರ ಸಹಾಯಕ ಯೋಗೇಶ್, ಮಾವುತರಾದ ನಂಜುಂಡಸ್ವಾಮಿ, ವಿಶ್ವ, ಈರಣ್ಣ, ಹರೀಶ್, ನವೀನ ಅವರನ್ನು ಆಯ್ಕೆ ಮಾಡಲಾಗಿದ್ದು, ಎರಡು ದಿನಗಳ ಹಿಂದಷ್ಟೇ ಅರುಣಾಚಲ ಪ್ರದೇಶಕ್ಕೆ ಕಳುಹಿಸಿಕೊಡಲಾಗಿತ್ತು.

ಯಶಸ್ವಿ ಕಾರ್ಯಾಚರಣೆ: ಎರಡು ದಿನಗಳಿಂದ ಅರಣ್ಯ ಇಲಾಖೆಯ ಅತಿಥಿ ಗೃಹದಲ್ಲಿ ವಾಸ್ತವ್ಯ ಹೂಡಿದ್ದ ಮಾವುತರ ತಂಡ ಕಾರ್ಯಾಚರಣೆಗಿಳಿದ ಮೊದಲ ದಿನವೇ ಸ್ಥಳೀಯರಿಗೆ ಉಪಟಳ ನೀಡುತ್ತಿದ್ದ ಒಂಟಿ ಸಲಗವೊಂದನ್ನು ಯಶಸ್ವಿಯಾಗಿ ಸೆರೆ ಹಿಡಿದಿದ್ದಾರೆ.

ಇಂದು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಶಿಬಿರ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಏ.2 ರಂದು ಬೆಳಗ್ಗೆ 11 ಗಂಟೆಗೆ ಕರಾಮುವಿಯ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಈ ತರಬೇತಿ ಶಿಬಿರಾರ್ಥಿಗಳಿಗೆ ಶುಭಹಾರೈಕೆಯನ್ನು ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಎಂ.ಬಾಲಸುಬ್ರಮಣ್ಯ ನೆರವೇರಿಸುವರು. 'ಮುಕ್ತಭಂಡಾರ' ಅಧ್ಯಯನ ಪುಸ್ತಕವನ್ನು ಮೈಸೂರು ಮಹಾನಗರ ಪಾಲಿಕೆ ಹೆಚ್ಚುವರಿ ಆಯುಕ್ತರಾದ ಬಿ.ಎನ್.ವೀಣಾ ಬಿಡುಗಡೆ ಮಾಡಿ ಶುಭ ಹಾರೈಸುವರು.

ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸುವರು. ಕುಲಸಚಿವ ಪ್ರೊ. ಎಸ್.ಕೆ ನವೀನ್‌ಕುಮಾರ್ ಉಪಸ್ಥಿತರಿರುವರು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

ನಾಳೆ, ನಾಳಿದ್ದು ಕೆಎಸ್‌ಎ 7' ಎ ಹಾಕಿ ಪಂದ್ಯಾವಳಿ

ಮೈಸೂರು, ಏ.1(ವಿವಿಹೆಚ್)– ಕೊಡವ ಸ್ಟೂಡೆಂಟ್ ಅಸೋಷಿಯೇಷನ್ ಮೈಸೂರು ವತಿಯಿಂದ ಇದೇ ಏ.3 ಮತ್ತು 4 ರಂದು ಕೆಎಸ್‌ಎ 7'ಎ ಸೈಡ್ ಹಾಕಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ.

ಏ.3ರ ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಪಂದ್ಯಾವಳಿ ಉದ್ಘಾಟನಾ ಸಮಾರಂಭದಲ್ಲಿ ಏಕಲವ್ಯ ಪ್ರಶಸ್ತಿ ವಿಜೇತ ಅಂತಾರಾಷ್ಟ್ರೀಯ ಹಾಕಿ ಪಟು ಆಭರಣ್ ಸುದೇವ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಇವರೊಂದಿಗೆ ಕರ್ನಾಟಕ ರಾಜ್ಯ ರೈತ ಸಂಘದ ಕೊಡಗು ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ, ಅಂತಾರಾಷ್ಟ್ರೀಯ ಹಾಕಿ ಪಟು ಕೂತಂಡ ಪೂಣಚ್ಚ, ವಕೀಲ ಎಂ.ಯು.ಸುಬ್ಬಯ್ಯ, ಮೈಸೂರು ಕೊಡವ ಸಮಾಜದ ಅಧ್ಯಕ್ಷ ಪೊಂಜಂಡ ಗಣಪತಿ, ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್‌ನ ಉಪಾಧ್ಯಕ್ಷ ಮಾಚಂಡ ಪ್ರಕಾಶ್ ಬೆಳ್ಳಿಯಪ್ಪ, ಕೆಎಸ್‌ಎ ಸಲಹೆಗಾರ ಜಮ್ಮದ ಪಿ. ಗಣೇಶ್ ಅಯ್ಯಣ್ಣ, ಮೈಸೂರು ಕೆಎಸ್‌ಎ ಅಧ್ಯಕ್ಷ ನೆಲ್ಲಿರ ರವಿ ಕರಿಯಪ್ಪ ಉಪಸ್ಥಿತರಿರಲಿದ್ದಾರೆ. ಮಾ.4ರಂದು ಮಧ್ಯಾಹ್ನ 2 ಗಂಟೆಗೆ ಫೈನಲ್ಸ್ ಪಂದ್ಯಾವಳಿ ನಡೆಯಲಿದ್ದು, ಸಿಎಜಿ ಇಂಡಿಯಾದ ಗೋಲ್ ಕೀಪರ್ ಅಪ್ಪಂಡೆರಂಡ ಕೌಶಿಕ್ ಸುಬ್ರಮಣಿ, ಐಎ ಎಫ್‌ನ ಫ್ಲೈಯಿಂಗ್ ಆಫೀಸರ್ ಚೊಟ್ಟೆ ಕಲಪಂಡ ಕ್ಷಮಾ ಪೂಣಚ್ಚ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಜಾರಿಗೊಳಿಸುತ್ತಿರುವ 4 ಕಾರ್ಮಿಕ ಸಂಹಿತೆಗಳಿಗೆ ವಿರೋಧ

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ



ಮೈಸೂರಿನ ಗಾಂಧಿಚೌಕದಲ್ಲಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಕಾರ್ಮಿಕ ಸಂಹಿತೆ ವಿರೋಧಿಸಿ ಕಾರ್ಮಿಕ ಸಂಘಟನೆಗಳ ಮುಖಂಡರು ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರು,ಏ.1(ಎಂಟಿವೈ)– ಕೇಂದ್ರ ಸರ್ಕಾರ ಇಂದಿನಿಂದ ಜಾರಿಗೆ ತರುತ್ತಿರುವ 4 ಕಾರ್ಮಿಕ ಸಂಹಿತೆಗಳಲ್ಲಿ ಕಾರ್ಮಿಕರ ಹಕ್ಕುಭಾದ್ಯತೆಗಳನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ನೇತೃತ್ವದಲ್ಲಿ ವಿವಿಧ ಕಾರ್ಮಿಕ ಪರ ಸಂಘಟನೆಗಳ ವತಿಯಿಂದ ಬುಧವಾರ ಕರಾಳ ದಿನ ಆಚರಿಸಿ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿಚೌಕದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕಾರ್ಮಿಕ ಸಂಹಿತೆ ಕಾರ್ಮಿಕರಿಗೆ ಮರಣ ಶಾಸನವಾಗಿದೆ. ಈ ಹಿನ್ನೆಲೆಯಲ್ಲಿ ಕರಾಳ ದಿನಾಚರಣೆ ಆಯೋಜಿಸಲಾಗುತ್ತಿದೆ. ಕೇಂದ್ರ ಸರ್ಕಾರ, ಈ ದೇಶದಲ್ಲಿ ಸಂಪತ್ತು ಸೃಷ್ಟಿಸುವ ಕಾರ್ಮಿಕರನ್ನು ಸಂಪೂರ್ಣವಾಗಿ ಕಡೆಗಣಿಸಿ ಅವರನ್ನು ಮಾಲೀಕರ ಗುಲಾಮರನ್ನಾಗಿ ಮಾಡುವ ಮತ್ತು ಮಾಲೀಕರಿಗೆ ಪರಮಾಧಿಕಾರ ನೀಡುವ ಹುನ್ನಾರದ ಭಾಗವಾಗಿ ಜಾರಿಯಲ್ಲಿದ್ದ ಸುಮಾರು 29 ಕಾರ್ಮಿಕ ಪರ ಕಾಯ್ದೆ ರದ್ದುಪಡಿಸಿ ಹೊಸದಾಗಿ 4 ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ನಾಲ್ಕು ಸಂಹಿತೆಗಳ ಮೂಲಕ ಕಾರ್ಮಿಕರ ಮೇಲೆ ಪ್ರಹಾರ ಮಾಡಲು ಮಾಲೀಕರಿಗೆ ಅವಕಾಶ ಮಾಡಿಕೊಡಲಾಗಿದೆ. ಹಿಂದೆ 100ಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುವ ಕೈಗಾರಿಕೆ ಮುಚ್ಚಬೇಕಾದರೆ ಸರ್ಕಾರದ ಅನುಮತಿ ಅವಶ್ಯವಿತ್ತು. ಆದರೆ, ಇದನ್ನು 300ಕ್ಕೆ ಏರಿಸಿರುವುದರಿಂದ ರಾಜ್ಯದಲ್ಲಿ ಶೇ.75ರಷ್ಟು ಕೈಗಾರಿಕೆಗಳಲ್ಲಿ 300ಕ್ಕಿಂತ ಕಡಿಮೆ ಕಾಯಂ ಕಾರ್ಮಿಕರಿರುವುದರಿಂದ ಕೈಗಾರಿಕೋದ್ಯಮಿಗಳು ಯಾವಾಗ ಬೇಕಾದರೂ ಅವರು ಕೈಗಾರಿಕೆ ಮುಚ್ಚುವ ಅವಕಾಶ ದೊರೆಯಲಿದ್ದು, ಇದರಿಂದ ಕಾರ್ಮಿಕರ ಕೆಲಸದ ಭದ್ರತೆಗೆ ಧಕ್ಕೆ ಬರಲಿದೆ ಎಂದು ಆರೋಪಿಸಿದರು.

ಕಾರ್ಮಿಕ ಸಂಘಟನೆಗಳ ಮುಖಂಡರಾದ ಬಾಲಾಜಿ ರಾವ್, ಚಂದ್ರಶೇಖರ ಮೇಟಿ, ಜವರಯ್ಯ, ಎನ್.ಕೆ.ದೇವದಾಸ್, ಅಣ್ಣಪ್ಪ ಆನಂದರಾಜ್, ಹೆಚ್.ಬಿ.ರಾಮಕೃಷ್ಣ, ಜಯರಾಮು, ಉಗ್ರ ನರಸಿಂಹೇಗೌಡ, ಸಂಧ್ಯಾ ಹಾಗೂ ಇನ್ನಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನೃತ್ಯಗಾರನಿಗೆ ಯೋಗಾಭ್ಯಾಸ ಸಹಕಾರಿ



ಕಾರ್ಯಾಗಾರದಲ್ಲಿ ಕಥಕಳಿ ನೃತ್ಯಪಟು ಪ್ರಸೋಭ್ ಕಲಾಮಂಡಲಮ್ ಮಾತನಾಡುತ್ತಿರುವುದು.

ಮೈಸೂರು, ಏ.1(ಎಸ್‌ಪಿಎನ್)–ನೃತ್ಯದ ಹಾವ–ಭಾವಗಳನ್ನು ವೇದಿಕೆಯಲ್ಲಿ ಸುಲಭವಾಗಿ ಪ್ರದರ್ಶಿಸಲು ಅನುವಾಗುವಂತೆ ಕಲಾವಿದ ಯೋಗಾಭ್ಯಾಸ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕಥಕಳಿ ನೃತ್ಯಪಟು ಪ್ರಸೋಭ್ ಕಲಾಮಂಡಲಮ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ಶಾಲಾ ಆವರಣದ ಭಾರತೀಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯಲ್ಲಿ ರಾಜೀವ ಗಾಂಧಿ ಫೌಂಡೇಶನ್ ಏರ್ಪಡಿಸಿದ್ದ 'ರಸಗಳು ಮತ್ತು ಭಾವಗಳ' ಕುರಿತಾದ ಭಾವನೆಗಳ ಭಾಷೆ, ಭಾರತೀಯ ಸೌಂದರ್ಯ ಶಾಸ್ತ್ರದ ಮೂಲಕ ಸಾಕಾರಗೊಂಡ ಅಭಿವ್ಯಕ್ತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಭಾರತೀಯ ನಾಟ್ಯ ಪರಂಪರೆಯಲ್ಲಿ ನೃತ್ಯ, ಅಭಿನಯಕ್ಕೆ ಭರತಮುನಿ ನಾಟ್ಯ ಶಾಸ್ತ್ರವೇ ಮೂಲ ಬೇರು. ಈ ನಾಟ್ಯಶಾಸ್ತ್ರದಲ್ಲಿ ಆಂಗೀಕ ಅಭಿನಯ, ವೇಷಭೂಷಣ, ರಸಾನುಭವಗಳ ಕುರಿತು ಹೆಚ್ಚು ಉಲ್ಲೇಖವಿದೆ ಅಂತೆಯೇ ನೃತ್ಯ ಪ್ರದರ್ಶನದಲ್ಲಿ ಭಾವನೆಗಳ ಒಂದು ಅದ್ಭುತ ಲೋಕವನ್ನು ಕಲಾವಿದ ಸೃಷ್ಟಿಸಬಹುದು ಎಂದು ಕೆಲ ಘಟನಾವಳಿಗಳ ಮೂಲಕ ವಿವರಿಸಿದರು.

ಹಾಗಾಗಿ ನೃತ್ಯ ಕಲಿಕೆಯಲ್ಲಿ ಯೋಗ ಪ್ರಮುಖ ಪಾತ್ರ ವಹಿಸುತ್ತದೆ. ಯೋಗಾಭ್ಯಾಸ ನಿರತ ಕಲಾವಿದನಿಗೆ ನೃತ್ಯಾಭ್ಯಾಸ ಸರಾಗವಾಗಿರುತ್ತದೆ. ಇದರ ಜೊತೆಗೆ ಪ್ರಾಣಾಯಾಮ ಅಭ್ಯಾಸದಿಂದ ದೀರ್ಘಕಾಲಿಕ ಆಂಗೀಕ ಪ್ರದರ್ಶನ ನೀಡಲು ಸಾಧ್ಯ ಎಂದರು.

ಭರತಮುನಿಯ ನಾಟ್ಯಶಾಸ್ತ್ರದಲ್ಲಿ ಶಾಸ್ತ್ರೀಯ ನೃತ್ಯ, ಸಂಗೀತ, ನಾಟಕದ ಮೂಲ ಕೃತಿಯಾಗಿದೆ. 36 ಅಧ್ಯಾಯಗಳಿರುವ ಈ ಬೃಹತ್ ಕೃತಿಯು ಅಭಿನಯ, ರಸಸಿದ್ಧಾಂತ, ವೇದಿಕೆ ನಿರ್ಮಾಣ, ನೃತ್ಯ ಭಂಗಿಗಳು ಮತ್ತು ಸಂಗೀತಕ್ಕೆ ವಿವರವಾದ ಮಾರ್ಗದರ್ಶನ ನೀಡುತ್ತದೆ. ಇದು ನೃತ್ಯ ಮತ್ತು ಭಾವದ ರಾಗ, ತಾಳಗಳ ಸಮನ್ವಯತೆಯನ್ನು ಬೋಧಿಸುತ್ತವೆ ಎಂದು ಕೆಲ ಪ್ರಾಸಂಗಿಕ ಅಭಿನಯಗಳನ್ನು ಉಲ್ಲೇಖಿಸಿ ವಿವರಿಸಿದರು.

ರಸಗಳಲ್ಲಿ ಶೃಂಗಾರ, ಹಾಸ್ಯ, ಕರುಣ, ವೀರ, ರೌದ್ರ, ಬೀಭತ್ಸ, ಶಾಂತ ಸೇರಿದಂತೆ ರಸ ಸಿದ್ಧಾಂತ ಕುರಿತು ಉಲ್ಲೇಖವಿರುವುದನ್ನು ವಿವರಿಸಿದ ಅವರು, ನೃತ್ಯದಲ್ಲಿ ವಿಶೇಷ ಸನ್ನಿವೇಶಗಳನ್ನು ಸೃಷ್ಟಿಸುವ ಸಂದರ್ಭದಲ್ಲಿ ಹಾಡಿನ ಸನ್ನಿವೇಶ ಕುರಿತು ನೃತ್ಯದ ಹಾವ–ಭಾವಗಳ ಮೂಲಕ ಜನರಿಗೆ ತಿಳಿಯಪಡಿಸಬೇಕು. ಉದಾಹರಣೆಗೆ ಹನುಮಂತನ ಚಿತ್ರಣವನ್ನು ರಸಾನುಭವವಾಗುವಂತೆ ಅಭಿನಯಿಸಿ ಪ್ರೇಕ್ಷಕರಿಗೆ ತಿಳಿಯಪಡಿಸಬೇಕು ಎಂದರು.

ಜೂ.11 ರಿಂದ ಜಗತ್ತಿನಲ್ಲಿ ಫುಟ್‌ಬಾಲ್ ಜ್ವರ!

ಫಿಫಾ ವಿಶ್ವಕಪ್-2026 ವೇಳಾಪಟ್ಟಿ ಪ್ರಕಟ



ಫಿಫಾ ವಿಶ್ವಕಪ್ ಟ್ರೋಫಿ.

ಮೈಸೂರು, ಏ.1(ವಿವಿಹೆಚ್)– ಬಹುನಿರೀಕ್ಷಿತ ಫಿಫಾ ವಿಶ್ವಕಪ್ ಪಂದ್ಯಾವಳಿ 2026ಕ್ಕೆ ದಿನಗಣನೆ ಆರಂಭವಾಗಿದ್ದು, ಪಂದ್ಯಾವಳಿಯ ವೇಳಾಪಟ್ಟಿ ಬುಧವಾರ ಪ್ರಕಟಗೊಂಡಿದೆ.

ಫಿಫಾ ವಿಶ್ವಕಪ್ ಪಂದ್ಯಾವಳಿ ಜೂ.11 ರಿಂದ ಜು.19ರವರೆಗೆ ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾಗಳಲ್ಲಿ ನಡೆಯಲಿದ್ದು, ಈ ಬಾರಿ 48 ತಂಡಗಳು ಪ್ರಶಸ್ತಿಗಾಗಿ ಸೆಣಸಾಡಲಿವೆ. ಒಟ್ಟು 4 ತಂಡಗಳನ್ನು ಒಳಗೊಂಡ 12 ಗುಂಪುಗಳನ್ನು 'ಎ' ಯಿಂದ 'ಎಲ್' ವರೆಗೆ ವಿಂಗಡಿಸಲಾಗಿದೆ. ಜೂ.11ರಿಂದ 27ರವರೆಗೆ ಗುಂಪು ಹಂತದ ಪಂದ್ಯಗಳು, ಜೂ.29ರಿಂದ ಜು.4ರವರೆಗೆ 32ರ ಸುತ್ತಿನ ನಾಕೌಟ್ ಪಂದ್ಯಗಳು, ಜು.5ರಿಂದ 8ರವರೆಗೆ 16ರ ಸುತ್ತಿನ ಪಂದ್ಯಗಳು, ಕ್ವಾರ್ಟರ್ ಫೈನಲ್, ಸೆಮಿಫೈನಲ್ ಪಂದ್ಯಗಳು ಮುಗಿದ ಬಳಿಕ ಜು.19 ರಂದು ನ್ಯೂಜೆರ್ಸಿಯ ಮೆಟ್ ಲೈಫ್ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ ನಡೆಯಲಿದೆ. ವಿಶೇಷವೆಂದರೆ ಈ ಬಾರಿಯ ಪಂದ್ಯಾವಳಿಯಲ್ಲಿ 4 ಬಾರಿಯ ಫುಟ್‌ಬಾಲ್ ವಿಶ್ವಕಪ್ ಚಾಂಪಿಯನ್ ಬಲಿಷ್ಠ ಇಟಲಿ ಅರ್ಹತೆ ಪಡೆದಿಲ್ಲ.

ಇತ್ತ ಪೋರ್ಚುಗಲ್‌ನ ಕಿಂಗ್ ಎಂದೇ ಪ್ರಖ್ಯಾತಿಯಾಗಿರುವ ಕ್ರಿಶ್ಚಿಯಾನೋ ರೊನಾಲ್ಡೋ ಅವರು ಈ ಬಾರಿಯ ವಿಶ್ವಕಪ್ ಆಡಲಿದ್ದಾರೆ ಎಂದು ಹೇಳಲಾಗುತ್ತಿದೆ. ಮತ್ತೊಂದೆಡೆ ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡದ ನಾಯಕ ಲಿಯೋನೆಲ್ ಮೆಸ್ಸಿ ಅವರೂ ಕೂಡಾ ಈ ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದು, ಈ ಇಬ್ಬರು ಫುಟ್‌ಬಾಲ್ ಆಟಗಾರರ ಕೊನೆಯ ಟೂರ್ನಿ ಇದಾಗಿರಲಿದೆ ಎಂದು ಊಹಿಸಲಾಗಿದೆ. ಅರ್ಜೆಂಟೀನಾ 'ಜೆ' ಗುಂಪಿನಲ್ಲಿ ಸ್ಥಾನ ಪಡೆದಿದ್ದರೆ, ಪೋರ್ಚುಗಲ್ 'ಕೆ' ಗುಂಪಿನಲ್ಲಿದೆ.ಈ ಎರಡೂ ತಂಡದ ನಾಯಕ ಅಂತಿಮ ಮುಖಾಮುಖಿಗಾಗಿ ಇಡೀ ಫುಟ್‌ಬಾಲ್ ತಾರಾ ಬಳಗವೇ ಬಹಳ ಕಾತುರದಿಂದ ಕಾಯುತ್ತಿದೆ.

ಅರ್ಹತೆ ಪಡೆದ 48 ತಂಡಗಳು

ಗುಂಪು ಎ: ಮೆಕ್ಸಿಕೋ, ದಕ್ಷಿಣ ಆಫ್ರಿಕಾ, ದಕ್ಷಿಣ ಕೊರಿಯಾ, ಚೆಕ್ ಗಣರಾಜ್ಯ

ಗುಂಪು ಬಿ: ಕೆನಡಾ, ಬೋಸ್ನಿಯಾ ಮತ್ತು ಹರ್ಜೆಗೋವಿನಾ, ಕತಾರ್, ಸ್ವಿಟ್ಜರ್ಲೆಂಡ್.

ಗುಂಪು ಸಿ: ಬ್ರೆಜಿಲ್, ಮೊರಾಕ್ಕೊ, ಹೈಟಿ, ಸ್ಕಾಟ್ಲೆಂಡ್.

ಗುಂಪು ಡಿ: ಅಮೆರಿಕ, ಪರಾಗ್ವೆ, ಆಸ್ಟ್ರೇಲಿಯಾ, ಟರ್ಕಿ.

ಗುಂಪು ಇ: ಜರ್ಮನಿ, ಕುರಾಕೊ, ಐವರಿ ಕೋಸ್ಟ್, ಈಕ್ವೆಡಾರ್.

ಗುಂಪು ಎಫ್: ನೆದರ್ಲ್ಯಾಂಡ್ಸ್, ಜಪಾನ್, ಸ್ವೀಡನ್, ಟುನೀಶಿಯಾ.

ಗುಂಪು ಜಿ: ಬೆಲ್ಜಿಯಂ, ಈಜಿಪ್ಟ್, ಇರಾನ್, ನ್ಯೂಜಿಲೆಂಡ್.

ಗುಂಪು ಹೆಚ್: ಸ್ಪೇನ್, ಕೇಪ್ ವರ್ಡೆ, ಸೌದಿ ಅರೇಬಿಯಾ, ಉರುಗ್ವೆ

ಗುಂಪು ಐ: ಫ್ರಾನ್ಸ್, ಸೆನೆಗಲ್, ನಾರ್ವೆ, ಇರಾಕ್/ಬೊಲಿವಿಯಾ (ಪ್ಲೇ–ಆಫ್ ವಿಜೇತರು).

ಗುಂಪು ಜೆ: ಅರ್ಜೆಂಟೀನಾ, ಅಲ್ಜೀರಿಯಾ, ಆಸ್ಟ್ರಿಯಾ, ಜೋರ್ಡಾನ್.

ಗುಂಪು ಕೆ: ಪೋರ್ಚುಗಲ್, ಡಿಆರ್ ಕಾಂಗೋ, ಉಜ್ಬೇಕಿಸ್ತಾನ್, ಕೊಲಂಬಿಯಾ.

ಗುಂಪು ಎಲ್: ಇಂಗ್ಲೆಂಡ್, ಕ್ರೊಯೇಷಿಯಾ, ಘಾನಾ, ಪನಾಮ.

ಜನರಲ್ ತಿಮ್ಮಯ್ಯ 120ನೇ ಜನ್ಮ ದಿನಾಚರಣೆ



ಮೈಸೂರು ನಗರ ಜಿಲ್ಲಾ ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆಯ ಆಶ್ರಯದಲ್ಲಿ ಜನರಲ್ ತಿಮ್ಮಯ್ಯ ಅವರ 120ನೇ ಜನ್ಮ ದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಸಿಹಿ ವಿತರಿಸಲಾಯಿತು. ಈ ವೇಳೆ ಅಧ್ಯಕ್ಷ ಮಂಜುನಾಥ್, ಡಾ.ರಾಜ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಗೌಡ, ಮೋಹನ್ ಕುಮಾರ್, ಉಪಾಧ್ಯಕ್ಷ ಬಾಬು, ಯುವ ಮುಖಂಡ ಸಂತೋಷ್ ಗೌಡ, ಅಮೃತ್ ರಾವ್, ಮಾರ್ಗದರ್ಶಕ ರಂಗಪ್ಪ ಗೌಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಗೃಹಿಣಿ ಆತ್ಮಹತ್ಯೆ ; ಪತಿ, ಅತ್ತೆಗೆ ಜೈಲು ಶಿಕ್ಷೆ

ಮೈಸೂರು,ಏ.1(ಪಿಎಂ)– ಮಾನಸಿಕ ಕಿರುಕುಳದಿಂದ ಬೇಸತ್ತು ಗೃಹಿಣಿ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣರಾದ ಆಕೆಯ ಪತಿ ಮತ್ತು ಅತ್ತೆಗೆ 1 ವರ್ಷ ಸಾದಾ ಕಾರಾಗೃಹ ಶಿಕ್ಷೆ ಮತ್ತು ತಲಾ 10 ಸಾವಿರ ರೂ. ದಂಡ ವಿಧಿಸಿ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ಹುಣಸೂರು ತಾಲೂಕು ಕಾಳಬೂಚನಹಳ್ಳಿ ಗ್ರಾಮದ ಹೇಮಾ ಎಂಬ ಗೃಹಿಣಿಯ ಆತ್ಮಹತ್ಯೆ ಸಂಬಂಧ ಇದೇ ತಾಲೂಕು ಅಂಗಟಹಳ್ಳಿ ಗ್ರಾಮದ ಜಲೇಂದ್ರ ಮತ್ತು ಲಕ್ಷ್ಮಮ್ಮ ಶಿಕ್ಷೆಗೆ ಗುರಿಯಾದವರು.

ಹೇಮಾ ಅವರು ಅಂಗಟಹಳ್ಳಿ ಗ್ರಾಮದ ಜಲೇಂದ್ರ ಅವರನ್ನು ಮದುವೆಯಾಗಿದ್ದರು. ಈ ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದು, ಅವರಲ್ಲಿ ಒಬ್ಬನನ್ನು ಸಂಬಂಧಿಕರಿಗೆ ನೀಡಬೇಕೆಂದು ಪತಿ ಮತ್ತು ಆತನ ಕುಟುಂಬದವರು ಹೇಮಾ ಅವರಿಗೆ ಕಿರುಕುಳ ನೀಡುತ್ತಿದ್ದರು. ಇದರಿಂದ ಬೇಸತ್ತು ಹೇಮಾ ಅವರು 2020ರ ಜೂ.14ರಂದು ಮನೆಯಲ್ಲಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ ಆಸ್ಪತ್ರೆ ದಾಖಲಾಗಿದ್ದರು. ಕೊನೆಗೂ ಚಿಕಿತ್ಸೆ ಫಲಕಾರಿಯಾಗದೇ ಹೇಮಾ ಸಾವನ್ನಪ್ಪಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು, ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ನ್ಯಾಯಾಧೀಶರಾದ ಕೆ.ಎನ್.ರೂಪಾ ಅವರು, ಅಭಿಯೋಜನೆ ಪರ ಹಾಜರುಪಡಿಸಿದ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಆರೋಪಿತರ ಮೇಲಿನ ಆರೋಪ ರುಜುವಾತಾದ ಹಿನ್ನೆಲೆಯಲ್ಲಿ ಜಲೇಂದ್ರ ಮತ್ತು ಲಕ್ಷ್ಮಮ್ಮ ಅವರಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ದಂಡ ಪಾವತಿಸಲು ತಪ್ಪಿದಲ್ಲಿ ಮತ್ತೆ 3 ತಿಂಗಳ ಸಾದಾ ಶಿಕ್ಷೆ ವಿಧಿಸಿ ಆದೇಶ ನೀಡಲಾಗಿದೆ. ಸರ್ಕಾರಿ ಅಭಿಯೋಜಕರಾದ ಎ.ಎನ್.ಮಧು ವಾದ ಮಂಡಿಸಿದ್ದರು.

ಹಳೆಯ ಸೇತುವೆಯಲ್ಲಿ ಸಂಚಾರ ನಿರ್ಬಂಧ; ಹೊಸ ಸೇತುವೆಯಲ್ಲಿ ಸಾಗಲು ಸೂಚನೆ

ಮೈಸೂರು, ಏ.1– ನಂಜನಗೂಡು ಹಳೆಯ ಸೇತುವೆಯ ಪುನರ್ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಅಹಿತಕರ ಘಟನೆಗಳು ನಡೆಯದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ಮತ್ತು ಮೈಸೂರು ಜಿಲ್ಲೆ ಪೊಲೀಸ್ ಅಧೀಕ್ಷಕರ ವರದಿಗಳನ್ವಯ ಹಳೆಯ ಸೇತುವೆಯಲ್ಲಿ ಸಂಚಾರವನ್ನು ನಿರ್ಬಂಧಿಸಿದೆ.

ಸದರಿ ಮಾರ್ಗವನ್ನು ಬದಲಾಯಿಸಿ ಆದೇಶದ ದಿನಾಂಕದಿಂದ ಹಳೆಯ ಸೇತುವೆ ಪುನರ್ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವವರೆಗೂ ಅಥವಾ ಮುಂದಿನ ಆದೇಶದವರೆಗೆ ಹೊಸದಾಗಿ ನಿರ್ಮಿಸಲಾದ ಸೇತುವೆ ಮಾರ್ಗದಲ್ಲಿ ಸಂಚರಿಸಲು ಮೋಟಾರು ವಾಹನಗಳ ಕಾಯ್ದೆ 1988ರ 115ನೇ ಪ್ರಕರಣ ಹಾಗೂ ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 221 (ಎ)(5) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು ಮತ್ತು ಟೌನ್, ಗಾಳಿಪುರ ಬಡಾವಣೆ ಯಲ್ಲಿ ವಾಸವಾಗಿರುವ ಸೈಯದ್ ಇರ್ಷಾದ್ ರವರ ಮಗ ಶ್ರೀ ಸೈಯದ್ ಸುಫೀಯಾನ್ ಇವರ ಇರಾದೆ ಮೇರೆಗೆ ನಾವು ಈ ಸಾರ್ವಜನಿಕ ಪ್ರಕಟಣೆ ನೋಟಿಸನ್ನು ನೀಡುತ್ತಿದ್ದು ಸದರಿ ನೋಟಿಸಿನ ಕ್ರಮವೇನೆಂದರೆ,

ನಮ್ಮ ಕಕ್ಷೀದಾರರು ದಿನಾಂಕ: 10–03–2026 ರಂದು ಸಂಜೆ 06.30 ಗಂಟೆ ಸಮಯದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ತಮ್ಮ ಕ್ರಯಪತ್ರವನ್ನು ಕಳೆದು ಕೊಂಡಿರುತ್ತಾರೆ. ನಮ್ಮ ಕಕ್ಷೀದಾರರ ಆಸ್ತಿಗೆ ಸಂಭಂದಿಸಿದ ಕ್ರಯಪತ್ರದ ಸಂಖ್ಯೆ: 02108/2015–16 ಆಗಿರುತ್ತದೆ. ಸಾರ್ವಜನಿಕರಿಗೆ ಸಿಕ್ಕಿದ್ದಲ್ಲಿ ಈ ಮೇಲೆ ತಿಳಿಸಿರುವ ವಿಳಾಸಕ್ಕೆ ತಲುಪಿಸಲು ತಿಳಿಸಲಾಗಿದೆ ಹಾಗೂ ಕಳೆದು ಹೋಗಿರುವ ಕ್ರಯಪತ್ರದ ಬಗ್ಗೆ ದಿನಾಂಕ: 30–03–2026 ರಂದು ಪಟ್ಟಣ ಪೋಲೀಸ್ ಠಾಣೆಯಲ್ಲಿ ದೂರು ಸಹ ದಾಖಲಿಸಲಾಗಿದೆ. ದಾಖಲೆ ಪತ್ರಗಳನ್ನು ತಲುಪಿಸಿದವರಿಗೆ ಅವರ ಖರ್ಚನ್ನು ಭರಿಸಲಾಗುವುದು. ಅಥವಾ ಯಾವುದೇ ರೀತಿಯ ತಕರಾರು ಇದ್ದಲ್ಲಿ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಲಿಖಿತ ಮೂಲಕವಾಗಿ ತಿಳಿಸುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ಜಿಲ್ಲೆ ಮತ್ತು ಚಾಮರಾಜನಗರ ತಾಲ್ಲೂಕು, 2ನೇ ವಾರ್ಡ್, ಎ. ವಿಭಾಗ, ಸಿ.ವಿ.ಆರ್ ಲೇಔಟ್, ಗಾಳೀಪುರ ಬಡಾವಣೆಯ, ಸೈಟ್ ನಂ 44, ಅಸೆಸ್‌ಮೆಂಟ್ ಸಂಖ್ಯೆ: 439/438 (ಕ್ರಯಪತ್ರದ ಸಂಖ್ಯೆ: 02108/2015–16) ಇದರ ವಿಸ್ತೀರ್ಣ ಪೂರ್ವ – ಪಶ್ಚಿಮ 30 ಅಡಿ, ದಕ್ಷಿಣೋತ್ತರ 40 ಅಡಿ ಇದಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ : 45ನೇ ನಂಬರಿನ ನಿವೇಶನ, ಪಶ್ಚಿಮಕ್ಕೆ : 43ನೇ ನಂಬರಿನ ನಿವೇಶನ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : 56ನೇ ನಂಬರಿನ ನಿವೇಶನ.

ಸಹಿ/– ಸುಬ್ರಮಣ್ಯಂ, ಡಿಎಇ, ಬಿಕಾಂ, ಎಲ್‌ಎಲ್‌ಬಿ
ವಕೀಲರು ಶ್ರೀ ಜಯಂ ನಿವಾಸ, ನಂ.23/254, ಶಂಕರಪುರ 2ನೇ ಕ್ರಾಸ್, ಶ್ರೀರಾಮ್ ಲೇಔಟ್, ಚಾಮರಾಜನಗರ – 571313
ಮೊ.ನಂ. 9448243091
ಸ್ಥಳ: ಚಾಮರಾಜನಗರ ದಿ.: 31–03–2026

ಗೌರವಾನ್ವಿತ 6ನೇ ಅಪರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

O.S No: 1639/2025

ವಾದಿಗಳು : 1. ಶ್ರೀ ನವೀನ್ ಕುಮಾರ್ ಮತು ಇತರರು
ವಿರುದ್ಧ
ಪ್ರತಿವಾದಿಗಳು : 1. ಶ್ರೀ ಎಸ್. ರಾಮಸ್ವಾಮಿ ಮತ್ತು ಇತರರು

ಪತ್ರಿಕೆಯ ಪ್ರಕಟಣೆಯ ಮೂಲಕ ಪ್ರಕಟಿಸಲು ಪ್ರತಿವಾದಿ ಸಂಖ್ಯೆ 6,7,8 ಮತ್ತು 12 ಇವರಿಗೆ ಸಮನ್ಸ್ ಜಾರಿಗೆ:

1) ಪ್ರತಿವಾದಿ ಸಂಖ್ಯೆ 6. ಶ್ರೀ ನಾರಾಯಣ S/O ಲೇಟ್ ರಾಮಣ್ಣ #2514/1, ನ್ಯೂ ಕಾಂತರಾಜ ಅರಸ್ ರಸ್ತೆ ಕೆ.ಜಿ ಕೊಪ್ಪಲ್, ಮೈಸೂರು–570009, ಫೋನ್ : 8884543520. 2) ಪ್ರತಿವಾದಿ ಸಂಖ್ಯೆ 7. ಶ್ರೀ ಮಂಜುನಾಥ್ S/o ಲೇಟ್ ರಾಮಣ್ಣ #2514/1, ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ ಕೊಪ್ಪಲ್, ಮೈಸೂರು–570009, ಫೋನ್ : 9945047734. 3) ಪ್ರತಿವಾದಿ ಸಂಖ್ಯೆ 8. ಶ್ರೀ ಜಯರಾಮ್ S/o ಲೇಟ್ ರಾಮಣ್ಣ, #2514/1, ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ ಕೊಪ್ಪಲ್, ಮೈಸೂರು–570009, ಫೋನ್: 9620878485. 4) ಪ್ರತಿವಾದಿ ಸಂಖ್ಯೆ 12. , S/o ಎಸ್.ಗೋವಿಂದ ರಾಜು, #59, 4ನೇ ಕ್ರಾಸ್, ಶಂಕರ ಮಠ, ಅಗ್ರಹಾರ, ಕೆ.ಆರ್. ಮೊಹಲ್ಲಾ, ಮೈಸೂರು

ಮೇಲೆ ಹೆಸರಿಸಲಾದ ಅರ್ಜಿದಾರರಾದ ನವೀನ್ ಕುಮಾರ್ ಅವರು ತಮ್ಮ ತಾತ ಶ್ರೀನಿವಾಸಯ್ಯನವರು ಬರೆದಿರುವ ವಿಲ್ ಪ್ರಕಾರ ತಮಗೆ ಆಸ್ತಿ ಕೊಡಿಸಬೇಕು ಎಂದು ಕೋರಿದ್ದಾರೆ. ಮೊಕದ್ದಮೆಯ ವಿರುದ್ಧ ಕಾರಣ ತೋರಿಸಲು ಈ ಗೌರವಾನ್ವಿತ 6ನೇ ಅಪರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು, ಇವರ ಮುಂದೆ ವೈಯಕ್ತಿಕವಾಗಿ ಅಥವಾ ವಕೀಲರ ಮೂಲಕ ಹಾಜರಾಗಲು ನಿಮ್ಮನ್ನು, 02–05–2026 ರ ಬೆಳಗ್ಗೆ 11 ಗಂಟೆಗೆ ಇಲ್ಲಿ ಸಮನ್ ಮಾಡಲಾಗಿದೆ. ಇದರಲ್ಲಿ ವಿಫಲರಾದರೆ ಮೊಕದ್ದಮೆಯನ್ನು ವಿಚಾರಣೆ ಮಾಡಿ ಏಕಪಕ್ಷೀಯವಾಗಿ ನಿರ್ಧರಿಸಲಾಗುತ್ತದೆ.

1/4/2026ರ ಈ ದಿನದಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರು ಅಡಿಯಲ್ಲಿ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಮುಖ್ಯ ಲಿಪಿಕಾಧಿಕಾರಿ
6ನೇ ACJ ನ್ಯಾಯಾಲಯ, ಮೈಸೂರು

ಅರ್ಜಿದಾರರ ಪರ ವಕೀಲರು
ಸಹಿ/– ನವೀನ್ ಕುಮಾರ್
#2763/1, 1ನೇ ಕ್ರಾಸ್, ಕೆ.ಜಿ ಕೊಪ್ಪಲ್, ಮೈಸೂರು–570009. ಮೊ :9964886022

Recruitment
For the Post of Accounts Officer

Competent candidates having a minimum of 10 years of hands-on experience in managing statutory compliances, GST and Tally 9 EPR+.

The position asks for strong communication skills and proficiency in Financial Accounting. If you feel confident, you may please apply before 10th of April, 2026.

Attractive Salary and perquisites along with a conducive working environment are offered.

The Hon. Secretary
BHARATIYA VIDYA BHAVAN, MYSURU
CA-14, Hunsur Road, Vijayanagar 1st Stage,
Mysuru – 570017
Phone: 0821-2416106, 2412141
Email: bvbmysore@gmail.com



ಶಿವಗಣಾರಾಧನಾ ಆಹ್ವಾನ ಪತ್ರಿಕೆ

ಶ್ರೀ ಜೆ.ಎಂ ಸಿದ್ದಪ್ಪರವರು

ಇವರು ದಿನಾಂಕ: 24.03.2026 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ: 04.04.2026 ಶನಿವಾರ ಬೆಳಿಗ್ಗೆ 11.00 ಗಂಟೆಗೆ ಶ್ರೀ ॥ಮ ॥ನಿ ॥ಪ್ರ ॥ಸ್ವ॥ ಇಮ್ಮಡಿ ಸಿದ್ದಲಿಂಗಸ್ವಾಮಿಗಳು, ಶ್ರೀ ಗುರುಕಂಬಳೇಶ್ವರ ಮಠ, ಮಲ್ಲನ ಮೂಲೆ ಸುಕ್ಷೇತ್ರ ಇವರ ದಿವ್ಯವಾದ ಪೂಜೆಯೊಂದಿಗೆ ಹಾಗೂ ಹರಗುರು ಚರಮೂರ್ತಿಗಳ ದಿವ್ಯ ಸಮ್ಮುಖದಲ್ಲಿ ಶಿವಗಣಾರಾಧನೆಯನ್ನು ನಮ್ಮ ಸ್ವಗೃಹ ಜನ್ನೂರು ಗ್ರಾಮ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ. ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಇದನ್ನೇ ಆಹ್ವಾನ ಎಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ದುಃಖತಪ್ತರು: ಪತ್ನಿ :ಶ್ರೀಮತಿ ಸರ್ವಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಜನ್ನೂರು ಗ್ರಾಮಸ್ಥರು
ಶಿವ ಕಥೆ ರಾತ್ರಿ 10:00 ಗಂಟೆಗೆ ಬದನವಾಳು ಶ್ರೀ ಚಂದ್ರಶೇಖರ ಶಾಸ್ತ್ರಿ ಮತ್ತು ತಂಡದವರು.

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಯವರ ಕಾರ್ಯಾಲಯ.

ಚಾಮರಾಜನಗರ ಜಿಲ್ಲೆ, ಚಾಮರಾಜನಗರ. ದೂ ಸಂಖ್ಯೆ :08226–222831, ಕೊಠಡಿ ಸಂಖ್ಯೆ 127(ಎ) ಜಿಲ್ಲಾಡಳಿತ ಭವನ ಚಾಮರಾಜನಗರ–571313

ಸಂಖ್ಯೆ: ಚಾಜಿನಕೋ/ಬೀದಿ ದೀಪ/ಸಿ.ಸಿ.ಎಂ.ಎಸ್./ಸಿಆರ್/234/2025–26
e-mail: ka.chamarajanagara.dudc@gmail.com
website : www.chamarajanagaradudc.mrc.gov.in

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಚಾಮರಾಜನಗರ ಜಿಲ್ಲೆಯ 05 ನಗರ ಸ್ಥಳೀಯ ಸಂಸ್ಥೆಗಳ (ನಗರಸಭೆ, ಚಾಮರಾಜನಗರ ಮತ್ತು ಕೊಳ್ಳೇಗಾಲ, ಪುರಸಭೆ, ಗುಂಡ್ಲುಪೇಟೆ ಹಾಗೂ ಪಟ್ಟಣ ಪಂಚಾಯಿತಿ, ಯಳಂದೂರು ಮತ್ತು ಹನೂರು) ವ್ಯಾಪ್ತಿಯಲ್ಲಿ ಬೀದಿ ದೀಪಗಳ ವಿದ್ಯುತ್ ಬಳಕೆಯಲ್ಲಿ ಮಿತವ್ಯಯ ಸಾಧಿಸುವ ಸಂಬಂಧ ಸಾಂಪ್ರದಾಯಿಕ ವಿದ್ಯುತ್ ಬೀದಿ ದೀಪಗಳನ್ನು LED ಬೀದಿ ದೀಪಗಳಿಂದ ಬದಲಾಯಿಸಿ, ಹಾಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಳವಡಿಸಿರುವ LED ಬೀದಿ ದೀಪಗಳೂ ಸೇರಿರುವ ಎಲ್ಲಾ ಬೀದಿ ದೀಪಗಳ ನಿರ್ವಹಣೆಗಾಗಿ ಕೇಂದ್ರಿಕೃತ ನಿರ್ವಹಣೆ CCMS- Centralised Control and Monitoring System Companies Registration Act 1956ರಡಿ ನೋಂದಾಯಿಸಲ್ಪಟ್ಟ ಹಾಗೂ ಇನ್‌ಸ್ಪೆಕ್ಟರ್‌ನಲ್ಲಿ ಅರ್ಹ ಮತ್ತು ಆಸಕ್ತ ಬಿಡ್‌ದಾರರು/ನೋಂದಾಯಿತ ಸಂಸ್ಥೆಗಳಿಂದ ಕೆ.ಪಿ.ಪಿ ಪೋರ್ಟಲ್ ಪಿ.ಡಬ್ಲ್ಯೂ.ಡಿ/ಎಲೆಕ್ಟ್ರಿಕಲ್ (https://www.kppp.karnataka.gov.in) CONCESSIONAIRE ಅನ್ನು ನೇಮಿಸಲು ಆಹ್ವಾನಿಸಲಾಗಿದೆ. (ಟೆಂಡರ್‌ಗಿಟ್ಟ ಮೊತ್ತ ರೂ.22.93 ಕೋಟಿಗಳು. ಇ.ಎಂ.ಡಿ ಮೊತ್ತ ರೂ.22.93ಲಕ್ಷಗಳು) Tender Indent No. DMA/2025-26/SE5462/Call-2, Name of Work: Implementation of Energy Efficiency project for street lights by replacement of existing conventional lamps with LED lamps and establishment of Centralized Control with assured energy saving Monitoring System (CCMS) in Urban local Bodies of Chamarajanagar District through PPP MODULE 1) ದಾಖಲೆಗಳನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ದಿನಾಂಕ: 30.04.2026 ರ ಸಂಜೆ 5.00 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಳ್ಳಬಹುದು 2) ಪ್ರೀಬಿಡ್ ಮೀಟಿಂಗ್‌ನಲ್ಲಿ ಭಾಗವಹಿಸಲಿಚ್ಛಿಸುವವರು ದಿನಾಂಕ: 13.04.2026 ರಂದು ಬೆಳಿಗ್ಗೆ 11.00 ಗಂಟೆಗೆ ಕೊಠಡಿ ಸಂಖ್ಯೆ:127, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಭಾಗವಹಿಸುವುದು 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 30.04.2026ರ ಸಂಜೆ 5.30 ಗಂಟೆಯವರೆಗೆ ಮತ್ತು 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.05.2026 ರಂದು ಬೆಳಿಗ್ಗೆ 11.00 ಗಂಟೆಗೆ. ಆಸಕ್ತರು ಹೆಚ್ಚಿನ ಮಾಹಿತಿ ಬೇಕಾದಲ್ಲಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ ರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾಧಿಕಾರಿ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ಸಂ:ವಾಸಾಸಂಇ:ಚಾನಗರ:06:2026–27

PUBLIC NOTICE

My client has negotiated the terms and is doing due diligence before concluding the transaction of joint development/transfer in respect of schedule property hereto from its present Owners, **Mr. P. Govindaraju, son of Late. Perumal Gounder and his wife, Mrs. Jayalakshmi, both residing at Bengaluru.**

Hence, Any person/s, companies, Banks, Financial Institutions etc., asserting any right, title, interest or claim in the schedule property or any part thereof in any manner or having any claim/s against the schedule property or the documents thereof, or against the owners of the Schedule property by objecting to such sale in favour of my client should write to the undersigned within **TWENTY ONE DAYS** of the issuance of this public notice with all documentary proof on which they are basing and asserting their rights with regards to the schedule property or any part thereof, after which period my client shall thereafter complete the said transaction on the basis that there are no claims of whatsoever nature with regards to the schedule property.

SCHEDULE

All that piece and parcel of the immovable property in the form of residentially converted undeveloped land at Survey Nos. 138/4 & 138/5 (earlier being the part of Sy. No. 138/1) of Bhugatahali Village, Varuna Hobli, Mysuru Taluk, Mysuru, measuring 24.04 guntas each and totally measuring 1 Acre and 8.08 guntas and bounded on the

EAST BY : Land at Sy. No. 135
WEST BY : Road
NORTH BY : Land at Sy. No. 139
SOUTH BY : Land at Sy. No. 138/1.

J. BHASKAR REDDY, Advocate
No.106, "Savitri Nivas", Railway Parallel road, Kumara Park West, Bengaluru-560 020.
Phone: 98801 01301
E-mail: jbhasgarreddy76@gmail.com

ಮೈಸೂರು ಮಿತ್ರ – ವಾರ್ಷಿಕೋತ್ಸವ ವಿಶೇಷ ಸಂಚಿಕೆ

ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ "ಮೈಸೂರು ಮಿತ್ರ", ಏಪ್ರಿಲ್ 16, 2026ಕ್ಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2026 ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು:
9448525060 / 8073030835
ಜಾಯ್ ಆಂಥೋಣಿ ಡೋಲ್: 8951668960, ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು ಪ್ರಸಾದ್ ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871	**ಮಂಡ್ಯ** ಕೆ. ಮೋಹನ್‌ರಾಜ್ 8762960325	**ಶ್ರೀರಂಗಪಟ್ಟಣ** ವಿನಯ್ ಕಾರೇಕುರ ಶ್ರೀರಂಗಪಟ್ಟಣ 9686893234
ಹುಣಸೂರು ಕೆ. ಕೃಷ್ಣ (ಕೆ.ಕೆ.) EWS 204, KHB ಕಾಲೋನಿ, ಹುಣಸೂರು. 9448720626	**ಚಾಮರಾಜನಗರ** ಸಿದ್ದಲಿಂಗಸ್ವಾಮಿ ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657	**ಟಿ. ನರಸೀಪುರ** ಕುಮಾರ್ ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ ಸೋಮಶೇಖರ್ ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್,ಗುಂಡ್ಲುಪೇಟೆ. 9845995426	**ಕೆ.ಆರ್. ನಗರ** ಮಂಜುನಾಥ ವಾರ್ಡ್ ನಂ.17, ಕನಕನಗರ Extn. ಮೈಸೂರು ರಸ್ತೆ, ಕೆ.ಆರ್.ಟೌನ್ 9483084345	**ಮಳವಳ್ಳಿ** ಸರಸ್ವತಿ. ಬಿ ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806
ಹಾಸನ ಆರ್.ಎನ್.ಸೋಮೇಶ್‌ಗೌಡ ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 7019311936	**ಕುಶಾಲನಗರ** ರಘು ಮೈಸೂರು ಮಿತ್ರ ರಿಪೋರ್ಟರ್ ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401	**ಜಯಪುರ** ಬಿಳಿಗಿರಿ ಜಯಪುರ 9945479288
ಪಿರಿಯಾಪಟ್ಟಣ ವಿರೇಶ್ ಪಿರಿಯಾಪಟ್ಟಣ 8660057128	**ವಿರಾಜಪೇಟೆ** ಮಂಜುನಾಥ ವಿರಾಜಪೇಟೆ 9900949353	**ಯಳಂದೂರು** ವಿ.ನಾಗರಾಜು ಮೈತ್ರಿ, ಮೆಡಿಕಲ್ಸ್ ಬಳೆಪೇಟೆ, ಯಳಂದೂರು 9844349191
ಕೆ.ಆರ್.ಪೇಟೆ (ಶ್ರೀನಿವಾಸ) ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438	**ಹೆಚ್.ಡಿ.ಕೋಟೆ** ಮಂಜುನಾಥ ಎಸ್. ಹೆಚ್.ಡಿ.ಕೋಟೆ 9483574452	**ಕೆ.ಎಂ.ದೊಡ್ಡಿ** ಸತೀಶ್ ಎ.ಎಲ್ ಕೆ.ಎಂ.ದೊಡ್ಡಿ 9242120338
ಹುಣಸೂರು ರಘು ರಘು ಫೋಟೋ ವರ್ಕ್ಸ್ ಹುಣಸೂರು 9845590889	**ನಂಜನಗೂಡು** ರಂಗಸ್ವಾಮಿ ನಂ.4565, ಹಡ್ಕೊ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226	**ಕೊಳ್ಳೇಗಾಲ** ನಾಗೇಂದ್ರ ಸ್ವಾಮಿ ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849868

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.1, ಸಕಲೇಶಪುರ, ಹಾಸನ ಜಿಲ್ಲೆ. ದೂರವಾಣಿ ಸಂಖ್ಯೆ:08173–244454

ನೋಂದಾಯಿತಕಛೇರಿ ವಿಳಾಸ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೇಂಟ್ರಿ ರೋಡ್, ಬೆಂಗಳೂರು–560001
ಪೊ: 080–22289966/22256688, ಫ್ಯಾಕ್ಸ್: 080–22264477 ಇ–ಮೇಲ್: **mdvjnl@gmail.com**
ವೆಬ್‌ಸೈಟ್: **www.vjnl.in CIN No: U41000KA2016SGC097260**

ಸಂ:ಕಾಇಂ/ವಿಜನಿನಿ/ಎಯೋವಿ.1/ಸ/ಟೆಂಡರ್ ಪ್ರಕಟಣೆ/ TND-10/2025-26 ದಿನಾಂಕ:– 01/04/20266.02

ಶೇಕಡಾವಾರು ಟೆಂಡರ್ ಪ್ರಕಟಣೆ ಸಂಖ್ಯೆ : VJNL/EE/D1/SKP/FOREST/TND-10/2025-26/2024 Dated:- 25.03.2026 (Two Tender Document System) (ಕೆ.ಪಿ.ಪಿ ಪೋರ್ಟಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗದಡಿಯಲ್ಲಿ 01 ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ್ ಮೊತ್ತ ರೂ. 15.00 ಲಕ್ಷಗಳು (ಜಿ.ಎಸ್.ಟಿ. ಮೊತ್ತ ಹೊರತುಪಡಿಸಿ) ಇರುತ್ತದೆ. ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತ್ತಿರುತ್ತದೆ

ಕ್ರ.ಸಂ	ಟೆಂಡರ್ ಕಾಮಗಾರಿ ಕ್ರ.ಸಂ.	ಟೆಂಡರ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ	ಭರ್ತಿ ಮಾಡಿದ ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ (ಲಕೋಟೆ–1) ತೆರೆಯುವ ದಿನಾಂಕ
1	01	02.04.2026 ರಿಂದ 15.04.2026 ಸಂಜೆ 5.30 ರ ವರೆಗೆ	15.04.2026 ಸಂಜೆ 5.30 ರ ವರೆಗೆ	ದಿನಾಂಕ: 17.04.2026 ರವರೆಗೆ ಬೆಳಿಗ್ಗೆ 11.00 ಗಂಟೆಗೆ

ತಾಂತ್ರಿಕ ಬಿಡ್‌ನ್ನು ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.1, ಸಕಲೇಶಪುರ ಇಲ್ಲಿ ತೆರೆಯಲಾಗುವುದು ಮತ್ತು ತಾಂತ್ರಿಕ ಬಿಡ್‌ಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಪೂರ್ವಾರ್ಹತ ಷರತ್ತುಗಳು/ಇ.ಎಂ.ಡಿ ಮೊತ್ತ/ಬಿಡ್ಡುದಾರರ ಅರ್ಹತೆ/ಟೆಂಡರ್ ನಿಭಂಧನೆಗಳು/ಪೂರ್ವ ಬಿಡ್ ಸಭೆಯ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ದವಾಗಿರುವುದಿಲ್ಲ. ಯಾವುದೇ ಮಾರ್ಪಾಡುಗಳು ಅಥವಾ ತಿದ್ದುಪಡಿಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಈ ಕೆಳ ಸಹಿದಾರರಿಂದ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, https://kppp.karnataka.gov.in/#/portal/portal-home ರಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.1 ಸಕಲೇಶಪುರ.

ವಾಸಾಸಂಇ/ಹಿಸನಿ/ಹಾಸನ/04/ಕೆಎಸ್‌ಎಂಸಿಎ/2026–27